# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 22 ಬುಧವಾರ 2023

ಸಂಪುಟ: 43 | ಸಂಚಿಕೆ: 304 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




# ಜಡೆ ಜಗಳಕ್ಕೆ ಕಡಿವಾಣ ಹಾಕುವ ಯತ್ನ: ರೋಹಿಣಿ, ರೂಪಾ ವರ್ಗಾವಣೆ

● ರೂಪಾ ಪತಿ ಮುನೀಶ್ ಮೌದ್ಗಿಲ್ ಸಹ ಎತ್ತಂಗಡಿ ● ಇಬ್ಬರೂ ಮಹಿಳಾ ಅಧಿಕಾರಿಗಳಿಗೆ ಸ್ಥಳ ನಿಯೋಜನೆ ಇಲ್ಲ


ಬೆಂಗಳೂರು, ಫೆ.21 (ಕೆಎಂಶಿ)–ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ನಡುವೆ ಸಂಘರ್ಷ ತಾರಕಕ್ಕೇರಿದ ಬೆನ್ನಲ್ಲೇ ಅವರಿಗೆ ಹುದ್ದೆ ಸೂಚಿಸದೇ ಸರ್ಕಾರ ವರ್ಗಾವಣೆ ಮಾಡಿದೆ.

ಇಬ್ಬರು ಹಿರಿಯ ಅಧಿಕಾರಿಗಳ ಸಂಘರ್ಷ ತಾರಕಕ್ಕೇರಿದ ಹಿನ್ನೆಲೆಯಲ್ಲಿ ಎಚ್ಚೆತ್ತ ರಾಜ್ಯ ಸರ್ಕಾರ ಮುಖ್ಯಕಾರ್ಯದರ್ಶಿಯವರಿಂದ ವರದಿ ತರಿಸಿಕೊಂಡು ಇಬ್ಬರನ್ನೂ ವರ್ಗಾವಣೆ ಮಾಡಿದೆ. ರೂಪಾ ಅವರ ಪತಿ ಐಎಎಸ್ ಅಧಿಕಾರಿ ಮುನೀಶ್ ಮೌದ್ಗಿಲ್ ಅವರನ್ನು ಆಡಳಿತ ಸುಧಾರಣೆ ಮತ್ತು ಸಿಬ್ಬಂದಿ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಜೊತೆ ಸಿಂಧೂರಿ ಸಂಧಾನಕ್ಕೆ ಯತ್ನಿಸಿದ್ದಾರೆ ಎಂದು ಪ್ರಸ್ತಾಪಿಸಿದ್ದ ರೂಪಾ, ಕಳೆದ ಎರಡು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವಾಗ್ದಾಳಿ ನಡೆಸಿದ್ದರು. ನಂತರ ಇಬ್ಬರೂ ಅಧಿಕಾರಿಗಳು ಸವಾಲು, ಪ್ರತಿ ಸವಾಲು ಹಾಕಿಕೊಂಡು ಸರ್ಕಾರಕ್ಕೆ ಮುಜುಗರ ತಂದಿದ್ದರು. ಮುಖ್ಯಕಾರ್ಯದರ್ಶಿಯವರು ಈ ಅಧಿಕಾರಿಗಳಿಗೆ ನೋಟಿಸ್ ನೀಡಿ, ಹೇಳಿಕೆ ಪಡೆದು, ಎಚ್ಚರಿಕೆ ನೀಡಿದ ನಂತರವೂ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮಾಧ್ಯಮಗಳ ಮುಂದೆ ವಾಕ್ಸಮರ ಮುಂದುವರೆಸಿದ್ದರು.

ನಿನ್ನೆ ರಾತ್ರಿ ನಡೆದ ಸಂಪುಟ ಸಭೆಯಲ್ಲಿ ಅಧಿಕಾರಿಗಳ ವರ್ತನೆಯ ಬಗ್ಗೆ ಸಚಿವರು ಕೆಂಡಾಮಂಡಲವಾಗಿದ್ದಲ್ಲದೆ, ಅವರನ್ನು ಅಮಾನತು ಮಾಡಿ, ತಕ್ಷಣ ಕಾನೂನು ಕ್ರಮ ಜರುಗಿಸಬೇಕೆಂದು ಮುಖ್ಯಮಂತ್ರಿಯವರಿಗೆ ಒತ್ತಾಯಿಸಿದ್ದರು.

ಇದೇ ಸಂದರ್ಭದಲ್ಲಿ ಕೇಂದ್ರದ ಗೃಹ ಮಂತ್ರಾಲಯದಿಂದಲೂ ಮುಖ್ಯಕಾರ್ಯದರ್ಶಿಯವರಿಗೆ ಅಧಿಕಾರಿಗಳ ವರ್ತನೆಯ ಬಗ್ಗೆ ಆಕ್ಷೇಪ ವ್ಯಕ್ತ


ಡಿ.ರೂಪಾ ಮೌದ್ಗಿಲ್


ರೋಹಿಣಿ ಸಿಂಧೂರಿ


ಮುನೀಶ್ ಮೌದ್ಗಿಲ್

ವಾಗಿತ್ತು. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡ ಮುಖ್ಯಮಂತ್ರಿಯವರು ನೋಟಿಸ್‌ಗೆ ಪೂರ್ಣ ವಿವರ ಬರುವವರೆಗೂ ಅವರಿಗೆ ಯಾವುದೇ ಹುದ್ದೆ ನೀಡದೇ ವರ್ಗಾವಣೆ ಮಾಡುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸಭೆಯಲ್ಲೇ ಆದೇಶ ಮಾಡಿದ್ದರು. ಮುಖ್ಯಮಂತ್ರಿಯವರ ಆದೇಶದಂತೆ ಇಂದು ಐವರು ಹಿರಿಯ ಅಧಿಕಾರಿಗಳನ್ನು ವರ್ಗಾವರ್ಗಿ ಮಾಡಿದ್ದು, ಅದರಲ್ಲಿ ಈ ಇಬ್ಬರಿಗೆ ಯಾವುದೇ ಹುದ್ದೆ ತೋರಿಸಿಲ್ಲ.

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾಗಿದ್ದ ರೋಹಿಣಿ ಸಿಂಧೂರಿ ಅವರ ಜಾಗಕ್ಕೆ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಮತ್ತು ಉದ್ಯಮಶೀಲತೆ ವಿಭಾಗದ ಜಂಟಿ ಕಾರ್ಯದರ್ಶಿಯಾಗಿದ್ದ ಹೆಚ್.ಬಸವರಾಜೇಂದ್ರ ಅವರನ್ನು ನೇಮಕ ಮಾಡಲಾಗಿದೆ. ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಡಿ.ರೂಪಾ ಅವರ ಜಾಗಕ್ಕೆ ಹುದ್ದೆಯ ನಿರೀಕ್ಷೆಯಲ್ಲಿದ್ದ ಡಿ.ಭಾರತಿ ಅವರನ್ನು ನೇಮಕ ಮಾಡಲಾಗಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಸೂಕ್ತ ಸಮಯದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಅರಿವು ಸರ್ಕಾರಕ್ಕಿದೆ. ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಮುಖ್ಯ ಕಾರ್ಯದರ್ಶಿಗಳು ಅಧಿಕಾರಿಗಳಿಗೆ ಲಿಖಿತವಾದ ನಿರ್ದೇಶನಗಳನ್ನು ನೀಡಿದ್ದಾರೆ. ನಿನ್ನೆ ಖುದ್ದಾಗಿ ಅಧಿಕಾರಿಗಳೊಂದಿಗೆ ಸಮಾಲೋಚಿಸಿದ್ದಾರೆ.

ಅಧಿಕಾರಿಗಳ ನೀತಿ ಸಂಹಿತೆಯ ಪ್ರಕಾರ ಅಧಿಕಾರಿಗಳ ನಡವಳಿಕೆ ಹಾಗೂ ಅದರಂತೆ ನಡೆದುಕೊಳ್ಳದಿದ್ದಾಗ ಅಧಿಕಾರಿಗಳ ವಿರುದ್ಧ ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮಗಳನ್ನು ಮುಖ್ಯ ಕಾರ್ಯದರ್ಶಿಗಳು ತೆಗೆದುಕೊಳ್ಳಲಿದ್ದಾರೆ ಎಂದರು.

## ಜನರಿಗೆ ಉಪಟಳ ನೀಡುವ ಚಿರತೆ ಸೆರೆಗೆ ಎಲ್ಲಾ ಕ್ರಮ

### ಅವುಗಳ ಕೊಲ್ಲಲು ಅವಕಾಶ ವಿಲ್ಲ; ಸೆರೆ ಹಿಡಿದು ಅಭಯಾರಣ್ಯಕ್ಕೆ ಬಿಡಲು ನಿರ್ಧಾರ

ಬೆಂಗಳೂರು, ಫೆ.21 (ಕೆಎಂಶಿ)–



ಇತ್ತೀಚೆಗೆ ಹೆಚ್ಚುತ್ತಿರುವ ಚಿರತೆಗಳನ್ನು ಸೆರೆ ಹಿಡಿದು ಅಭಯಾರಣ್ಯಗಳಿಗೆ ಸ್ಥಳಾಂತರ ಮಾಡಲು ರಾಜ್ಯ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ಕಾನೂನು ಸಚಿವ ಮಾಧುಸ್ವಾಮಿ ವಿಧಾನಸಭೆಗೆ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ರವೀಂದ್ರ ಶ್ರೀಕಂಠಯ್ಯ ಅವರ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಪರವಾಗಿ ಉತ್ತರಿಸಿದ ಸಚಿವರು, ದಾಳಿ ಮಾಡುತ್ತವೆ ಎಂಬ ಕಾರಣಕ್ಕೆ ಚಿರತೆ ಕೊಲ್ಲಲು ಅವಕಾಶವಿಲ್ಲ. ಎಲ್ಲೆಲ್ಲಿ ಕಾಡು

▶ 8ನೇ ಪುಟಕ್ಕೆ

## ಕಾಡ್ಗಿಚ್ಚಿನಲ್ಲಿ ಸಾವಿಗೀಡಾದ ಅರಣ್ಯ ಸಿಬ್ಬಂದಿ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ

ಬೆಂಗಳೂರು, ಫೆ.21 (ಕೆಎಂಶಿ)– ಸಕಲೇಶಪುರ ಅರಣ್ಯದಲ್ಲಿ ಸಂಭವಿಸಿದ ಕಾಡ್ಗಿಚ್ಚಿನಿಂದಾಗಿ ಮೃತಪಟ್ಟಿರುವ ಅರಣ್ಯ ಸಿಬ್ಬಂದಿ ಸುಂದರೇಶ್ ಅವರ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಲಾಗಿದೆ ಹಾಗೂ ಮೃತರ ಪತ್ನಿಗೆ ಸರ್ಕಾರಿ ಕೆಲಸ ನೀಡಲಾಗುವುದು ಎಂದು ಕಾನೂನು ಸಚಿವ ಮಾಧುಸ್ವಾಮಿ ವಿಧಾನ ಸಭೆಯಲ್ಲಿಂದು ಭರವಸೆ ನೀಡಿದರು. ಶೂನ್ಯವೇಳೆಯಲ್ಲಿ ಹೆಚ್.ಕೆ.ಕುಮಾರಸ್ವಾಮಿ ಮಾಡಿದ ಪ್ರಸ್ತಾಪಕ್ಕೆ ಸ್ಪಂದಿಸಿದ ಸಚಿವರು, ಸಂಕಷ್ಟಕ್ಕೀಡಾಗಿರುವ ಕಾಡ್ಗಿಚ್ಚಿನಿಂದ ಮೃತಪಟ್ಟ ಸುಂದರೇಶ್ ಕುಟುಂಬದ ಬೆಂಬಲಕ್ಕೆ ಸರ್ಕಾರ ನಿಂತಿದೆ. ಕಾಡಿನ ಬೆಂಕಿ ಅವಘಡಗಳಲ್ಲಿ ಮೃತಪಟ್ಟವರಿಗೆ ನೀಡುತ್ತಿದ್ದ 30 ಲಕ್ಷ ರೂ. ಪರಿಹಾರದ ಬದಲಿಗೆ 50 ಲಕ್ಷ ರೂ. ನೀಡಲಾಗಿದೆ ಎಂದರು. ಕಾಡ್ಗಿಚ್ಚಿನಲ್ಲಿ ಗಾಯಗೊಂಡ ಮತ್ತೊಬ್ಬರಿಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ ಎಂದರು.

# ಕಾಂಗ್ರೆಸ್‌ನ 130 ಅಭ್ಯರ್ಥಿಗಳ ಪ್ರಚಾರಕ್ಕೆ ಹಸಿರು ನಿಶಾನೆ

● ಹೆಚ್ಚು ಆಕಾಂಕ್ಷಿಗಳಿಲ್ಲದ ಕ್ಷೇತ್ರಗಳ ಸಂಬಂಧ ನಿರ್ಧಾರ
● ಅರಸೀಕೆರೆಯಲ್ಲಿ ಶಿವಲಿಂಗೇಗೌಡರಿಗೆ ಟಿಕೆಟ್ ಖಾತರಿ



**ಬೆಂಗಳೂರು, ಫೆ.21 (ಕೆಎಂಶಿ)– ವಿಧಾನ ಸಭೆಯ ಹಾಲಿ 65 ಶಾಸಕರು ಸೇರಿದಂತೆ 130 ಅಭ್ಯರ್ಥಿಗಳಿಗೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಚಾರದ ಕಾರ್ಯ ನಡೆಸಿ ಎಂದು ಕಾಂಗ್ರೆಸ್ ಹಸಿರು ನಿಶಾನೆ ತೋರಿದೆ.**

ಬರುವ ಮೇ ತಿಂಗಳಲ್ಲಿ ರಾಜ್ಯ ವಿಧಾನ ಸಭೆಯ 224 ಕ್ಷೇತ್ರಗಳಿಗೆ ಚುನಾವಣೆ ಜರುಗಲಿದ್ದು, ಈ ಸಂಬಂಧ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ನಿನ್ನೆ ರಾತ್ರಿ ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಿವಾಸದಲ್ಲಿ ನಡೆದ ಮಹತ್ವದ ಸಭೆಯಲ್ಲಿ 130 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದಾರೆ. ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿವಾದವಲ್ಲದ ಕ್ಷೇತ್ರಗಳ ಬಗ್ಗೆ ಸಮಾಲೋಚನೆ ನಡೆಸಿ, ಅಂತಿಮವಾಗಿ ಈ ತೀರ್ಮಾನ ಕೈಗೊಂಡಿದ್ದಾರೆ.


ಸುರ್ಜೇವಾಲ

ಅಭ್ಯರ್ಥಿಗಳಿಗೆ ಹಸಿರು ನಿಶಾನೆ ನೀಡುವುದಕ್ಕೂ ಮುನ್ನ ಚುನಾವಣಾ ಪೂರ್ವ ಸಮೀಕ್ಷೆಗಳ ವರದಿ, ಹಾಗೂ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಗೆ ನೇಮಿಸಿದ ಉನ್ನತ ಮಟ್ಟದ ಸಮಿತಿ ನೀಡಿದ ವರದಿ ಆಧರಿಸಿ, ನಾಯಕರು ಈ ತೀರ್ಮಾನ ಕೈಗೊಂಡಿದ್ದಾರೆ. ಆಯ್ಕೆಯಾಗಿರುವ ಈ ಕ್ಷೇತ್ರಗಳಲ್ಲಿ ಒಂದಕ್ಕಿಂತ ಹೆಚ್ಚು ಆಕಾಂಕ್ಷಿಗಳಿಲ್ಲ. ಆಕಾಂಕ್ಷಿಗಳಿದ್ದರೂ, ಸಮೀಕ್ಷಾ ವರದಿಯನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿ ಆಯ್ಕೆ ಮಾಡಲಾಗಿದೆ ಹಾಲಿ 65 ಶಾಸಕರ ಜೊತೆಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ಪಮತದಿಂದ ಪರಾಭವಗೊಂಡವರು ಹಾಗೂ ಅನ್ಯ ಪಕ್ಷಗಳಿಂದ ಇತ್ತೀಚೆಗೆ ಕಾಂಗ್ರೆಸ್ ಸೇರಿದ ಮತ್ತು ಸೇರಲಿರುವ ಮುಖಂಡರುಗಳಿಗೂ ಮೊದಲ ಪಟ್ಟಿಯಲ್ಲೇ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಲ್ಲಿ ಜೆಡಿಎಸ್‌ನ ಸದಸ್ಯ ಶಿವಲಿಂಗೇ ಗೌಡರಿಗೆ ಅರಸೀಕೆರೆಯಲ್ಲಿ ಸ್ಪರ್ಧಿಸಲು ಪಕ್ಷ ಅನುವು ಮಾಡಿಕೊಟ್ಟಿದೆ. ಕಳೆದ ಎರಡು ತಿಂಗಳಿನಿಂದ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಪ್ರದೇಶ ಕಾಂಗ್ರೆಸ್‌ನಲ್ಲಿ ಹಲವು ಮಟ್ಟದ ಕಸರತ್ತು ನಡೆಸಿದ ನಂತರ ಅಂತಿಮವಾಗಿ ರಣದೀಪ್‌ಸಿಂಗ್ ಸುರ್ಜೇವಾಲ ಅವರ ಸಮ್ಮುಖದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ 130 ಕ್ಷೇತ್ರಗಳಿಗೆ ಒಮ್ಮತದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ.

ಎಐಸಿಸಿಯಲ್ಲಿ ಇನ್ನೂ ಚುನಾವಣಾ ಸಮಿತಿಯೇ ನೇಮಕವಾಗಿಲ್ಲ. ಆ ಚುನಾವಣಾ ಸಮಿತಿ ಅಸ್ತಿತ್ವಕ್ಕೆ ಬಂದು ನಂತರ ಸಭೆ ಸೇರಿ, ಕರ್ನಾಟಕ ವಿಧಾನಸಭೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಆಯ್ಕೆ ಮಾಡಬೇಕಾಗುತ್ತದೆ. ಇದು ವಿಳಂಬವಾಗುವುದರಿಂದ ವಿವಾದವಲ್ಲದ ಈ ಕ್ಷೇತ್ರಗಳಿಗೆ ಉಸ್ತುವಾರಿಯವರೇ ಜವಾಬ್ದಾರಿ ತೆಗೆದುಕೊಂಡು ಚುನಾವಣೆಗೆ ಸಿದ್ಧರಾಗಿ ಎಂದು ಸಂಭಾವ್ಯ ಅಭ್ಯರ್ಥಿಗಳಿಗೆ ಸಂದೇಶ ಮುಟ್ಟಿಸಿದ್ದಾರೆ.

ಅವರೇ ಖುದ್ದಾಗಿ ಕೆಲವು ಅಭ್ಯರ್ಥಿಗಳಿಗೆ ಸಂಪರ್ಕ ತೆಗೆದುಕೊಂಡು ಚರ್ಚೆ ಮಾಡಿದ್ದಲ್ಲದೆ, ಹೇಗೆ ಚುನಾವಣೆ ನಡೆಸಬೇಕೆಂದು ಮಾಹಿತಿ ನೀಡಿದ್ದಲ್ಲದೆ, ಸ್ಥಳೀಯ ವಾತಾವರಣದ ಬಗ್ಗೆಯು ಮಾಹಿತಿ ಕಲೆ ಹಾಕಿದ್ದಾರೆ.

## ಮಹಿಳಾ ಕಾರ್ಮಿಕರು, ವಿದ್ಯಾರ್ಥಿನಿಯರಿಗೆ ಏ.1ರಿಂದ ಉಚಿತ ಬಸ್‌ಪಾಸ್ ವ್ಯವಸ್ಥೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ
● ಅತ್ಯಾಧುನಿಕ ಐಷಾರಾಮಿ 'ಅಂಬಾರಿ ಉತ್ಸವ್'ಗೆ ಚಾಲನೆ



ಬೆಂಗಳೂರು, ಫೆ.21 (ಕೆಎಂಶಿ)–ಏಪ್ರಿಲ್ 1ರಿಂದ ದುಡಿಯುವ ಹೆಣ್ಣು ಮಕ್ಕಳು ಹಾಗೂ ಶಾಲಾ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ವ್ಯವಸ್ಥೆ ಕಲ್ಪಿಸಲು ಎಲ್ಲ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು. ಅವರು ಇಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವೋಲ್ವೋ ಮಲ್ಟಿ ಆಕ್ಸೆಲ್ ಬಿಎಸ್4 –9600 ಸ್ಲೀಪರ್ ಬಸ್ಸುಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು. ಮಹಿಳೆಯರಿಗೆ ಗೌರವದ ಜೊತೆಗೆ ಆರ್ಥಿಕವಾಗಿ ಸ್ವಾವಲಂಬಿಯಾಗಲು ಈ ಯೋಜನೆ ರೂಪಿಸಲಾಗಿದೆ. ಮಿನಿ ಸ್ಕೂಲ್ ಬಸ್‌ಗಳನ್ನು ಪರಿಚಯಿಸಬೇಕು. ಇರುವ ಬಸ್‌ಗಳ ಸಂಚಾರ ಆರಂಭ ಮಾಡಬೇಕು. ಶಾಲೆ ಆರಂಭವಾಗುವ ಸಂದರ್ಭದಲ್ಲಿ ಪ್ರತಿ ತಾಲೂಕಿನಲ್ಲಿ ಕನಿಷ್ಟ ಐದು ಬಸ್ ಸಂಚಾರ ಆರಂಭ ಮಾಡಬೇಕು. ಅಗತ್ಯ ಬಿದ್ದರೆ ಇನ್ನಷ್ಟು ಅನುದಾನ

▶ 8ನೇ ಪುಟಕ್ಕೆ



ಮೈಸೂರು ವಿವಿ ಪ್ರಭಾರ ಕುಲಪತಿ ಡಾ.ಮುಜಾಫರ್ ಹೆಚ್.ಅಸ್ಸಾದಿ ಸಮ್ಮುಖದಲ್ಲಿ ಒಡಂಬಡಿಕೆ ನೆರವೇರಿತು. ಕುಲಸಚಿವೆ ವಿ.ಆರ್.ಶೈಲಜಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ವಿವಿ ಎಸ್ಟೇಟ್ ಆಫೀಸರ್ ಡಾ.ಎಸ್.ಸಿ.ಜಯರಾಮು, ಜಾನಪದ ವಸ್ತು ಸಂಗ್ರಹಾಲಯದ ನಿರ್ದೇಶಕಿ ಪ್ರೊ.ವಿಜಯಕುಮಾರಿ ಕರಿಕಲ್ ಉಪಸ್ಥಿತರಿದ್ದರು.

### ಸಂಸದ ಪ್ರತಾಪ್ ಸಿಂಹ ಪ್ರಯತ್ನದ ಫಲಶ್ರುತಿ

## ಕೊನೆಗೂ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ 'ಜಯಲಕ್ಷ್ಮಿ ವಿಲಾಸ ಅರಮನೆ' ಆಶ್ರಯ

### ಮೈಸೂರು ವಿವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆ



ಮೈಸೂರು, ಫೆ.21(ಎಸ್‌ಬಿಡಿ)– ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರಕ್ಕಾಗಿ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡ ಬಳಸಿಕೊಳ್ಳುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆಯಾಗಿದೆ. ಕನ್ನಡ ಭಾಷೆಯ ಅತ್ಯುನ್ನತ ಅಧ್ಯಯನ ಕೇಂದ್ರದ ಸ್ಥಾಪನೆಗೆ ನೆರವಾಗುವ ನಿಟ್ಟಿನಲ್ಲಿ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡ ಬಳಸಿಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ವಿವಿ ನಡುವೆ ಮಂಗಳವಾರ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಮಾಹಿತಿ ನೀಡಿದ್ದಾರೆ. ಮೈಸೂರು ವಿವಿ ಪ್ರಭಾರ ಕುಲಪತಿ ಡಾ.ಮುಜಾಫರ್ ಹೆಚ್.ಅಸ್ಸಾದಿ ಸಮ್ಮುಖದಲ್ಲಿ ಕುಲಸಚಿವೆ ವಿ.ಆರ್.ಶೈಲಜಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಒಡಂಬಡಿಕೆಗೆ ಸಹಿ ಹಾಕಿದರು. ಇದಕ್ಕೆ ಮೈಸೂರು ವಿವಿ ಎಸ್ಟೇಟ್ ಆಫೀಸರ್ ಡಾ.ಎಸ್.ಸಿ.ಜಯರಾಮು ಹಾಗೂ ಜಾನಪದ ವಸ್ತು ಸಂಗ್ರಹಾಲಯದ ನಿರ್ದೇಶಕರೂ ಆಗಿರುವ ಕುವೆಂಪು ಕನ್ನಡ

▶ 8ನೇ ಪುಟಕ್ಕೆ




# ಮಾದಪ್ಪನ ಬೆಟ್ಟದಲ್ಲಿ ಭಕ್ತಿಭಾವದ ಶಿವರಾತ್ರಿ ರಥೋತ್ಸವ

● ಎಲ್ಲೆಡೆ ಮೊಳಗಿದ ಉಘೇ... ಉಘೇ ಮಾದಪ್ಪ ಜಯಘೋಷ ● ರಾಜ್ಯದ ನಾನಾ ಮೂಲಗಳಿಂದ ಲಕ್ಷಾಂತರ ಭಕ್ತ ಸಮೂಹ ಸಂಗಮ

ಹನೂರು, ಫೆ.21–ಲಕ್ಷಾಂತರ ಭಕ್ತಾದಿಗಳ ಸಮ್ಮುಖದಲ್ಲಿ ಮಲೆ ಮಹದೇಶ್ವರನ ಶಿವರಾತ್ರಿ ಮಹಾರಥೋತ್ಸವ ಅದ್ದೂರಿಯಾಗಿ ಮಂಗಳವಾರ ಬೆಳಗಿನ ಶುಭ ವೇಳೆಯಲ್ಲಿ ಬೇಡಗಂಪಣ ಅರ್ಚಕರು, ಲಕ್ಷಾಂತರ ಮಂದಿ ಭಕ್ತರ ಸಮ್ಮುಖದಲ್ಲಿ ನಡೆಯಿತು.

ಮಹಾರಥೋತ್ಸವದ ಅಂಗವಾಗಿ ತೇರನ್ನು ವಿವಿಧ ಪುಷ್ಪ, ತಳಿರು–ತೋರಣ ಹಾಗೂ ಬಣ್ಣಬಣ್ಣದ ಬಟ್ಟೆಗಳಿಂದ ಸಿಂಗಾರಿಸಲಾಗಿತ್ತು ಬೇಡಗಂಪಣ ಅರ್ಚಕ ವೃಂದದವರು ದೇಗುಲದ ಗರ್ಭಗುಡಿಯಲ್ಲಿ ಸ್ವಾಮಿಗೆ ವಿಶೇಷ ಪೂಜೆಯನ್ನು ಸಲ್ಲಿಸಿದರು. ಬಳಿಕ ಬಿಳಿ ಆನೆ ಉತ್ಸವವನ್ನು ನೆರವೇರಿಸಲಾಯಿತಲ್ಲದೇ ಗರ್ಭಗುಡಿಯ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ನಂತರ ತೇರಿನ ಬಳಿ ತೆರಳಿ ಅರ್ಧಗಂಟೆ ಧಾರ್ಮಿಕ ವಿಧಿವಿಧಾನಗೊಂದಿಗೆ ಪೂಜೆ ಕೈಂಕರ್ಯ ನಡೆಸಿ, ಸ್ವಾಮಿಯ ವಿಗ್ರಹಮೂರ್ತಿಯನ್ನು ತೇರಿನಲ್ಲಿ ಬೂದು ಕುಂಬಳ ಕಾಯಿಯಿಂದ ದೃಷ್ಟಿ ತೆಗೆಯಲಾಯಿತು. ಬಳಿಕ ಮಹಾಮಂಗಳಾರತಿ ಹಾಗೂ ಬೇಡಗಂಪಣರ 108 ಹೆಣ್ಣು ಮಕ್ಕಳು ಬೆಲ್ಲದ ಆರತಿ ಬೆಳಗಿದ ನಂತರ ಮಹಾ ರಥೋತ್ಸವಕ್ಕೆ ಚಾಲನೆ



ನೀಡಲಾಯಿತು. ಬಳಿಕ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ದೇಗುಲದ ಮುಖ್ಯದ್ವಾರದ ಆವರಣದಿಂದ ಸತ್ತಿಗೆ, ಸೂರಿಪಾನಿ, ಛತ್ರಿ, ಚಾಮರ, ನಂದಿಧ್ವಜ ಹಾಗೂ ಮಂಗಳವಾದ್ಯದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಇದೇ ವೇಳೆ ಹುಲಿವಾಹನ, ಬಸವ ವಾಹನ ಹಾಗೂ ರುದ್ರಾಕ್ಷಿವಾಹನದ ಉತ್ಸವವನ್ನು ನೆರವೇರಿಸಲಾಯಿತು. ಈ ವೇಳೆ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು ಬೆಲ್ಲದ ಆರತಿ ಹಿಡಿದು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ವೀರ ಗಾಸೆ ಕುಣಿತ ಭಕ್ತರ ಗಮನ ಸೆಳೆಯಿತು. ರಥೋತ್ಸವದಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹಣ್ಣು, ದವನ, ಧನ, ಧಾನ್ಯ ಎಸೆದು ನಮಿಸುವುದರ ಮೂಲಕ ಮಾದಪ್ಪನ ಕೃಪೆಗೆ ಪಾತ್ರರಾದರು.

**ಉಘೇ ಮಾದಪ್ಪ ಉಘೇ:** ರಥೋತ್ಸವದಲ್ಲಿ ತಮಿಳುನಾಡು ಸೇರಿದಂತೆ ಚಾಮರಾಜನಗರ, ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ, ಕನಕಪುರ, ಚನ್ನಪಟ್ಟಣ, ಮದ್ದೂರು, ದೊಡ್ಡಬಳ್ಳಾಪುರ ಮಳವಳ್ಳಿ, ಮಂಡ್ಯ, ನಂಜನಗೂಡು, ಟಿ.ನರಸೀಪುರ,

▶ 8ನೇ ಪುಟಕ್ಕೆ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾಂಗ್ರೆಸ್ ಗ್ಯಾರಂಟಿ ಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿ ಕಾರ್ಡ್ ಅಭಿಯಾನಕ್ಕೆ ಚಾಲನೆ ನೀಡಲು ಮೈಸೂರಿನ ಕಾಂಗ್ರೆಸ್ ಕಚೇರಿಗೆ ಆಗಮಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಆರ್.ಎಸ್.ಸುರ್ಜೆವಾಲಾ ಅವರನ್ನು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ. ಪ್ರದೀಪ್ ಕುಮಾರ್ ಸ್ವಾಗತಿಸಿದರು.

## ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಫೆ.21– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 4ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಫೆ.23 ರ ಗುರುವಾರದಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಆರ್.ಕೆ.ನಗರ ಇ ಮತ್ತು ಎಫ್ ಬ್ಲಾಕ್, ಹೆಚ್ ಬ್ಲಾಕ್, ವಿವೇಕಾನಂದ ಸರ್ಕಲ್, ನಿಮಿಷಾಂಬ ಲೇಔಟ್, ಮಧುವನ ಲೇಔಟ್, ಬೆಮೆಲ್ ಲೇಔಟ್, ಶ್ರೀರಾಂಪುರ, ದೇವಯ್ಯನಹುಂಡಿ, ಪ್ರೀತಿ ಲೇಔಟ್, ಸರಸ್ವತಿಪುರಂ, ಗಂಗೋತ್ರಿ, ಕುವೆಂಪುನಗರ, ಜನತಾನಗರ, ಶಾರದದೇವಿನಗರ, ಅರವಿಂದನಗರ, ಚಿಕ್ಕಹರದನಹಳ್ಳಿ, ಕುವೆಂಪುನಗರ ಕಾಂಪ್ಲೆಕ್ಸ್, ಅಕ್ಷಯ್ ಬಂಡಾರ್, ಕೆ.ಜಿ.ಕೊಪ್ಪಲ್, ಡಿ.ವಿ.ಜಿ ಲೇಔಟ್, ಟಿ.ಕೆ. ಲೇಔಟ್, ಗಂಗೋತ್ರಿ ಲೇಔಟ್, ಕೃಷ್ಣಮೂರ್ತಿ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ಇಂದು ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಮೈಸೂರು, ಫೆ.21– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಾರ್ವಜನಿಕರ ಕೆಲಸಗಳು ವಿಳಂಬ, ಮುಡಾ ಅಧಿಕಾರಿಗಳ ಅವ್ಯವಹಾರಗಳ ಕರ್ಮಕಾಂಡಗಳನ್ನು ಖಂಡಿಸಿ ಹಾಗೂ ಹಿರಿಯ ನಾಗರಿಕ ಕೆ.ಎನ್.ಶಿವಶಂಕರ್ ರಾವ್ ಅವರಿಗೆ ಕೂಡಲೇ ಹಕ್ಕುಪತ್ರ ಕೊಡಬೇಕೆಂದು ಒತ್ತಾಯಿಸಿ ಮುಡಾ ಸಿಬ್ಬಂದಿ ವಿರುದ್ಧ ಬುಧವಾರ (ಫೆ.22) ಬೆಳಗ್ಗೆ 11.30ಕ್ಕೆ ಮುಡಾ ಮುಂಭಾಗ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಸ್ಪತ್ರೆಗಳ ನವೀಕರಣ: ರೋಗಿಗಳು ಸಹಕರಿಸಲು ಮನವಿ

ಮೈಸೂರು, ಫೆ.21– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು 2024ನೇ ಸಾಲಿನಲ್ಲಿ ಶತಮಾನೋತ್ಸವವನ್ನು ಪೂರೈಸುತ್ತಿರುವುದರಿಂದ ಈ ಸಂಸ್ಥೆ ಹಾಗೂ ಅಧೀನ ಆಸ್ಪತ್ರೆಗಳ ನವೀಕರಣ ಮತ್ತು ದುರಸ್ತಿ ಕಾಮಗಾರಿಗಳನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಭೇಟಿ ನೀಡುವ ರೋಗಿಗಳು ಮತ್ತು ಸಾರ್ವಜನಿಕರಿಗೆ ಅವಶ್ಯವಿರುವ ಚಿಕಿತ್ಸೆಗಳ ನಾಮಫಲಕ ವಿವರಗಳನ್ನು ಆಸ್ಪತ್ರೆಯ ಆವರಣಗಳಲ್ಲಿ ಅಳವಡಿಸಲಾಗಿದ್ದು, ಸದರಿ ದುರಸ್ತಿ ಮತ್ತು ನವೀಕರಣ ಕಾಮಗಾರಿ ಪೂರ್ಣಗೊಳ್ಳುವವರೆಗೂ ಸಹಕರಿಸುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.26ರಂದು ಶ್ರೀ ತ್ಯಾಗರಾಜ ಆರಾಧನೆ

ಮೈಸೂರು, ಫೆ. 21– ಮೈಸೂರು ಮುಲಕನಾಡು ಸಭಾ ಮತ್ತು ಮುಲಕನಾಡು ಚಾರಿಟಬಲ್ ಟ್ರಸ್ಟ್ ವತಿಯಿಂದ ಫೆ.26ರಂದು ಬೆಳಗ್ಗೆ 10 ಗಂಟೆಗೆ ಶ್ರೀ ತ್ಯಾಗರಾಜ ಆರಾಧನೆ, ಗೋಷ್ಠಿ ಗಾಯನ, ವೇಣುವಾದಕ ಟಿ ಆರ್ ಶ್ರೀನಾಥ್ ಹಾಗೂ ವಿದುಷಿ ಶ್ರೀಮತಿ ವಿಜಯ ಬಾಲಕೃಷ್ಣ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಹುಣಸೂರು ರಸ್ತೆಯಲ್ಲಿನ ಮುಲಕನಾಡು ಸಭಾ ಭವನದಲ್ಲಿ ಆಯೋಜಿಸಲಾಗಿದೆ

ಇದೇ ಸಂದರ್ಭದಲ್ಲಿ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿರುವ ಮುಲಕನಾಡು ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅವಶ್ಯಕತೆಯಿರುವ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಮೊ. 9845341511 ಸಂಪರ್ಕಿಸಬಹುದು.



ಭಾರತೀಯ ಜೈನ್ ಮಿಲನ್–ಕರ್ನಾಟಕ (ವಲಯ–8) ನೂತನ ಪದಾಧಿಕಾರಿಗಳನ್ನು ಇತ್ತೀಚೆಗೆ ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ವೀರಾಂಗನ ಶೀಲಾ ಅನಂತರಾಜ್, ಅಧ್ಯಕ್ಷರಾಗಿ ವೀರ್ ಕೆ. ಯುವರಾಜ್ ಭಂಡಾರಿ, ಪ್ರಧಾನ ಕಾರ್ಯದರ್ಶಿಯಾಗಿ ವೀರ್ ಎಂ. ರತ್ನರಾಜ್, ಖಜಾಂಚಿಯಾಗಿ ವೀರ್ ಕೆ. ಚಂದ್ರಶೇಖರ್, ಸಹ ಕಾರ್ಯದರ್ಶಿಗಳಾಗಿ ವೀರ್ ಪ್ರಶಾಂತ್ ಎಸ್.ಎ., ಮಹಾವೀರ್ ಗೋಗಿ, ವೈಶಾಲಿ ಚಂದ್ರಪ್ರಭು, ನಂದಿನಿ ಅನಂತರಾಜು, ಧರ್ಮಸ್ಥಳ ಸುರೇಂದ್ರ ಕುಮಾರ್ ಆಯ್ಕೆಯಾಗಿದ್ದಾರೆ.

## ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ

ಮೈಸೂರು, ಫೆ. 21– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಹರವೆ ಶ್ರೀವಿರಕ್ತಮಠದ ಸಹಯೋಗದಲ್ಲಿ ಮಾ.12ರಂದು ಚಾಮರಾಜನಗರ ತಾಲೂಕಿನ ಹರವೆಯ ಶ್ರೀ ವಿರಕ್ತಮಠದಲ್ಲಿ ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ವಧು–ವರರಿಗೆ ಸೀರೆ, ಕುಪ್ಪಸ, ಪಂಚೆ, ವಲ್ಲಿ, ಶರ್ಟ್, ಮಾಂಗಲ್ಯ ಹಾಗೂ ಬೆಳ್ಳಿ ಕಾಲುಂಗುರವನ್ನು ಉಚಿತವಾಗಿ ನೀಡಲಾಗುತ್ತದೆ. ಆಸಕ್ತರು ಮಾ.1ರೊಳಗಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ, ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004 ಈ ಕಚೇರಿಯಲ್ಲಿ ಅಥವಾ ಹರವೆಯ ಶ್ರೀವಿರಕ್ತ ಮಠದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ವಿವರಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಳಿಗೆ ಸರ್ಪಭೂಷಣಸ್ವಾಮಿ, ಮೊ: 9964151105 ಅಥವಾ ಮಹದೇವಪ್ರಸಾದ್ ಮೊ: 9449030588 ಅವರನ್ನು ಸಂಪರ್ಕಿಸಬಹುದು.

## ನಿಧನ



### ಸಾಲೋಮೆ ಪ್ಯಾಟ್ರಿಕ್

ಮೈಸೂರು, ಫೆ. 21– ಮೈಸೂರಿನ ನಜರ್‌ಬಾದ್‌ನ ರಾಯಲ್ ಇಂಗ್ಲಿಷ್ ಸ್ಕೂಲ್ ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ಲೂರ್ದ್ ನಗರದ ನಿವಾಸಿ ಸಾಲೋಮೆ ಪ್ಯಾಟ್ರಿಕ್ (83) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಹದೇವಪುರ ರಸ್ತೆಯಲ್ಲಿರುವ ಗಾಂಧಿ ನಗರದ ಕ್ಯಾಥೋಲಿಕ್ ಸೆಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹೆನ್ರಿ ನಲ್ಲತಂಬಿ



ಮೈಸೂರು, ಫೆ. 21– ಮೈಸೂರಿನ ರಾಜರಾಜೇಶ್ವರನಗರ ನಿವಾಸಿ ಹೆನ್ರಿ ನಲ್ಲತಂಬಿ (62) ಹೃದಯಾಘಾತದಿಂದ ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಳವಾಡಿ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ಸಣ್ಣಮ್ಮ

ಮೈಸೂರು, ಫೆ.21– ನಂಜನಗೂಡು ತಾಲೂಕು ಹದಿನಾರು ಗ್ರಾಮದ ಸಣ್ಣಮ್ಮ(85) ಅವರು ಮಂಗಳವಾರ ಸಂಜೆ ನಿಧನರಾದರು.

ಮೃತರು ಪುತ್ರ ತಾಲೂಕು ಎಪಿಎಂಸಿ ಉಪಾಧ್ಯಕ್ಷ ಸಿದ್ದರಾಜು ನಾಯಕ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿ ಬುಧವಾರ ಮಧ್ಯಾಹ್ನ 12ಕ್ಕೆ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು–ಬೆಂಗಳೂರು ಇ–ಬಸ್‌ಗೆ ಫುಲ್ ಡಿಮ್ಯಾಂಡ್

## ಬಸ್‌ನ 43 ಆಸನವೂ ಭರ್ತಿ

ಮೈಸೂರು, ಫೆ.21(ಆರ್‌ಕೆ)– ಮೈಸೂರು–ಬೆಂಗಳೂರು ನಡುವೆ ಪ್ರಾಯೋಗಿಕವಾಗಿ ಸಂಚರಿಸುತ್ತಿರುವ ರಾಜ್ಯದ ಮೊದಲ ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್‌ಗೆ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

2023ರ ಜನವರಿ 16 ರಿಂದ ಆರಂಭವಾಗಿರುವ ಅಂತರ ನಗರ (ಇಂಟರ್‌ಸಿಟಿ) ಎಲೆಕ್ಟ್ರಿಕ್ ಬಸ್ ಸೇವೆಯನ್ನು ಪ್ರಯಾಣಿಕರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದ್ದು, ಎರಡೂ ಕಡೆಗಳಲ್ಲೂ ಬಸ್ಸಿನ ಎಲ್ಲಾ 43 ಆಸನಗಳೂ ಭರ್ತಿಯಾಗುತ್ತಿವೆ.

ಮೈಸೂರು–ಬೆಂಗಳೂರು ನಡುವೆ ಒಬ್ಬರಿಗೆ 300 ರೂ. ಪ್ರಯಾಣ ದರ ನಿಗದಿಗೊಳಿಸಲಾಗಿದ್ದು, ತಡೆರಹಿತ ಸಂಚಾರವಿರುವುದರಿಂದ ಎಲೆಕ್ಟ್ರಿಕ್ ಬಸ್ಸಿನಲ್ಲಿ ಪ್ರಯಾಣಿಸಲು ಸಾರ್ವಜನಿಕರು ತೀವ್ರ ಆಸಕ್ತಿ ತೋರುತ್ತಿದ್ದಾರೆ. ಈವರೆಗೆ 3,000 ಮಂದಿ ಪ್ರಯಾಣಿಸಿದ್ದಾರೆ.

ಶಬ್ದ ಮಾಲಿನ್ಯ, ವಾಯು ಮಾಲಿನ್ಯವಿಲ್ಲದೆ, ಹವಾನಿಯಂತ್ರಿತ ಬಸ್ಸಿನಲ್ಲಿ ಸುಖಕರವಾಗಿ ಪ್ರಯಾಣ ಮಾಡಬಹುದಾದ್ದರಿಂದ ದಿನಕ್ಕೆ ಒಂದೇ ಬಾರಿ ಸಂಚರಿಸುವುದರಿಂದ ಇ–ಬಸ್ಸಿಗಾಗಿ ಬಸ್ ನಿಲ್ದಾಣದಲ್ಲಿ ಕಾದು ಕುಳಿತಿರುತ್ತಾರೆ. ಎಲ್ಲಾ ದಿನಗಳಲ್ಲೂ ಎಲ್ಲಾ 43 ಆಸನಗಳೂ ಭರ್ತಿಯಾಗುತ್ತಿವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಕರಾದ ಅಶೋಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್



ಬನ್ನಿಮಂಟಪದ ಸಾರಿಗೆ ಸಂಸ್ಥೆ ವರ್ಕ್‌ಶಾಪ್‌ನಲ್ಲಿ ಚಾರ್ಜಿಂಗ್ ಮಾಡುತ್ತಿರುವುದು

ಬೆಂಗಳೂರಿನ ಮೆಜೆಸ್ಟಿಕ್ ಎಂದೇ ಕರೆಯಲ್ಪಡುವ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬೆಳಗ್ಗೆ 6.15 ಗಂಟೆಗೆ ಬರುವ ಇ–ಬಸ್, 6–45ಕ್ಕೆ ಹೊರಟು 7–15 ಗಂಟೆಗೆ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಬಂದು ಬೆಳಗ್ಗೆ 7–45 ಗಂಟೆಗೆ ಪ್ರಯಾಣ ಆರಂಭಿಸಿ ಬೆಳಗ್ಗೆ 9.30 ಗಂಟೆಗೆ ಮೈಸೂರು ಸಬರ್ಬನ್ ಬಸ್ ನಿಲ್ದಾಣ ತಲುಪಲಿದೆ.

ಪ್ರಯಾಣಿಕರು ಇಳಿಯುತ್ತಿದ್ದಂತೆಯೇ ಸಬರ್ಬನ್ ಬಸ್ ಸ್ಟ್ಯಾಂಡ್‌ನಲ್ಲಿ ಚಾರ್ಜಿಂಗ್ ಯೂನಿಟ್ ಇನ್ನೂ ಕಾರ್ಯಾರಂಭವಾಗದಿರುವುದರಿಂದ ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿರುವ ವರ್ಕ್‌ಶಾಪ್‌ನಲ್ಲಿ 1 ತಾಸು ಚಾರ್ಜಿಂಗ್ ಮಾಡಿಕೊಂಡು ಮತ್ತೆ ಸಬರ್ಬನ್ ಬಸ್ ನಿಲ್ದಾಣಕ್ಕೆ ತೆರಳಿ ಪ್ರಯಾಣಿಕರ ಹತ್ತಿಸಿಕೊಂಡು, ಮಧ್ಯಾಹ್ನ 12.30 ಗಂಟೆಗೆ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದೆ ಎಂದು ಅಶೋಕ್ ತಿಳಿಸಿದ್ದಾರೆ.

ತಡೆರಹಿತವಾಗಿರುವುದರಿಂದ ಹಾಗೂ ದಶಪಥ ರಸ್ತೆ ನಿರ್ಮಾಣವಾಗಿರುವ ಕಾರಣ, ಮೈಸೂರಿನಿಂದ ಬೆಂಗಳೂರಿನ ಸ್ಯಾಟ್‌ಲೈಟ್ ಬಸ್ ನಿಲ್ದಾಣಕ್ಕೆ ಕೇವಲ ಒಂದೂಮುಕ್ಕಾಲು ಗಂಟೆಗೆ ತಲುಪುವ ಇ–ಬಸ್‌ನಲ್ಲಿ ಪ್ರಯಾಣದ ವಿಶೇಷ ಅನುಭವವಾಗಲಿದೆ ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ.

ಒಬ್ಬ ಡ್ರೈವರ್, ಒಬ್ಬ ಕಂಡಕ್ಟರ್ ಎಲೆಕ್ಟ್ರಿಕ್ ಬಸ್‌ನಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ಬಸ್ ಹೊರಡುವ ಮುನ್ನವೇ ಟಿಕೆಟ್‌ಗಳನ್ನು ವಿತರಿಸಲಿದ್ದಾರೆ. ಬಸ್ ಸ್ಟ್ಯಾಂಡ್‌ಗೆ ಬಂದಾಗ ಒಂದು ವೇಳೆ ಎಲ್ಲಾ 43 ಆಸನಗಳೂ ಭರ್ತಿಯಾದರೆ ನಿಗದಿತ ಸಮಯದವರೆಗೂ ಕಾಯದೇ ಇ–ಬಸ್ ಪ್ರಯಾಣ ಆರಂಭಿಸುತ್ತದೆ ಎಂದು ಸಾರಿಗೆ ಸಂಸ್ಥೆ ಮೂಲಗಳು ತಿಳಿಸಿವೆ.

### ಶೀಘ್ರ ಚಾರ್ಜಿಂಗ್ ಯೂನಿಟ್ ಕಾರ್ಯ

ಇ–ಬಸ್ ಸೇವೆ ಆರಂಭವಾಗಿರುವುದರಿಂದ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲೇ ಘಟಕ ಸ್ಥಾಪಿಸಲಾಗಿದೆಯಾದರೂ ಸೆಸ್ಕಾಂನಿಂದ ಗ್ರೀನ್ ಸಿಗ್ನಲ್ ದೊರೆತಿರುವುದರಿಂದ ಕಚೇರಿ ಪ್ರಕ್ರಿಯೆಗಳನ್ನು ಪೂರೈಸಿ ಶೀಘ್ರದಲ್ಲೇ ಇ–ಬಸ್ ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಅಂಬಾರಿ ಉತ್ಸವ್

ಸಾರಿಗೆ ಸಂಸ್ಥೆಯು ವಿಶೇಷ ವಾಗಿ ಪರಿಚಯಿಸಿರುವ ಅಂಬಾರಿ ಉತ್ಸವ್ ಯೋಜನೆ ಆರಂಭಿಸಿದ್ದು, ಅದ ರಡಿ ಬೆಂಗಳೂರಿನಿಂದ ರಾಜ್ಯದಾದ್ಯಂತ ಹವಾನಿಯಂತ್ರಿತ ಸ್ಲೀಪರ್ ಕೋಚ್ ಅಂಬಾರಿ ಬಸ್ ಸೇವೆ ಒದಗಿಸಲು ಮುಂದಾಗಿದ್ದು, ಮೈಸೂರು ನಗರಕ್ಕೂ ಸೇವೆ ಲಭ್ಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮೈಸೂರು–ಚೆನ್ನೈ ವಂದೇ ಭಾರತ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿಗೆ ಈಗ ಭಾರೀ ಬೇಡಿಕೆ

ಮೈಸೂರು, ಫೆ.21(ಆರ್‌ಕೆ)–2022ರ ನವೆಂಬರ್ 12ರಿಂದ ಮೈಸೂರು–ಬೆಂಗಳೂರು–ಚೆನ್ನೈ ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿಗೆ ಪ್ರಯಾಣಿಕರಿಂದ ಬೇಡಿಕೆ ಹೆಚ್ಚಾಗುತ್ತಿದೆ.



ಬುಧವಾರ ಹೊರತುಪಡಿಸಿ ವಾರದ ಉಳಿದ ಎಲ್ಲಾ ದಿನಗಳಲ್ಲೂ ಸಂಚರಿಸುವ ಈ ಐಷಾರಾಮಿ ರೈಲಿಗೆ ಆರಂಭದಲ್ಲಿ ನೀರಸ ಪ್ರತಿಕ್ರಿಯೆ ಇತ್ತು. ತಿಂಗಳು ಕಳೆದಂತೆ ಈ ರೈಲಿನಲ್ಲಿ ಮೈಸೂರು–ಚೆನ್ನೈ ನಡುವೆ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದೀಗ ಸರಾಸರಿ ಶೇ.95 ರಷ್ಟು ಆಸನಗಳು ಭರ್ತಿಯಾಗುತ್ತಿವೆ ಎಂದು ನೈರುತ್ಯ ರೈಲ್ವೇ ಮೂಲಗಳು ತಿಳಿಸಿವೆ.

2 ಎಕ್ಸಿಕ್ಯೂಟಿವ್ ಚೇರ್‌ಕಾರ್ ಮತ್ತು 14 ಚೇರ್‌ಕಾರ್ ಸೇರಿ 16 ಕೋಚ್‌ಗಳನ್ನು ಹೊಂದಿರುವ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನಲ್ಲಿ 104 ಮಂದಿ ಎಕ್ಸಿಕ್ಯೂಟಿವ್ ಚೇರ್ ಕಾರ್ ಹಾಗೂ 1,092 ಮಂದಿ ಚೇರ್ ಕಾರ್‌ನಲ್ಲಿ ಪ್ರಯಾಣಿಸಬಹುದಾಗಿದ್ದು, ಎಲ್ಲಾ ಕೋಚ್‌ಗಳ ಆಸನಗಳೂ ಈಗ ಭರ್ತಿಯಾಗುತ್ತಿವೆ ಎಂದು ಹೇಳಲಾಗಿದೆ.

ಮೈಸೂರಿನಿಂದ ಬೆಂಗಳೂರಿಗೆ ಎಕ್ಸಿಕ್ಯೂಟಿವ್ ಚೇರ್‌ಕಾರ್ ಪ್ರಯಾಣ ದರ 1,215 ರೂ., ಚೇರ್‌ಕಾರ್‌ನಲ್ಲಿ 720 ರೂ., ಮೈಸೂರಿನಿಂದ ಚೆನ್ನೈಗೆ ಎಕ್ಸಿಕ್ಯೂಟಿವ್ ಚೇರ್‌ಕಾರ್‌ಗೆ 2,485 ರೂ. ಮತ್ತು ಚೇರ್ ಕಾರ್‌ಗೆ 1365 ರೂ. ಹಾಗೂ ಚೆನ್ನೈನಿಂದ ಮೈಸೂರಿಗೆ ಎಕ್ಸಿಕ್ಯೂಟಿವ್ ಚೇರ್‌ಕಾರ್‌ನಲ್ಲಿ 1835 ರೂ., ಹಾಗೂ ಚೇರ್‌ಕಾರ್‌ನಲ್ಲಿ 940 ರೂ. ಪ್ರಯಾಣ ದರ ನಿಗದಿಯಾಗಿದೆ.

ಚೆನ್ನೈನಿಂದ ಮುಂಜಾನೆ 5.30 ಗಂಟೆಗೆ ಹೊರಡುವ ರೈಲು, ಬೆಳಗ್ಗೆ 7.20ಕ್ಕೆ ಕಟ್ಪಾಡಿ ಜಂಕ್ಷನ್, ಬೆಳಗ್ಗೆ 10.15ಕ್ಕೆ ಬೆಂಗಳೂರು ಹಾಗೂ ಮಧ್ಯಾಹ್ನ 12.30 ಗಂಟೆಗೆ ಮೈಸೂರು ತಲುಪಲಿದೆ. ಅದೇ ದಿನ ಮಧ್ಯಾಹ್ನ 1.05 ಗಂಟೆಗೆ ಮೈಸೂರು ರೈಲು ನಿಲ್ದಾಣದಿಂದ ಹೊರಟು, ಮಧ್ಯಾಹ್ನ 2.50 ಗಂಟೆಗೆ ಬೆಂಗಳೂರು, ಸಂಜೆ 5.35ಕ್ಕೆ ಕಟ್ಪಾಡಿ ಜಂಕ್ಷನ್ ಹಾಗೂ ರಾತ್ರಿ 7.30 ಗಂಟೆಗೆ ಚೆನ್ನೈ ರೈಲು ನಿಲ್ದಾಣ ತಲುಪಲಿದೆ.


ಹವಾನಿಯಂತ್ರಿತ ಹಾಗೂ ಸುಸಜ್ಜಿತ ಆಸನಗಳುಳ್ಳ ಈ ಐಷಾರಾಮಿ ರೈಲಿನಲ್ಲಿ ಅತೀ ಕಡಿಮೆ ಅವಧಿಯಲ್ಲಿ ತಲುಪಬಹುದಾದ್ದರಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿನಿರತರು, ಉದ್ಯಮಿಗಳು, ಅಧಿಕಾರಿ ವರ್ಗದವರು ಪ್ರಯಾಣಿಸಲು ಆಸಕ್ತಿ ತೋರುತ್ತಿದ್ದಾರೆ. ಅದರಿಂದಾಗಿ ಮೈಸೂರು–ಬೆಂಗಳೂರು ನಡುವಿನ ಪ್ರಯಾಣ ಇದೀಗ ಮತ್ತಷ್ಟು ಸುಗಮವಾಗಿದೆ.

## ಅನುದಾನ ಸಂಬಂಧ ಸಿಎಜಿಗೆ ವಿವರ ಸಲ್ಲಿಸದ್ದಕ್ಕೆ ಲೆಕ್ಕ ಪತ್ರ ಸಮಿತಿ ಆಕ್ಷೇಪ

ಬೆಂಗಳೂರು, ಫೆ.21 (ಕೆಎಂಶಿ)–ಅನುದಾನ ಕುರಿತಾದ ವಿವರಗಳನ್ನು ಮಹಾಲೇಖಪಾಲರಿಗೆ (ಸಿಎಜಿ) ಸಲ್ಲಿಸದೇ ಇರುವುದಕ್ಕೆ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಶಾಸಕ ಕೃಷ್ಣ ಭೈರೇಗೌಡ ಅಧ್ಯಕ್ಷತೆಯ ಸಮಿತಿ ತನ್ನ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿದೆ. ಇದು ಪ್ರಸಕ್ತ ವಿಧಾನಸಭೆಯ ಹತ್ತನೇ ಲೆಕ್ಕಪತ್ರ ಸಮಿತಿ ವರದಿಯಾಗಿದ್ದು, ಆರ್ಥಿಕ ಇಲಾಖೆಗೆ ಸಂಬಂಧಿಸಿದ ಭಾರತೀಯ ಲೆಕ್ಕಪರಿಶೋಧಕರ ವರದಿಯ ಕುರಿತು ಅಧ್ಯಯನ ಮಾಡಿದೆ. ಸರ್ಕಾರದಿಂದ ವಿವಿಧ ಇಲಾಖೆಗಳಿಗೆ ಬಿಡುಗಡೆಯಾದ ಅನುದಾನಗಳ ಕುರಿತು ಆರ್ಥಿಕ ಇಲಾಖೆಯು ಸರಿಯಾದ ಮೇಲ್ವಿಚಾರಣೆ ನಡೆಸಬೇಕು. ಈ ರೀತಿಯ ಮೇಲ್ವಿಚಾರಣೆ ನಡೆಸುವ ಹೊಣೆಗಾರಿಕೆಯನ್ನು ಆರ್ಥಿಕ ಇಲಾಖೆ ಉನ್ನತಾಧಿಕಾರಿಗಳಿಗೆ ವಹಿಸಬೇಕು ಎಂದು ಸಮಿತಿ ಸರ್ಕಾರಕ್ಕೆ ಸಲಹೆ ನೀಡಿದೆ. ಸರ್ಕಾರದ ಅನುದಾನಗಳ ಬಗ್ಗೆ ಭಾರತೀಯ ಮಹಾಲೇಖಪಾಲರ ಕಚೇರಿಗೆ ಒದಗಿಸದೇ ಇದ್ದರೆ, ಸಿಎಜಿ ವರದಿಗಳನ್ನು ಸಿದ್ಧಪಡಿಸಲು ತೊಂದರೆಯಾಗುತ್ತದೆ. ಅಷ್ಟೇ ಅಲ್ಲ, ಸಿಎಜಿ ವರದಿ ಗುರುತಿಸಿರುವುದನ್ನು ಉಸ್ತುವಾರಿ ಮಾಡಿ ಸದನಕ್ಕೆ ವರದಿ ನೀಡುವುದು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಕಷ್ಟವಾಗುತ್ತದೆ ಎಂದು ಉಲ್ಲೇಖಿಸಲಾಗಿದೆ. 2019ರಿಂದ 2020ರ ಅವಧಿಯಲ್ಲಿ 1,959 ಬಿಲ್‌ಗಳಿಗೆ ಸಂಬಂಧಿಸಿದ 96.08 ಕೋಟಿ ರೂ. ಮೊತ್ತದ ಲೆಕ್ಕವನ್ನು ಸಲ್ಲಿಸಲಿಲ್ಲ. ಇವುಗಳನ್ನು ಸಂಬಂಧಿಸಿದವರಿಗೆ ಕೊಡುವ ಮೂಲಕ ಅಧಿಕೃತ ತೀರುವಳಿಯನ್ನು ಮಾಡಿಲ್ಲ. ಇದರಿಂದ ಸರ್ಕಾರದ ಮೊತ್ತ ದುರ್ಬಳಕೆಯಾಗುವ ಸಂಭವ ಇದೆ. ಆದ್ದರಿಂದ ಇವುಗಳ ತೀರುವಳಿಗೆ ಸಂಬಂಧಪಟ್ಟ ಅಧಿಕಾರಿಗಳು ಮೊದಲ ಆದ್ಯತೆ ನೀಡಬೇಕು ಎಂದು ಸಮಿತಿಯು ಸರ್ಕಾರಕ್ಕೆ ಸಲಹೆ ಮಾಡಿದೆ. ಮುಂಗಡ ಪತ್ರದಲ್ಲಿ ನೀಡಲಾಗಿರುವ ಅನುದಾನಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಲು ಅಗತ್ಯವಾದ ಕ್ರಮಗಳನ್ನು ಇಲಾಖಾ ಮುಖ್ಯಸ್ಥರು ತೆಗೆದುಕೊಳ್ಳಬೇಕು ಎಂದು ಸಮಿತಿ ಸಲಹೆ ಮಾಡಿದೆ.



## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

22.2.2023 ಬುಧವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಸಾರ್ವಜನಿಕ ಶಿಕ್ಷಣ ಇಲಾಖೆ (ಬೆಂಗಳೂರು), ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ (ಮೈಸೂರು), ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ (ಮೈಸೂರು)** : ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆಯಿಂದ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ** : ಗುರುವೈಭವೋತ್ಸವ–2023, ಬೆಳಗ್ಗೆ 7 ರಿಂದ ಅಷ್ಟೋತ್ತರ ಪಾರಾಯಣ ಸಹಿತ ಕ್ಷೀರಾಭಿಷೇಕ, ಬೆಳಗ್ಗೆ 7 ರಿಂದ ನಾಮಾವಳಿ ಸಹಿತ ಶ್ರೀ ವಿಷ್ಣುಸಹಸ್ರನಾಮ ಹೋಮ, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಶ್ರೀ ಶಿಂಶುಕುಮಾರ ಮಹಾಯಾಗ, ಬೆಳಗ್ಗೆ 7.30 ರಿಂದ ಗಣಪತಿ ಪೂಜೆ, ಪುಣ್ಯಾಹ, 108 ಕಳಶ ಸ್ಥಾಪನೆ, ಗಣಹೋಮ, ಶ್ರೀ ಶಿಂಶುಮಾರ ಮಹಾಯಾಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ** : ಮೂರು ದಿನಗಳ ರಂಗ ಸಹೃದಯ ಕಾರ್ಯಾಗಾರ, ಸ್ಥಳ: ಲಲಿತ ಕಲಾ ರಂಗ ಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಅಭಿವೃದ್ಧಿ** : ಸಿಲ್ಕ್ ಇಂಡಿಯಾ–2023 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ** : ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ.

■ **ಶ್ರೀರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ಸೇವಾ ಸಂಘ, ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ** : ಆಧ್ಯಾತ್ಮಿಕ ಚಿಂತನ ಮಂಥನ ಕಾರ್ಯಕ್ರಮ, ಸಂಜೆ 5 ರಿಂದ ವೇದವ್ಯಾಸ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ದೇವಯ್ಯ ಮತ್ತು ತಂಡದವರಿಂದ ಯೋಗ ಪ್ರದರ್ಶನ, ಸಂಜೆ 6 ರಿಂದ ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಅವರಿಂದ ವಚನ ಸಾಹಿತ್ಯದಲ್ಲಿ ಆಧ್ಯಾತ್ಮ ಕುರಿತು ಉಪನ್ಯಾಸ, ಸಂಜೆ 7 ರಿಂದ ಶ್ರೀಮತಿ ರಾಜೇಶ್ವರಿ ತಂಡದವರಿಂದ ಹಾಡುಗಾರಿಕೆ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಮುಖ್ಯ ಅತಿಥಿಗಳು : ಮೈಲ್ಯಾಕ್ ಅಧ್ಯಕ್ಷ ರಘು ಆರ್. ಕೌಟಿಲ್ಯ, ಸ್ಥಳ: ರಾಮಕೃಷ್ಣ ಪರಮಹಂಸ ವೃತ್ತ, ರಾಮಕೃಷ್ಣನಗರ.

■ **ಶ್ರೀರಾಮಕೃಷ್ಣ ಆಶ್ರಮ** : ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 188ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ 5.45 ರವರೆಗೆ ಸಂಧ್ಯಾರತಿ, ಸಂಜೆ 5.45 ರಿಂದ ಸ್ವಾಮಿ ಮಂಗಳನಾಥಾನಂದ ಅವರಿಂದ ಪತಿತ ಪಾವನೆ ಶಾರದಾ ಕುರಿತು ಕನ್ನಡದಲ್ಲಿ ಪ್ರವಚನ, ಸಂಜೆ 6.45 ರಿಂದ ಶ್ರೀ ಸುದಾಮ ದಾನಗೇರಿ ಅವರಿಂದ ಭಜನ ಸಂಧ್ಯಾ–ಅಭಂಗ್ ವಾಣಿ ನಡೆಯಲಿದೆ. ಪಕ್ಕವಾದ್ಯದಲ್ಲಿ ವಿಘ್ನೇಶ್ ಭಾಗ್ವತ್ –ಹಾರ್ಮೋನಿಯಂ, ಪರಮೇಶ್ವರ ಹೆಗಡೆ–ತಬಲಾ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್** : ಪ್ರೊ. ಹೆಚ್.ಆರ್. ಶ್ರೀರಂಗರಾಜನ್ ಅವರಿಂದ 'ನಾನ್ ಲೈನಿಯರ್ ಡೈನಾಮಿಕ್ಸ್ ಅಂಡ್ ಅಪ್ಲಿಕೇಷನ್ಸ್ ಟು ಸೈನ್ಸ್ ಅಂಡ್ ಇಂಜಿನಿಯರಿಂಗ್' ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣಗಾನ ಸಭಾ** : ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ, ವಿದ್ವಾನ್ ಪಿಟೀಲು ಚೌಡಯ್ಯ ಜಯಂತಿ, ಉದ್ಘಾಟನೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಗೌರವ ಅತಿಥಿಗಳು : ಭಾಮಿ ಕನ್‌ಸ್ಟ್ರಕ್ಷನ್ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ ಪ್ರಸಾದ್, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸು, ವಿದ್ವಾನ್ ನಾಗರಾಜು ಮೈಸೂರು ಮತ್ತು ವಿದ್ವಾನ್ ಕಾರ್ತಿಕ್ ಮೈಸೂರು ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್, ಶ್ರೀಸೈನಿಕ್ ಫೌಂಡೇಷನ್** : ರೋಟರಿ ಸೈನಿಕ್ ದೇಶ್‌ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್. ನವೀನ್‌ಚಂದ್ರ, ಕಾರ್ಯದರ್ಶಿ ಎಸ್. ಕುಮಾರಸ್ವಾಮಿ, ಕೆ.ವಿ. ಭಾಸ್ಕರ್, ಜಿ. ಮಧುರಾ, ಸ್ಥಳ: ರೋಟರಿ ಸೆಂಟರ್ ಹಾಲ್, ಮುಡಾ ಎದುರು, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

■ **ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು** : ರೇಷ್ಮೆ ವಿಜ್ಞಾನ ದಿನ ಪ್ರಯುಕ್ತ ರೇಷ್ಮೆ ಕೃಷಿ ಪ್ರದರ್ಶನ ಮತ್ತು ಸ್ಪರ್ಧೆಗಳು. ಸ್ಥಳ: ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ, ಶ್ರೀರಾಂಪುರ, ಬೆಳಗ್ಗೆ 10ರಿಂದ.

■ **ಭಾರತೀಯ ವಿದ್ಯಾರ್ಥಿ ಸಂಘ ಬಿವಿಎಸ್ ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ** : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯ ಗೋಷ್ಠಿ ಮತ್ತು ಸನ್ಮಾನ ಕಾರ್ಯಕ್ರಮ. ಉದ್ಘಾಟನೆ: ವಿಮರ್ಶಕ ಮತ್ತು ಲೇಖಕ ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, ಸನ್ಮಾನಿತರು: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಮೈವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ವಿಜಯಕುಮಾರಿ ಎಸ್. ಕರಿಕಲ್, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ, ಪ್ರಾಸ್ತಾವಿಕ ನುಡಿ: ಮೈವಿವಿ ಬಿವಿಎಸ್ ಸಂಯೋಜಕರು ಮತ್ತು ಸಂಶೋಧಕರಾದ ಹೂವಿನ ಸಿದ್ದು. ಸ್ಥಳ: ಬಿಎಂಶ್ರೀ ಸಭಾಂಗಣ, ಮೈಸೂರು ವಿಶ್ವವಿದ್ಯಾಲಯ. ಬೆಳಗ್ಗೆ 10.30ರಿಂದ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಿ.:** ಶ್ರೀ ಮನ್ಮಹಾರಾಜ ಹತ್ತನೇ ಚಾಮರಾಜ ಒಡೆಯರ್ ಜನ್ಮ ದಿನಾಚರಣೆ– ಪುಷ್ಪ ನಮನ, ಅಭಿನಂದನೆ– ಪಾರಂಪರಿಕ ತಜ್ಞ ಪ್ರೊ. ರಂಗರಾಜು, ಉಪಸ್ಥಿತರು: ಮೇಯರ್ ಶಿವಕುಮಾರ್, ಅರಮನೆ ಮಂಡಳಿ ಸಹಾಯಕ ನಿರ್ದೇಶಕರು ಟಿ.ಎಸ್. ಸುಬ್ರಹ್ಮಣ್ಯ, ಕರಾಒವಿ ವೇದಿಕೆ ಗೌರವಾಧ್ಯಕ್ಷ ರಾಮು, ಕೆ.ಆರ್.ಮಾರ್ಕೆಟ್ ಬಾಡಿಗೆದಾರರ ಸಂಘದ ಅಧ್ಯಕ್ಷ ಪೈಲ್ವಾನ್ ಮಹದೇವು, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್, ಚುಟುಕು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಎಂ.ಜಿ.ಆರ್. ಅರಸ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್. ಸ್ಥಳ: ಚಾಮರಾಜ ಒಡೆಯರ್ ಪ್ರತಿಮೆ (ವೃತ್ತ), ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ(ಅರಮನೆ), ಮೈಸೂರು. ಬೆಳಗ್ಗೆ 11.30ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಜಿ.ಪುಷ್ಪಲತಾ, ಎಸ್. ಸಂಗೀತಾ, ಜಯಂತಿ ವಿ. ಭಟ್, ವ್ಯಾಖ್ಯಾನ– ಡಾ.ಹೆಚ್.ಎನ್. ಮಂಜುರಾಜ್, 9.00 ವೃತ್ತಿ ಮಾರ್ಗದರ್ಶನ–ಸಸ್ಯಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಮಹದೇವಕುಮಾರ್ ಎಸ್. ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಸಂಗೀತ –ಎಲ್. ಸಮೀರ್ ರಾವ್–ಬಾನ್ಸುರಿ ವಾದನ, 11.00ತಾಯಿ ಆರೋಗ್ಯ–ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ. ಪ್ರಾಯೋಜಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ

**ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "2 in 1 ಡಾಕ್ಟರ್ ರಾವಿ", ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಬಿ.ಆರ್. ಅನೂರಾಧಾ, 3.00 ಲಯ ಸಂಭ್ರಮ–ಕರ್ನಾಟಕದ ವಿಶೇಷ ನೃತ್ಯ ಸಂಪ್ರದಾಯವಾದ ಗೌಂಡಲಿ ಮತ್ತು ಪೇರಣೆಯಲ್ಲಿ ಮೃದಂಗದ ಪಾತ್ರ ಕುರಿತು ತಿಳಿಸಿಕೊಡುತ್ತಾರೆ. ಡಾ. ತುಳಸೀ ರಾಮಚಂದ್ರ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು– ದಿಯಾ ಸಲೀಮಾ, 6.50 ಕೃಷಿರಂಗ–ಕಿಸಾನ್‌ವಾಣಿ, 9.30 ಉಸ್ತಾದ್ ಸಬ್ರಿ ಖಾನ್–ಗಾಯನ, 10.00 ಜನಪದ ಸಂಗೀತ–ಶಿವಮ್ಮ ಮತ್ತು ತಂಡ

# ಜೆಡಿಎಸ್ ಈಗಲೂ ಬಿಜೆಪಿ 'ಬಿ ಟೀಂ': ಬಿಜೆಪಿಯ ಜನ ವಿರೋಧಿ ತೀರ್ಮಾನ ವಿರೋಧಿಸಲ್ಲ

● ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ವಾಗ್ದಾಳಿ ● ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ 'ಗೃಹಲಕ್ಷ್ಮಿ', 'ಗೃಹಜ್ಯೋತಿ' ಗ್ಯಾರಂಟಿ ಕಾರ್ಡ್ ವಿತರಣೆ ಅಭಿಯಾನಕ್ಕೆ ಚಾಲನೆ



ಮೈಸೂರು, ಫೆ.21(ಎಂಕೆ)– ಮೋದಿ ಮುಖವಾಡ ಹೊಂದಿರುವ ಜೆಡಿಎಸ್, ಬಿಜೆಪಿಯ 'ಬಿ–ಟೀಂ' ಆಗಿದೆ. ಭೂಸ್ವಾಧೀನ ತಿದ್ದುಪಡಿ ಹಾಗೂ ಅಲ್ಪಸಂಖ್ಯಾತರ ವಿರುದ್ಧದ ಕಾಯ್ದೆಗಳನ್ನು ವಿರೋಧಿಸದ ಜೆಡಿಎಸ್, ರೈತರು ಹಾಗೂ ಅಲ್ಪಸಂಖ್ಯಾತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಾಗ್ದಾಳಿ ನಡೆಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮಂಗಳವಾರ 'ಗೃಹಲಕ್ಷ್ಮಿ'(200 ಯುನಿಟ್ ಉಚಿತ ವಿದ್ಯುತ್)ಹಾಗೂ 'ಗೃಹಜ್ಯೋತಿ' (ಕುಟುಂಬದ ಗೃಹಿಣಿಗೆ ಪ್ರತಿ ತಿಂಗಳು 2 ಸಾವಿರ) ಗ್ಯಾರಂಟಿ ಕಾರ್ಡ್ ವಿತರಣೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜೆಡಿಎಸ್ ಮುಖಂಡರ ಮುಖವಾಡ ತೆಗೆದರೆ ನರೇಂದ್ರ ಮೋದಿ ಮುಖ ಕಾಣುತ್ತದೆ. ಮೈಸೂರು ನಗರ ಪಾಲಿಕೆಯ ಮೇಯರ್, ಉಪ ಮೇಯರ್ ಆಯ್ಕೆ ಚುನಾವಣೆಯಲ್ಲಿ ಜೆಡಿಎಸ್‌ನ ಪರೋಕ್ಷ ಹೊಂದಾಣಿಕೆಯಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಹಾಗೆಯೇ ಉಪ ರಾಷ್ಟ್ರಪತಿ ಆಯ್ಕೆ ಚುನಾವಣೆಯಲ್ಲಿ ಮಾರ್ಗರೇಟ್ ಆಳ್ವಾ ಅವರ ವಿರುದ್ಧವಾಗಿ ಜೆಡಿಎಸ್‌ನವರು ಮತ ಚಲಾಯಿಸಿದರು. ಜೆಡಿಎಸ್‌ನ ಬಿಜೆಪಿ ಪರವಾದ ನಿಲುವನ್ನು ಕಾಂಗ್ರೆಸ್ ಕಾರ್ಯಕರ್ತರು ಮನೆಮನೆಗೆ ತಲುಪಿಸಬೇಕು ಎಂದು ತಿಳಿಸಿದರು.

**ಹೊರ ರಾಜ್ಯದಲ್ಲೂ ಪೇ ಸಿಎಂ!:** ರಾಜ್ಯದಲ್ಲಿ ಯಾರನ್ನಾದರೂ ಕೇಳಿದರೆ ಬೊಮ್ಮಾಯಿ ಸರ್ಕಾರದ 40% ಕಮಿಷನ್ ಬಗ್ಗೆ ಮಾತನಾಡುತ್ತಿದ್ದಾರೆ. ಹೊರರಾಜ್ಯಕ್ಕೆ ಹೋದಾಗಲೂ ಪೇ ಸಿಎಂ ಪೋಸ್ಟರ್‌ಗಳು ಸ್ವಾಗತಿಸುತ್ತಿವೆ ಎಂದು ಟೀಕಿಸಿದ ಅವರು, ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಶೇ.40 ಕಮಿಷನ್ ಬಗ್ಗೆ ಪ್ರಧಾನಿಗೆ ಪತ್ರ ಬರೆದಿದ್ದಾರೆ. ಈವರೆಗೂ 8 ಬಾರಿ ರಾಜ್ಯಕ್ಕೆ ಭೇಟಿ ನೀಡಿರುವ ಪ್ರಧಾನಿಗಳು ಕಮಿಷನ್ ಬಗ್ಗೆ ಮಾತನಾಡಿಲ್ಲವೇಕೆ ಎಂದು ಪ್ರಶ್ನಿಸಿದರು. ಗದಗದಲ್ಲಿ ಲಿಂಗಾಯತ ಸ್ವಾಮೀಜಿಯೊಬ್ಬರು ಹೇಳಿದಂತೆ ಮಠಗಳ ಅನುದಾನದಲ್ಲೂ 10% ಕಮಿಷನ್ ಕೊಡಬೇಕು. ಪಿಎಸ್‌ಐ ಹಗರಣದಲ್ಲಿ ಎಡಿಜಿಪಿ ಜೈಲಿಗೆ ಹೋದರು. ಆದರೆ, ಗೃಹಮಂತ್ರಿ ಯಾವುದೇ ನೈತಿಕ ಹೊಣೆ ಹೊರಲು ಸಿದ್ಧರಿಲ್ಲ. ರಾಜ್ಯದ ಬಸವರಾಜ ಬೊಮ್ಮಾಯಿ ಸರ್ಕಾರ ಎಲ್ಲವನ್ನೂ ಮಾರಾಟಕ್ಕೆ ಇಟ್ಟಿದೆ. ಬಿಜೆಪಿ ಸರ್ಕಾರದ ಸಚಿವರಾದ ಎಂಟಿಬಿ ನಾಗರಾಜ್, ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ. ಯತ್ನಾಳ್ ಹೇಳಿದಂತೆ ಮುಖ್ಯಮಂತ್ರಿ ಹುದ್ದೆ ಸಹ ಮಾರಾಟದ ವಸ್ತುವಾಗಿದೆ ಎಂದು ವ್ಯಂಗ್ಯವಾಡಿದರು.

**ಗ್ಯಾರಂಟಿ ನೀಡಿದ್ದೇವೆ:** ರಾಜ್ಯದ ಬಡಜನರ ಅಭಿವೃದ್ಧಿಗೆ ಸಿದ್ದರಾಮಯ್ಯ ಮತ್ತು ಡಿಕೆಶಿ ಅವರ ಸಹಿಯೊಂದಿಗೆ 'ಗೃಹಲಕ್ಷ್ಮಿ' ಹಾಗೂ 'ಗೃಹಜ್ಯೋತಿ' ಯೋಜನೆಯ ಗ್ಯಾರಂಟಿ ಕಾರ್ಡ್ ನೀಡಿದ್ದೇವೆ. ಇದನ್ನು ಬಿಜೆಪಿಯವರಿಗೆ ಸಹಿಸಲು ಆಗ್ತಿಲ್ಲ. ಈ ಗ್ಯಾರೆಂಟಿ ಕಾರ್ಡನ್ನು ರಾಜ್ಯದ ಪ್ರತಿಯೊಂದು ಮನೆಗೂ ಕಾಂಗ್ರೆಸ್ ಪಕ್ಷ ತಲುಪಿಸುತ್ತದೆ. ರಾಜ್ಯದ ಎಲ್ಲಾ ಜಾತಿ, ಧರ್ಮಕ್ಕೆ ಸೇರಿದ ಜನರಿಗೆ ಇದನ್ನು ತಲುಪಿಸಿ ಎಂದು ಕರೆ ನೀಡಿದರಲ್ಲದೆ ಶ್ರೀಮಂತ ವರ್ಗದ ಸುಮಾರು ಶೇ.5–10 ರಷ್ಟು ಜನರು ಇದನ್ನು ಬೇಡ ಎಂದು ಹೇಳಬಹುದು. ಇಂತಹ ಯೋಜನೆಯನ್ನು ಜಾರಿ ಮಾಡಲು ಅನುದಾನದಲ್ಲಿ ಕಾಂಗ್ರೆಸ್ ಪಕ್ಷ ಬಿಜೆಪಿಯಂತೆ ಕಮಿಷನ್ ಪಡೆಯುವುದಿಲ್ಲ ಎಂದು ಹೇಳಿದರು.

**ಪ್ರಣಾಳಿಕೆ ಸಿದ್ಧತೆ ನಡೆಯುತ್ತಿದೆ:** ಶಾಸಕ ತನ್ವೀರ್ ಸೇಠ್ ಮಾತನಾಡಿ, ಚುನಾವಣೆ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಪ್ರಣಾಳಿಕೆ ಸಿದ್ಧಪಡಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. 2013–18ರವರೆಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಏನೇನು ಕೆಲಸ ಮಾಡಿತು ಎಂದು ಜನಸಾಮಾನ್ಯರಿಗೆ ಗೊತ್ತಿದೆ. ಬಿಜೆಪಿ ಸರ್ಕಾರದ ವೈಫಲ್ಯಗಳನ್ನು 'ಹ್ಯಾಂಡ್ ಬಿಲ್' ಮಾಡಿ ಪ್ರತಿ ಮನೆ ಮನೆಗೆ ತಲುಪಿಸುವ ಕೆಲಸವನ್ನು ಮಾಡಬೇಕಿದೆ. ಮುಂದಿನ 60 ದಿನಗಳ ಕಾಲ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಬಹಳ ಜಾಗರೂಕತೆಯಿಂದ ಇರಬೇಕು ಎಂದು ಸಲಹೆ ನೀಡಿದರು. ಎಐಸಿಸಿ ಕಾರ್ಯದರ್ಶಿ ರೋಸಿ ಜಾನ್, ಹಿರಿಯ ನಾಯಕ ಸಲೀಂ ಅಹಮದ್, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ಕೆ.ಮರೀಗೌಡ, ರವಿಶಂಕರ್, ಸೂರಜ್ ಹೆಗಡೆ, ಸುಧೀಂದ್ರ, ಹೆಚ್.ಎ.ವೆಂಕಟೇಶ್, ಮಾಜಿ ಮೇಯರ್ ಅಯೂಬ್‌ಖಾನ್, ಪುಷ್ಪ ಅಮರನಾಥ್, ಕಾಂಗ್ರೆಸ್‌ನ ನಗರ ಪಾಲಿಕೆ ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ಹೊಡೆದು ಹಾಕಿ ನೋಡೋಣ...

ಬೊಮ್ಮಾಯಿಯವರೇ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಎಲ್ಲಿಗೆ ಕರೆದುಕೊಂಡು ಬರಬೇಕು ಹೇಳಿ, ಅಲ್ಲಿಗೆ ನಾವೇ ಕರೆದುಕೊಂಡು ಬರುತ್ತೇವೆ. ಹೊಡೆದು ಹಾಕಿ ನೋಡೋಣ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸವಾಲು ಹಾಕಿದರು.

ಸಚಿವ ಅಶ್ವಥ್ ನಾರಾಯಣ್ ಮಂಡ್ಯದಲ್ಲಿ ಸಿದ್ದರಾಮಯ್ಯನವರನ್ನು ಹೊಡೆದು ಹಾಕಿ ಎಂದು ಕರೆ ನೀಡಿದ್ದಾರೆ. ಬಿಜೆಪಿಯ ಕೆಲವರು ಡಿ.ಕೆ.ಶಿವಕುಮಾರ್ ಮುಗಿಸಲು ಹೇಳುತ್ತಿದ್ದಾರೆ. ಇದು ಅಶ್ವಥ್ ನಾರಾಯಣ್ ಹೇಳುತ್ತಿರುವುದಲ್ಲ. ಮೋದಿ, ಅಮಿತ್ ಷಾ, ನಡ್ಡಾ, ಬಸವರಾಜ ಬೊಮ್ಮಾಯಿ ಅವರ ಭಾಷೆಯೇ ಹೇಳಿಸುತ್ತಿದೆ. ಕಾಂಗ್ರೆಸ್ ಪಕ್ಷದ ಇತಿಹಾಸವೇ ತ್ಯಾಗ ಬಲಿದಾನದ ಸಂಕೇತ. ಅಂದು ಗೋಡ್ಸೆ, ಇಂದು ಅಶ್ವಥ್ ನಾರಾಯಣ್ ಎಂದು ಕಿಡಿಕಾರಿದರು.

ಮಹಾತ್ಮ ಗಾಂಧೀಜಿಯವರ ಶರೀರ ಇಲ್ಲದಿರಬಹುದು ಆದರೆ ಅವರ ಆತ್ಮ ಇದೆ. ಇಂದಿರಾಗಾಂಧಿ, ರಾಜೀವ್ ಗಾಂಧಿಯವರನ್ನು ಹತ್ಯೆ ಮಾಡಲಾಯಿತು. ಈಗ ಸಿದ್ದರಾಮಯ್ಯನವರನ್ನು ಹತ್ಯೆ ಮಾಡುವ ಬಗ್ಗೆ ಮಾತನಾಡುತ್ತಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸಹಿತ ಎಲ್ಲ ಕಾಂಗ್ರೆಸ್ ನಾಯಕರನ್ನು ಸಂಹಾರ ಮಾಡುವಿರಾ. ಯಾವ ಕಾರಣಕ್ಕೆ ಈ ಹೇಳಿಕೆ ನೀಡುತ್ತಿದ್ದೀರಿ. ಕಾಂಗ್ರೆಸ್ ಬಡವರಿಗೆ ದೊಡ್ಡ ಶಕ್ತಿಯಾಗುವುದನ್ನು ಸಹಿಸದೇ ಈ ರೀತಿ ಹೇಳಿಕೆ ನೀಡುತ್ತಿರುವಿರಾ ಎಂದು ಪ್ರಶ್ನಿಸಿದರಲ್ಲದೆ ಎಷ್ಟೇ ನಾಯಕರನ್ನೂ ಮುಗಿಸಿದರೂ ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆ ನಿಲ್ಲಿಸಲಾಗದು. ಕುಟುಂಬದ ಗೃಹಿಣಿಯರ ಬ್ಯಾಂಕ್ ಖಾತೆಗೆ 2 ಸಾವಿರ ಹಾಕುವುದನ್ನು ತಪ್ಪಿಸಲಾಗದು ಎಂದರು.

## ಇಂದು ವಿಕಲಚೇತನರಿಂದ ಧರಣಿ

ಮೈಸೂರು,ಫೆ.21–ರಾಜ್ಯ ವಿಕಲಚೇತನರ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಅಂಗವಿಕಲರ ವೇದಿಕೆ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಬುಧವಾರ (ಫೆ.22) ಅನುದಾನ ಸಮರ್ಪಕ ಬಳಕೆ, ವಿಶೇಷ ಚೇತನರಿಗೆ ಮಹಾನಗರ ಪಾಲಿಕೆ ಅಧಿಕಾರಿಗಳ ಕಿರುಕುಳ, ಆಶ್ರಯ ಮನೆ ಯೋಜನೆಯಲ್ಲಿ ವಿಶೇಷ ಚೇತನರಿಗೆ ಆಗುತ್ತಿರುವ ಅನ್ಯಾಯ ಹಾಗೂ ಇತರೆ ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಅನಿರ್ದಿಷ್ಟಾವಧಿ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಪ್ರಭುಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್‌ಎಸ್‌ಎಸ್, ಬಿಜೆಪಿ ಸಂವಿಧಾನ ವಿರೋಧಿ ಧೋರಣೆ ಖಂಡಿಸಿ

# ಮಾ.12ರಂದು ಮೈಸೂರಲ್ಲಿ ಬೃಹತ್ ಸಮಾವೇಶ

ದಲಿತ, ಹಿಂದುಳಿದ, ಅಲ್ಪಸಂಖ್ಯಾತ, ಪ್ರಗತಿಪರ ಚಿಂತಕರ ಸಭೆಯಲ್ಲಿ ನಿರ್ಣಯ



ಮೈಸೂರು, ಫೆ.21(ಆರ್‌ಕೆ)–ತಮ್ಮ ದುರಾಡಳಿತದ ಮೂಲಕ ಭಾರತದ ಸಂವಿಧಾನ, ಪ್ರಜಾಪ್ರಭುತ್ವದ ತಳಹದಿಯನ್ನೇ ಬುಡಮೇಲು ಮಾಡುವ ಆರ್‌ಎಸ್‌ಎಸ್ ಮತ್ತು ಬಿಜೆಪಿ ಧೋರಣೆ ಖಂಡಿಸಿ ಮಾರ್ಚ್ 12ರಂದು ಮೈಸೂರಲ್ಲಿ ಬೃಹತ್ ಸಮಾವೇಶ ನಡೆಸಲು ದಲಿತ, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಪ್ರಗತಿಪರ ಚಿಂತಕರು ನಿರ್ಧರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ ದಸಂಸ, ಕುಂಬಾರರ ಸಂಘ, ರೈತ ಸಂಘಟನೆ, ಹಿಂದುಳಿದ ವರ್ಗಗಳ ವೇದಿಕೆ, ಪ್ರಗತಿಪರ ಚಿಂತಕರು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು, ಆರ್‌ಎಸ್‌ಎಸ್ ಮತ್ತು ಬಿಜೆಪಿಯು ತಮ್ಮ ಸಂವಿಧಾನ ವಿರೋಧಿ ಹಾಗೂ ಪ್ರಜಾಪ್ರಭುತ್ವ ಶಿಥಿಲಗೊಳಿಸುವಂತಹ ವರ್ತನೆ ಮೂಲಕ ಸಮಾಜದಲ್ಲಿ ಅಶಾಂತಿ, ಅಸಮಾನತೆ, ಜಾತಿ–ಧರ್ಮಗಳ ನಡುವೆ ದ್ವೇಷದ ವಿಷ ಬೀಜ ಬಿತ್ತಿ ಜನಸಾಮಾನ್ಯರ ನೆಮ್ಮದಿ ಹಾಳು ಮಾಡುತ್ತಿದೆ ಎಂದು ಆರೋಪಿಸಿದರು. ಆರ್ಥಿಕವಾಗಿ ಮುಂದುವರಿದ ವರ್ಗಗಳಿಗೂ ಶೇ.10ರಷ್ಟು ಮೀಸಲಾತಿ ನೀಡಿ ಕೇವಲ ಶೇ.3ರಷ್ಟು ಮೀಸಲಾತಿಗೆ ಸೀಮಿತವಾಗಿರುವ ದುರ್ಬಲರಿಗೆ ಸರ್ಕಾರಗಳು ವಂಚನೆ ಮಾಡುತ್ತಿವೆ. ಧರ್ಮದ ಹೆಸರಲ್ಲಿ ದ್ವೇಷ ಉಂಟು ಮಾಡಿ ಗೊಂದಲ, ಗದ್ದಲ ಎಬ್ಬಿಸಿ ಬಿಜೆಪಿ–ಆರ್‌ಎಸ್‌ಎಸ್ ಮುಖಂಡರು ಅದರ ಲಾಭ ಪಡೆದುಕೊಳ್ಳುತ್ತಿದ್ದಾರೆ ಎಂದು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಂ ಆಪಾದಿಸಿದರು.

ಭಾರತದ ಸರ್ವ ಶ್ರೇಷ್ಠ ಸಂವಿಧಾನದ ಆಶಯಕ್ಕೆ ವಿರುದ್ಧವಾದ ನಿರ್ಧಾರ ಕೈಗೊಂಡು ಜನವಿರೋಧಿ ಆಡಳಿತ ನಡೆಸುವ ಮೂಲಕ ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಯವಾಗಿಯೇ ಶಿಥಿಲಗೊಳಿಸುತ್ತಿದೆ ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಗುರುಪ್ರಸಾದ್ ಕೆರಗೋಡು ನುಡಿದರು.

ಜಾತೀಯತೆ, ಮತೀಯ ಗಲಭೆ, ಭ್ರಷ್ಟಾಚಾರ, ದಬ್ಬಾಳಿಕೆಯಂತಹ ಕೃತ್ಯದಲ್ಲಿ ನಿರತರಾಗಿರುವ ರಾಜ್ಯ ಮತ್ತು ಕೇಂದ್ರದ ಬಿಜೆಪಿ ಸರ್ಕಾರವು, ದಲಿತರು, ಹಿಂದುಳಿದವರು, ಶೋಷಿತರು, ಅಲ್ಪಸಂಖ್ಯಾತರನ್ನು ಕಡೆಗಣಿಸಿ ಉಳ್ಳವರ ಪರ ಆಡಳಿತ ನಡೆಸುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆಪಾದಿಸಿದರು.

**ಸಚಿವ ಡಾ. ಅಶ್ವತ್ಥನಾರಾಯಣ್ ವಿರುದ್ಧ ರ್‍ಯಾಲಿ:** ಮಾಜಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಹಾಗೂ ಸಾಮಾಜಿಕ ನ್ಯಾಯದ ಚಿಂತಕರಾದ ಸಿದ್ದರಾಮಯ್ಯರನ್ನು ಬಹಿರಂಗವಾಗಿಯೇ ಟಿಪ್ಪು ಸುಲ್ತಾನ್ ರೀತಿ ಮುಗಿಸಬೇಕೆಂದು ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ್ ವಿರುದ್ಧ ಫೆ.25ರಂದು ಮೈಸೂರಿನಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲು ಸಭೆ ನಿರ್ಧರಿಸಿತು.

ಜಾತ್ಯಾತೀತ ತತ್ವ, ಸಮಾನತೆ, ಸಾಮಾಜಿಕ ನ್ಯಾಯ, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸದಾ ಚಿಂತನೆ ನಡೆಸುತ್ತಿರುವ ಸಿದ್ದರಾಮಯ್ಯರನ್ನು ಮುಗಿಸಬೇಕೆಂದು ಕರೆ ನೀಡುವ ಸಚಿವ ಡಾ. ಅಶ್ವತ್ಥನಾರಾಯಣ್‌ರನ್ನು ಸಂಪುಟದಿಂದ ಕೈಬಿಟ್ಟು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ನಡೆಸುವ ರ್‍ಯಾಲಿಗೆ ಎಲ್ಲಾ ವರ್ಗದವರು ಬೆಂಬಲ ನೀಡುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮುಖಂಡರಾದ ಬೆಟ್ಟಯ್ಯ ಕೋಟೆ, ಅಲಗೂಡು ಶಿವಕುಮಾರ್, ಶಂಭಯ್ಯ, ನಜೀರ್, ಕಲೀಂ, ಶೌಕತ್ ಅಲಿಖಾನ್, ಯೋಗೇಶ್ ಉಪ್ಪಾರ, ಹೆಚ್.ಎಸ್.ಪ್ರಕಾಶ್, ನಾಗೇಶ್, ರೋಹಿತ್, ರವಿನಾಯಕ, ರವಿನಂದನ, ಮೊಗಣ್ಣಾಚಾರ್, ಕೆಂಡಗಣ್ಣಸ್ವಾಮಿ, ಶೋಭಾ, ಕೋಕಿಲಾ ಲೋಕೇಶ್, ಶಂಭುಲಿಂಗಯ್ಯ, ನ.ದಿವಾಕರ್ ಸೇರಿದಂತೆ ಹಲವು ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

## ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನಾನು ಪಾಠ ಮಾಡುವಾಗ ನೀನು ಯಾಕೆ ದೇವರನ್ನು ಬೇಡುತ್ತಿದ್ದೀಯಾ?

ಗುಂಡ : ನಮ್ಮಮ್ಮ ಹೇಳಿದರು ಮಲಗೋಕೆ ಮುಂಚೆ ದೇವರನ್ನು ಬೇಡಿಕೋ ಅಂತ...!

ಮೈಸೂರು ಮಿತ್ರ

ಬುಧವಾರ, 22 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತವಾಹಿನಿ.........**

ದೊಡ್ಡದಾಗಿ ವೈಫಲ್ಯ ಹೊಂದುವ ಎದೆಗಾರಿಕೆ ಇದ್ದವರು ಮಾತ್ರವಷ್ಟೇ ದೊಡ್ಡ ಸಾಧನೆ ಮಾಡಲು ಸಾಧ್ಯ –ನುಡಿಮುತ್ತು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ತಾಯಿಯನ್ನು ನಿಂದಿಸಬೇಡ, ಒಳ್ಳೆಯವರನ್ನು ಬಂಧಿಸಬೇಡ.

## ನಿಮ್ಮ ಪತ್ರಗಳು

### ಶಿಥಿಲಾವಸ್ಥೆಯಲ್ಲಿರುವ 101 ಶಿವಲಿಂಗಗಳ ಕಟ್ಟಡ

ಮಾನ್ಯರೆ,



ಮಹಾ ಶಿವರಾತ್ರಿಯ ದಿನ ದಂದು ರಾಮಾನುಜ ರಸ್ತೆಯ ರಾಜರ ಕಾಲದ ನೂರೊಂದು ಶಿವಲಿಂಗಗಳ ದರ್ಶನ, ಪೂಜೆಗಾಗಿ ನಾನು ಹೋದಾಗ ಗಮನಿಸಿದ್ದು: ರಾಜರ ಕಾಲದಲ್ಲಿ ಕಟ್ಟಿಸಿದ್ದ ದೇವಸ್ಥಾನದ ಒಳ ಭಾಗದ ಮೇಲ್ಛಾವಣಿಗಳು ಎಲ್ಲಾ ಕಡೆ ಅತ್ಯಂತ ಶಿಥಿಲವಾಗಿ ಬಿರುಕು ಬಿಟ್ಟುಕೊಂಡು ಯಾವಾಗ ಬೇಕಾದರೂ ಇಲ್ಲಿಗೆ ಬರುವ ಭಕ್ತರ ಮೇಲೆ ಕುಸಿದು ಬಿದ್ದು ಪ್ರಾಣ ತೆಗೆಯುವ ಹಂತದಲ್ಲಿವೆ. ಶಿವರಾತ್ರಿ ದಿನ ಸಾವಿರಾರು ಭಕ್ತರು ಈ ಶಿವಲಿಂಗಗಳ ದರ್ಶನಕ್ಕೆ ಬರುತ್ತಾರೆ. ಮಹಾ ಶಿವರಾತ್ರಿ ದಿನಕ್ಕೆ ತಿಂಗಳುಗಳ ಮುಂಚೆಯೇ ಈ ಮೇಲ್ಛಾವಣಿ ದುರಸ್ತಿಯನ್ನು ಯಾಕೆ ಮಾಡಿಲ್ಲ ಅನ್ನೋದೇ ಆಶ್ಚರ್ಯದ ವಿಷಯವಾಗಿದೆ. ಅದಕ್ಕೂ ಮಿಗಿಲಾದ ಆಶ್ಚರ್ಯದ ವಿಷಯ ಅಂದರೆ ಕಳೆದ 2 ವರ್ಷಗಳ ದೀರ್ಘ ಕಾಲದ ಜೋರು ಮಳೆಗೆ ದುರಸ್ಥಿ ಕಾಣದ ಮೇಲ್ಛಾವಣಿ ಕುಸಿದು ಬೀಳದೆ ಇರುವುದು. ಈ ಪುರಾತನ ದೇವಸ್ಥಾನದ ಹೊರ ಗೋಡೆಗಳಿಗೆ ಸ್ವಲ್ಪ ಸುಣ್ಣ ಬಣ್ಣ ಹೊಡೆದಂತೆ ಕಂಡು ಬಂದರೂ ಒಳ ಭಾಗದ ಅಪಾಯಕಾರಿ ಮೇಲ್ಛಾವಣಿ ದುಃಸ್ಥಿತಿ ಎಷ್ಟೋ ಭಕ್ತರ ಕಣ್ಣಿಗೆ ಕಾಣಿಸುತ್ತಿಲ್ಲ. ಈ ದೇವಸ್ಥಾನ ನಡೆಸುವ ಉಸ್ತುವಾರಿ ಆಡಳಿತಗಾರರು, ಅವರು ಯಾರೇ ಆಗಿರಲಿ ನೂರಾರು ಜನರ ಪ್ರಾಣಕ್ಕೆ ಕಂಟಕ ಆಗುವ ದುಃಸ್ಥಿತಿಯಲ್ಲಿರುವ ಮೇಲ್ಛಾವಣಿ ದುರಸ್ಥಿಗೆ ಗಂಭೀರ ಗಮನ ಹರಿಸಿ, ಶೀಘ್ರ ಕಾರ್ಯಪ್ರವೃತ್ತ ರಾಗಬೇಕೆಂದು ಕಳಕಳಿಯ ಮನವಿ.

–ಪ್ರೊ. ಎಂ.ಎಸ್.ಎಸ್.ಶರ್ಮ, ಸಮಾಜ ಸೇವಕರು, ಮೈಸೂರು.

### ಕಾಮಾಕ್ಷಿ ಆಸ್ಪತ್ರೆ ರಸ್ತೆ ಶೀಘ್ರ ದುರಸ್ತಿಗೊಳಿಸಿ



ಮಾನ್ಯರೆ,

ನಗರದ ಕಾಮಾಕ್ಷಿ ಆಸ್ಪತ್ರೆ ಬಳಿಯ ರಸ್ತೆಯನ್ನು ಕಾಮಗಾರಿ ಸಲುವಾಗಿ ಮೂರ್ನಾಲ್ಕು ತಿಂಗಳ ಹಿಂದೆ ಅಗೆದು, ಕಾಮಗಾರಿ ನಂತರ ಸರಿಯಾಗಿ ಮುಚ್ಚದೆ, ರಸ್ತೆ ಪೂರ ಹಳ್ಳಕೊಳ್ಳಗಳಿಂದ ಕೂಡಿದ್ದು, ರಸ್ತೆ ತುಂಬಾ ಬರೀ ಧೂಳು ತುಂಬಿದೆ. ಈ ರಸ್ತೆ ಅಕ್ಕಪಕ್ಕದಲ್ಲೇ ಆಸ್ಪತ್ರೆ, ಶಾಲಾ ಕಾಲೇಜು ಉದ್ಯಾನವನ, ಆಟೋ ನಿಲ್ದಾಣ, ಉಪಹಾರ ಮಂದಿರ ಮಂದಿರ ಇರುವುದರಿಂದ ಸಹಜವಾಗಿಯೇ ಇಲ್ಲಿ ಜನಸಂದಣಿ ಹೆಚ್ಚಾಗಿದ್ದು, ವಾಹನ ಸವಾರರೂ ಹಾಗೂ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಕೂಡಲೇ ಎಚ್ಚೆತ್ತು ರಸ್ತೆ ದುರಸ್ಥಿಗೊಳಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

### ಇವೇನು ಶಾಸಕರು, ಕಾರ್ಪೋರೇಟರ್‌ಗಳ ದುಡಿಮೆಯಿಂದ ನಿರ್ಮಾಣವಾದ ತಂಗುದಾಣಗಳಲ್ಲ!

ಮಾನ್ಯರೆ,

ಮೈಸೂರು ನಗರದ ಹಲವಾರು ಕಡೆಗಳಲ್ಲಿ (ರಾಜ್ಯದ ಹಲವಾರು ಕಡೆಗಳಲ್ಲೂ) ಈಗಾಗಲೇ ನಿರ್ಮಾಣವಾಗಿರುವ, ಈಗ ನಿರ್ಮಾಣವಾಗುತ್ತಿರುವ ಸಾರ್ವಜನಿಕ ಬಸ್ ತಂಗುದಾಣಗಳಿಗೆ ಸ್ಥಳೀಯ ಶಾಸಕರ ಮತ್ತು ಸ್ಥಳೀಯ ಕಾರ್ಪೊರೇಟ್‌ಗಳ ಹೆಸರು ಮತ್ತು ಫೋಟೋಗಳನ್ನು ಹಾಕಿರುವುದು ಎಷ್ಟರಮಟ್ಟಿಗೆ ಸರಿ ಎನ್ನಿಸುತ್ತದೆ. ಇವರು ತಮ್ಮ ಸ್ವಂತ ದುಡಿಮೆ ಹಣದಿಂದ ನಿರ್ಮಾಣ ಮಾಡಿರುವ ಬಸ್ ತಂಗುದಾಣಗಳಲ್ಲ. ಸಾರ್ವಜನಿಕರ ತೆರಿಗೆ ಹಣದಿಂದಲೇ ನಿರ್ಮಾಣ ಮಾಡಿರುವ ಬಸ್ ತಂಗುದಾಣಗಳು.

ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದ ಯೋಜನೆಯಡಿ ನಿರ್ಮಾಣವಾಗಿರುವ ಬಸ್ ನಿಲ್ದಾಣಗಳು. ಅಲ್ಲದೆ ಈ ಸಾರ್ವಜನಿಕ ಬಸ್ ನಿಲ್ದಾಣಗಳು ಸರಿಯಾದ ರೀತಿಯಲ್ಲಿ ನಿರ್ವಹಣೆ ಇಲ್ಲದೆಯೇ ಹಾಳು ಕೊಂಪೆಯಾಂತಾಗಿ ಭಿಕ್ಷುಕರ ತಂಗುದಾಣಗಳಾಗುತ್ತಿವೆ. ಈ ಬಸ್ ತಂಗುದಾಣಗಳಿಗೆ 'ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ನಿರ್ಮಿಸಿದ ಬಸ್ ತಂಗುದಾಣ' ಎಂದು ಹೆಸರಿಟ್ಟರೆ ಸಾಕು. ಈ ಬಗ್ಗೆ ಸರ್ಕಾರ ಸರಿಯಾದ ತೀರ್ಮಾನ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

### ರೂಪ ಮತ್ತು ರೋಹಿಣಿ ಸಿಂಧೂರಿ ವಿರುದ್ಧ ಕ್ರಮಕ್ಕೆ ಒತ್ತಾಯ





ಮಾನ್ಯರೆ,

ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಾದ ಶ್ರೀಮತಿ ರೋಹಿಣಿ ಸಿಂಧೂರಿ ಮತ್ತು ರೂಪ ಅವರು ಸರ್ಕಾರಿ ನಿಯಮಾವಳಿ ಮರೆತು ಕಾನೂನಿಗೆ ಕಿಂಚಿತ್ತೂ ಗೌರವ ನೀಡದೆ ತಮ್ಮ ವೈಯಕ್ತಿಕ ಈರ್ಷೆಗಳಿಗೆ ಜೋತು ಬಿದ್ದು, ತಮ್ಮ ತಮ್ಮಗಳ ಗೌರವವನ್ನು ಮರೆತು ಬೀದಿ ರಂಪಾದ ಮೂಲಕ ಸರ್ಕಾರದ ಗೌರವಕ್ಕೆ ಚ್ಯುತಿ ತರುವ ಕೆಲಸ ಮಾಡಿದ್ದಾರೆ. ಸಾಮಾಜಿಕ ಜಾಲತಾಣ ಗಳಲ್ಲಿ ಆರೋಪ–ಪ್ರತ್ಯಾರೋಪ ಮಾಡುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ. ಸರ್ಕಾರದ ಮರ್ಯಾದೆ, ಘನತೆ ಗೌರವಕ್ಕೆ ಇವರಿಬ್ಬರ ವರ್ತನೆಯಿಂದ ಧಕ್ಕೆ ಉಂಟಾಗಿದ್ದರೂ ಸರ್ಕಾರ ಇವರ ಬಗ್ಗೆ ಯಾವುದೇ ಯಾವುದೇ ಶಿಸ್ತು ಕ್ರಮ ಜರುಗಿಸದೆ ಇರುವುದು ಸರ್ಕಾರದ ಅಸಮರ್ಥತೆಯ ಪ್ರದರ್ಶನವಾಗಿದೆ. ಈ ವಿಚಾರದಲ್ಲಿ ಇವರ ರಕ್ಷಣೆ ಮಾಡುತ್ತಿರುವ ಸರ್ಕಾರದ ನಡೆ ನಿಗೂಢವಾಗಿದೆ. ಈಗಲಾದರೂ ಸರ್ಕಾರ ಇವರಿಬ್ಬರ ಬಗ್ಗೆ ಕಾನೂನು ಕ್ರಮ ಜರುಗಿಸಬೇಕು. ನಾಡಿನ ವಿದ್ಯಾವಂತ ಹೆಣ್ಣು ಮಕ್ಕಳಿಗೆ ಮಾದರಿಯಾಗಬೇಕಿದ್ದ, ಭಾರತದ ಪ್ರತಿಷ್ಠಿತ ವಿದ್ಯಾರ್ಹತೆಯನ್ನು ಹೊಂದಿರುವ ಇವರ ವರ್ತನೆ ನಾಚಿಕೆಗೇಡು. ತಾವಿರುವ ಸ್ಥಾನಮಾನದ ಗೌರವ ಅರಿತು ಇನ್ನು ಮುಂದಾದರೂ ನಡೆಯಲಿ.

–ಕೆ.ಸಿ.ಬಸವರಾಜಸ್ವಾಮಿ, ಕಬ್ಬಳ್ಳಿ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

**ಸಂಸ್ಕೃತಿ ಚಿಂತನಾ**


# ಆಧ್ಯಾತ್ಮಿಕ ಆರೋಗ್ಯ ದರ್ಶನ



**ಡಾ.** ಎಸ್.ಪಿ.ಯೋಗಣ್ಣ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿ ಗುರುತಿಸಿಕೊಂಡಿರುವಂತೆ, ಸಾಹಿತ್ಯ ಕ್ಷೇತ್ರದಲ್ಲೂ ಹೆಸರನ್ನು ಗಳಿಸಿ ದೊಡ್ಡ ಕೊಡುಗೆಯನ್ನು ಕನ್ನಡಕ್ಕೆ ಕೊಡುತ್ತಿದ್ದಾರೆ. 2020 ನೆಯ ಇಸವಿಯಲ್ಲಿ ಅವರು ಪ್ರಕಟಿಸಿದ **ಆಧ್ಯಾತ್ಮಿಕ ಆರೋಗ್ಯ ದರ್ಶನ** ಕೃತಿಯು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿರುವುದಲ್ಲದೆ 2022ರಲ್ಲಿ ಮರು ಮುದ್ರಣವನ್ನೂ ಕಂಡಿದೆ ಎಂಬುದು ಉಲ್ಲೇಖನಾರ್ಹ ಸಂಗತಿಯಾಗಿದೆ. 526 ಪುಟಗಳನ್ನು ಹೊಂದಿ ಬೃಹತ್ತಾಗಿರುವ ಈ ಗ್ರಂಥ ಪಠನಾರ್ಹ ಮಾತ್ರವಲ್ಲ, ಮನನಾರ್ಹವೂ ಆಗಿದೆ. ಸಾಮಾನ್ಯ ಜನರಿರಲಿ, ಆಧ್ಯಾತ್ಮ ಪ್ರಪಂಚದ ಮೇರು ಶಿಖರದಂತಿದ್ದ ಪ್ರಾತಃಸ್ಮರಣೀಯ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು "ಆರೋಗ್ಯದ ಪ್ರಮುಖ ಆಯಾಮಗಳಾದ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಆರೋಗ್ಯಗಳನ್ನು ಒಳಗೊಂಡಿದ್ದು, ಇವೆಲ್ಲವನ್ನು ಸಮನ್ವಯಗೊಳಿಸಿ ಸಕಾರಾತ್ಮಕವಾಗಿ ನಿಯಂತ್ರಿಸುವ ಆಧ್ಯಾತ್ಮಿಕ ಆರೋಗ್ಯವನ್ನು ಆಧುನಿಕ ವೈದ್ಯ ವಿಜ್ಞಾನದ ತಳಹದಿಯ ಮೇಲೆ ಈ ಕೃತಿಯನ್ನು ವಿಶ್ಲೇಷಿಸಿ ಪ್ರಚುರಪಡಿಸಿರುವುದು ಅದ್ವಿತೀಯವಾಗಿದೆ" ಎಂದು ಹೇಳಿರುವುದರಿಂದ ಈ ಗ್ರಂಥದ ಹಿರಿಮೆಯ ಬಗೆಗೆ ಬೇರೆ ಹೇಳಬೇಕಾಗಿಲ್ಲ. ಸ್ವಯಂ ವೈದ್ಯರೂ, ಸಾಹಿತಿಗಳೂ ಆಗಿ ವಿಶ್ವ ವಿಖ್ಯಾತರಾಗಿರುವ ಡಾ. ನಾ.ಸೋಮೇಶ್ವರ ಅವರು "ಅಧ್ಯಾತ್ಮ ಮತ್ತು ಆರೋಗ್ಯ ಅಂಚಿಲ್ಲದ ಮಹಾಸಾಗರ! ನಾನ್ಯಾರು ಎಂಬುದನ್ನು ಎತ್ತಿಕೊಂಡು ದೇಹ, ಆತ್ಮ ಮತ್ತು ಮನಸ್ಸುಗಳ ಸಮ್ಮಿಳಿತ ಮಹಾಸಾಗರದಲ್ಲಿ ಓದುಗರನ್ನು ವಿಹಾರಿಸಲು ಕರೆದೊಯ್ಯುವ ಮಹತ್ಕೃತಿ ಇದಾಗಿದೆ" ಎಂದು ಪ್ರಶಂಸಿಸಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ಮುನ್ನುಡಿಯನ್ನು ಬರೆದಿರುವ ಡಾ. ಪಿ.ಎಸ್.ಶಂಕರ್ "ಈ ಬಗೆಯ ಗ್ರಂಥ ಕನ್ನಡದಲ್ಲಿಯಾಗಲೀ, ಬೇರೆ ಭಾಷೆಗಳಲ್ಲಾಗಲೀ ಬಂದಿಲ್ಲ" ಎಂದು ಕೊಂಡಾಡಿದ್ದಾರೆ.

ದೇಶದಲ್ಲಿ ಸಹಸ್ರಾರು ವೈದ್ಯರಿರುವಾಗ ಡಾ.ಎಸ್.ಪಿ. ಯೋಗಣ್ಣ ಅವರಿಗೆ ಮಾತ್ರ ಇಂಥ ಗ್ರಂಥವನ್ನು ರಚಿಸಲು ಸಾಧ್ಯವಾಯಿತು ಎಂದರೆ ಅದಕ್ಕೆ ಕಾರಣ ಅವರ ವಿಶಾಲವೂ, ಗಂಭೀರವೂ ಆದ ಅಧ್ಯಯನ. ಅವರು ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳನ್ನು ಆಮೂಲಾಗ್ರವಾಗಿ ಓದಿರುವುದಲ್ಲದೆ, ನಮ್ಮ ಪರಂಪರೆಯ ಮೂಲಕೃತಿಗಳಾದ ವೇದೋಪನಿಷತ್ತುಗಳನ್ನೂ ಮನಸ್ಸಿಟ್ಟು ಓದಿ ಅರಿತುಕೊಂಡಿದ್ದಾರೆ. ಪ್ರಕೃತ ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ನೋಡಿದರೆ ಸಾಕು, ಯೋಗಣ್ಣನವರ ಅಧ್ಯಯನದ ಆಳ–ಅಗಲಗಳು ತಿಳಿಯುತ್ತವೆ.

ಆರೋಗ್ಯ ಎಂದರೇನು ಎಂಬ ಮೂಲಭೂತ ಪ್ರಶ್ನೆಯನ್ನಿಟ್ಟು ಕೊಂಡು ಗ್ರಂಥದ ಆರಂಭವನ್ನು ಮಾಡಿದ್ದಾರೆ. ಆರೋಗ್ಯ ಎಂದರೆ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಸುಸ್ಥಿತಿಯಲ್ಲಿರುವ ಸ್ವಾಸ್ಥ್ಯ ಎಂದು ಯೋಗಣ್ಣನವರು ಹೇಳಿದ್ದಾರೆ. ಅವರು ಯಾವ ವಿಚಾರವನ್ನು ಮಂಡಿಸಿದರೂ ಅದಕ್ಕೆ ನಿರ್ದಿಷ್ಟವಾದ ಉದಾಹರಣೆಗಳನ್ನು




ಕೊಡುತ್ತಾರೆ. 'ಏರು ರಕ್ತದೊತ್ತಡದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಶೇ.10ರಿಂದ 15ರಷ್ಟು ಮಂದಿಯಲ್ಲಿ ಮಾತ್ರ ತಡೆಗಟ್ಟಬಹುದಾಗಿರುತ್ತದೆ. ಇನ್ನುಳಿದ ಶೇ.90ರಿಂದ 85ರಷ್ಟು ಮಂದಿಯಲ್ಲಿ ಏರು ರಕ್ತದೊತ್ತಡ ಯಾವುದೇ ಬಗೆಯ ಅನಾಹುತವನ್ನು ಉಂಟುಮಾಡುವುದಿಲ್ಲ ಎಂಬುದು ದೃಢಪಟ್ಟಿರುವ ಅಂಶವಾಗಿರುತ್ತದೆ" ಎಂದು ಅವರು ಹೇಳಿದ್ದಾರೆ (ಪು.22). ಇದನ್ನು ಬೇರೆ ವೈದ್ಯರು ಒಪ್ಪುವರೋ ಇಲ್ಲವೋ ನನಗೆ ತಿಳಿಯದು. ಆದರೆ ತಮ್ಮ ಹೇಳಿಕೆಗೆ ಸಮರ್ಥನೆಯಾಗಿ ಯೋಗಣ್ಣನವರು ಉದಾಹರಣೆಯನ್ನು ಅದೇ ಪುಟದಲ್ಲಿ ಕೊಟ್ಟಿದ್ದಾರೆ. ಖ್ಯಾತ ಅಂಗರಚನಾ ಶಾಸ್ತ್ರಜ್ಞ ಗ್ರೇಸ್‌ನ ರಕ್ತದೊತ್ತಡ ಸದಾಕಾಲ 180/110 ಮಿ.ಮೀ. ಪಾದರಸದ ಗಡಿ ದಾಟಿರುತ್ತಿತ್ತು. ಏರು ರಕ್ತದೊತ್ತಡವನ್ನು ನಿಯಂತ್ರಿಸಿಕೊಳ್ಳದೆ ಆತ ಸುಮಾರು 80 ವರ್ಷಗಳ ಕಾಲ ಆರೋಗ್ಯಕರವಾಗಿ ಬದುಕಿದ್ದ ಎಂಬ ದೃಷ್ಟಾಂತವನ್ನು ನೀಡಿದ್ದಾರೆ.

'ಅಧ್ಯಾತ್ಮ' ಎಂಬಲ್ಲಿ ಆತ್ಮ ಶಬ್ದವಿದೆ. ಆತ್ಮ ಎಂದರೆ ಏನು? ಆತ್ಮನ ಲಕ್ಷಣವೇನು? ಆತ್ಮ ಶಾಶ್ವತವೋ ಅಶಾಶ್ವತವೋ ಎಂಬ ಪ್ರಶ್ನೆಗಳು ಅನಾದಿ ಕಾಲದಿಂದ ಮಾನವರ ಚಿಂತೆಗೆ ಕಾರಣವಾಗಿವೆ. ವೇದಾಂತ ಮುಂತಾದ ಶಾಸ್ತ್ರಗಳು ಶಾಶ್ವತವಾದ ಆತ್ಮ ತತ್ತ್ವವನ್ನು ಒಪ್ಪಿವೆ. ಆದರೆ ಡಾ.ಯೋಗಣ್ಣನವರು ಬೇರೆ ರೀತಿಯಲ್ಲಿ ಇದನ್ನು ವಿವರಿಸಿದ್ದಾರೆ.

"ಹೃದಯದ ಕಾರ್ಯವೂ ಸಹ ಅದರಲ್ಲುಂಟಾಗುವ ಜೈವಿಕ ವಿದ್ಯುತ್‌ನಿಂದ ಆಗುತ್ತಿದ್ದು, ಹೃದಯದ ಕಾರ್ಯದಿಂದಾದ ರಕ್ತ ಪರಿಚಲನೆಯಿಂದ ಎಲ್ಲ ಜೀವಕೋಶಗಳಿಗೂ ರಕ್ತದ ಮೂಲಕ ಆಹಾರಾಂಶ, ಆಮ್ಲಜನಕ ಸರಬರಾಜಾಗಿ, ಅವುಗಳಲ್ಲಿ ಜೈವಿಕ ಶಕ್ತಿ ಉತ್ಪತ್ತಿಯಾಗುತ್ತದೆ. ಹಾಗಾಗಿ ಹೃದಯದ ಜೈವಿಕ ವಿದ್ಯುತ್ ಶಕ್ತಿ ಇನ್ನಿತರ ಎಲ್ಲ ಜೀವಕೋಶಗಳ ಜೈವಿಕ ಶಕ್ತಿಯನ್ನು ನಿಯಂತ್ರಿಸುವುದರಿಂದ ಇದನ್ನೇ ಆತ್ಮವೆಂದು ಪರಿಗಣಿಸಬಹುದಾಗಿದೆ (ಪು.31).

ಆತ್ಮ ಶಾಶ್ವತ, ಅದಕ್ಕೆ ಪುನರ್ಜನ್ಮ ಉಂಟು ಎಂಬುದು ಭಾರತೀಯ ದಾರ್ಶನಿಕರನೇಕರ ನಂಬಿಕೆ. ಅದನ್ನು ಡಾ. ಯೋಗಣ್ಣನವರು ಅಲ್ಲ ಗಳೆದಿಲ್ಲ. ಅವರ ದೀರ್ಘಾನುಭವದ ಮಾತು ಗಳಿಂತಿವೆ. "ಪುನರ್ಜನ್ಮದ ಕೆಲವು ಪ್ರಸಂಗಗಳನ್ನು ನಾನು ನನ್ನ ಬದುಕಿನಲ್ಲಿ ಕಂಡಿದ್ದೇನೆ. ಯುವಕ ರೋಗಿಯೊಬ್ಬ ತಾನು ಹಿಂದಿನ ಜನ್ಮದಲ್ಲಿ ಬಾಂಬೆಯಲ್ಲಿ ಶ್ರೀಮಂತನ ಮನೆಯಲ್ಲಿ ಹುಟ್ಟಿದ್ದೆನೆಂದು ವಿಳಾಸಗಳೆಲ್ಲವನ್ನು ಹೇಳುತ್ತಿದ್ದ. ಅವನ ಮಾಹಿತಿಗಳನ್ನು ಪರೀಕ್ಷಿಸ

> ಕೆಲವರು ಸಾಹಿತ್ಯವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಅವರಿಗೆ ಜೀವನದ ಅನೇಕ ಮುಖಗಳ ಪರಿಚಯವಿರುವುದಿಲ್ಲ. ಅಂಥವರು ಆಧ್ಯಾತ್ಮಿಕ ಆರೋಗ್ಯ ದರ್ಶನದಂಥ ಗ್ರಂಥವನ್ನು ಬರೆಯಲಾರರು. ಡಾ. ಯೋಗಣ್ಣನವರು ಪ್ರತಿ ದಿನ ಅನೇಕ ವಿಧದ ರೋಗಿಗಳನ್ನು ಕಂಡು ಅವರ ಸಮಸ್ಯೆಗಳನ್ನು ಕೂಲಂಕಷವಾಗಿ ಅರಿತುಕೊಂಡು ಚಿಕಿತ್ಸೆ ಮಾಡಿದವರು. ಬದುಕೆಂಬ ಮನೆಯ ಒಳ ಕೋಣೆಗಳನ್ನು ಹೊಕ್ಕು ನೋಡಿದವರು. ಅವರು ಕೊಟ್ಟಿರುವ ಅನೇಕ ಉದಾಹರಣೆಗಳು ಮನಸ್ಸನ್ನು ಕಲಕುವಂತಿವೆ.

ಲಾಗಿ ಅವು ಸತ್ಯ ಸಂಗತಿಗಳಾಗಿದ್ದುವು (ಪು.34).

ಈ ಬೃಹದ್ ಗ್ರಂಥದಲ್ಲಿರುವ ವಿಷಯಗಳು ನೂರಾರು. ಅವುಗಳನ್ನು ಆಸಕ್ತರು ಗ್ರಂಥವನ್ನು ಓದಿಯೇ ತಿಳಿದುಕೊಳ್ಳಬೇಕು. **ದೇವರು** ಎಂಬ ಒಂದು ವಿಷಯ ಮಾನವ ಕುಲದ ಅನಂತ ವಿಚಾರಗಳಿಗೆ ಕಾರಣವಾಗಿರುವುದನ್ನು ಡಾ. ಯೋಗಣ್ಣ ಪ್ರಸ್ತಾಪಿಸಿದ್ದಾರೆ. "ಕಣ್ಮುಂದೆ ಕಾಣುವ ವಾಸ್ತವ ಪ್ರಸಂಗಗಳಿಗೆ ಸ್ಪಷ್ಟವಾದ ಕಾರಣಗಳನ್ನು ಗುರುತಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ **ಅಗೋಚರ ಶಕ್ತಿಯ** ಮೇಲೆ ಹೊಣೆ ಹಾಕಿ ಕೈಕಟ್ಟಿ ಕುಳಿತುಕೊಳ್ಳುವುದು ಮನುಷ್ಯ ಸಹಜವಾದ ಮನೋಭಾವವಾಗಿರುತ್ತದೆ. ಈ ಮನೋಭಾವದಿಂದಲೇ ದೇವರು ಸೃಷ್ಟಿಯಾಗಿರಬಹುದು" (ಪು.132) ಎಂದು ಅವರು ಹೇಳಿದ್ದಾರೆ. ಆಸ್ತಿಕ ಅಥವಾ ನಾಸ್ತಿಕ ಪಕ್ಷವನ್ನೇ ಎತ್ತಿ ಹಿಡಿಯಲು ಅವರು ಪ್ರಯತ್ನಿಸಿಲ್ಲ.

ಸೃಷ್ಟಿಯ ಅಂತಿಮ ಸತ್ಯಗಳು ಎಂಬ ಹದಿನೇಳನೆಯ ಅಧ್ಯಾಯದಲ್ಲಿ "ಸೃಷ್ಟಿಗೆ ಸೃಷ್ಟಿಕರ್ತನೊಬ್ಬನಿದ್ದು, ಇಡೀ ಸೃಷ್ಟಿ ಅತೀತ ಶಕ್ತಿಯ ನಿಯಂತ್ರಣದಲ್ಲಿದೆ" ಎಂದು ಮೊಲನೆಯ ಸತ್ಯವನ್ನು ಡಾ. ಯೋಗಣ್ಣ ಪ್ರತಿಪಾದಿಸಿದ್ದಾರೆ (ಪು.138). ಇದರಿಂದ ಅವರು ದೇವರ ಅಸ್ತಿತ್ವವನ್ನು ಒಪ್ಪಿಕೊಂಡು ಆಸ್ತಿಕರಾದಂತಾಯಿತು. ಆದರೆ ಇದನ್ನು ಬೌದ್ಧ ಮತ್ತು ಜೈನ ದಾರ್ಶಕನಿಕರು ಒಪ್ಪುವುದಿಲ್ಲ. ಚಾರ್ವಾಕಾ ನುಯಾಯಿಗಳಂತೂ ಇದನ್ನು ಸತ್ಯವೆಂದೇ ಭಾವಿಸರು.

ಮಾನವ ಶರೀರದ ವಿವಿಧ ಅಂಗಗಳನ್ನು ಚಿತ್ರ ಸಹಿತವಾಗಿ ವಿವರಿಸಿ ಡಾ. ಯೋಗಣ್ಣನವರು ಅವುಗಳಿಗೆ ಉಂಟಾಗಬಹುದಾದ ರೋಗಗಳನ್ನು ಅವುಗಳ ಪರಿಹಾರೋಪಾಯಗಳನ್ನೂ ವಿವರಿಸಿದ್ದಾರೆ. ಮಾನವನು ತನ್ನ ದುರಭ್ಯಾಸಗಳಿಂದ ಅನೇಕ ರೋಗಗಳನ್ನು ತಂದುಕೊಳ್ಳುತ್ತಾನೆ. ಧೂಮಪಾನ, ಮದ್ಯಪಾನ, ಅತಿಯಾದ ಆಹಾರ ಸೇವನೆ, ಸಕ್ಕರೆ, ಉಪ್ಪು ಮುಂತಾದುವನ್ನು ಮಿತಿ ಮೀರಿ ಬಳಸುವುದು, ವ್ಯಾಯಾಮವನ್ನು ಮಾಡದೆ ಸೋಮಾರಿತನದಿಂದ ಕಾಲವನ್ನು ಕಳೆಯುವುದು–ಇತ್ಯಾದಿಗಳು ರೋಗಗಳನ್ನು ಆಹ್ವಾನಿಸುತ್ತವೆ. ಈ ತೊಂದರೆಗಳಿಂದ ಮುಕ್ತಿಯನ್ನು ಪಡೆಯಲು ಅನೇಕ ಉಪಾಯಗಳನ್ನು ಈ ಗ್ರಂಥವು ತಿಳಿಸುತ್ತದೆ.

ಡಾ. ಯೋಗಣ್ಣ ಅವರು ಗ್ರಂಥದ ಗರಿಮೆಯನ್ನು ಹೆಚ್ಚಿಸಲು ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿದ್ದಾರೆ. ಇದು ಸ್ವಾಗತಾರ್ಹ. ಆದರೆ ಮುದ್ರಣಕ್ಕೆ ಮೊದಲು ಈ ಶ್ಲೋಕಗಳನ್ನು ಸಂಸ್ಕೃತ ಭಾಷೆಯನ್ನು ತಿಳಿದ ಯಾರಿಗಾದರೂ ತೋರಿಸಿ ತಪ್ಪುಗಳನ್ನು ತಿದ್ದಿಸಬೇಕಾಗಿತ್ತು. ತಪ್ಪಾಗಿ ಶ್ಲೋಕಗಳನ್ನು ಕೊಡುವುದಕ್ಕಿಂತ ಕೊಡದಿರುವುದೇ ಲೇಸು. 413ನೆಯ ಪುಟದಲ್ಲಿ ಅವರು ಕೊಟ್ಟಿರುವ ಶ್ಲೋಕ ಹೀಗಿದೆ –

**ವಿದ್ಯಾದದಾತಿ ವಿನಯಂ**
**ವಿನಯ ದದಾತಿ ಪಾತ್ರತಾಂ**
**ಪಾತ್ರ ತ್ವಂ ಧನಂ ಅಪ್ನೋತಿ ತತ್**
**ದಾನ ಧರ್ಮ ಸುಖಂ**

ಇದರಲ್ಲಿ ಅನೇಕ ತಪ್ಪುಗಳಿವೆ. ಸರಿಯಾಗಿ ಶ್ಲೋಕವನ್ನು ಹೀಗೆ ಮುದ್ರಿಸಬೇಕಾಗಿತ್ತು–

**ವಿದ್ಯಾ ದದಾತಿ ವಿನಯಂ**
**ವಿನಯಾದ್ಯಾತಿ ಪಾತ್ರತಾಮ್।**
**ಪಾತ್ರತ್ವಾದ್ ಧನಮಾಪ್ನೋತಿ**
**ಧನಾದ್ ಧರ್ಮಂ ತತಃ ಸುಖಮ್॥**

ಮುಂದಿನ ಮುದ್ರಣದಲ್ಲಾದರೂ ಇಂಥ ತಪ್ಪುಗಳಾಗದಂತೆ ನೋಡಿಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

ಕೆಲವರು ಸಾಹಿತ್ಯವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಅವರಿಗೆ ಜೀವನದ ಅನೇಕ ಮುಖಗಳ ಪರಿಚಯವಿರುವುದಿಲ್ಲ. ಅಂಥವರು ಆಧ್ಯಾತ್ಮಿಕ ಆರೋಗ್ಯ ದರ್ಶನದಂಥ ಗ್ರಂಥವನ್ನು ಬರೆಯಲಾರರು. ಡಾ. ಯೋಗಣ್ಣನವರು ಪ್ರತಿ ದಿನ ಅನೇಕ ವಿಧದ ರೋಗಿಗಳನ್ನು ಕಂಡು ಅವರ ಸಮಸ್ಯೆಗಳನ್ನು ಕೂಲಂಕಷವಾಗಿ ಅರಿತುಕೊಂಡು ಚಿಕಿತ್ಸೆ ಮಾಡಿದವರು. ಬದುಕೆಂಬ ಮನೆಯ ಒಳ ಕೋಣೆಗಳನ್ನು ಹೊಕ್ಕು ನೋಡಿದವರು. ಅವರು ಕೊಟ್ಟಿರುವ ಅನೇಕ ಉದಾಹರಣೆಗಳು ಮನಸ್ಸನ್ನು ಕಲಕುವಂತಿವೆ. ಒಂದು ಉದಾಹರಣೆ –

'ತಾಯಮ್ಮ 70 ವರ್ಷದ ಮಹಿಳೆ. ತನ್ನ ಮಗ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದ ಸುದ್ದಿಯನ್ನು ಕೇಳಿದಾಕ್ಷಣ ಅತೀವ ಸಂತೋಷ ಕ್ಕೀಡಾದಳು. ತಕ್ಷಣ (ತತ್‌ಕ್ಷಣ) ಎದೆ ನೋವು ಕಾಣಿಸಿ ಕೊಂಡಿತು. ಪರೀಕ್ಷೆ ಮಾಡಲಾಗಿ, ಹೃದಯಾಘಾತಕ್ಕೀಡಾಗಿದ್ದಳು. 70 ವರ್ಷಗಳಾಗಿದ್ದೂ ಈ ಹಿಂದೆ ಯಾವ ಬಗೆಯ ತೊಂದರೆಗಳಿರಲಿಲ್ಲ. ಹೃದಯಾಘಾತಕ್ಕೆ ಮತ್ತಾವ ಕಾರಣಗಳಿರಲಿಲ್ಲ. ಚಿಕಿತ್ಸೆ ಫಲಕಾರಿಯಾಗದೆ ಆಕೆ ಸಾವನ್ನಪ್ಪಿದಳು. ಅತಿಯಾದ ಸಂತೋಷವೇ ಆಕೆಗೆ ಸಾವಾಗಿ ಪರಿಣಮಿಸಿತ್ತು! ಮಾನವ ಸೃಷ್ಟಿಯೇ ವಿಸ್ಮಯಕಾರಿ! ಅತಿಯಾದ ಸುಖ ದುಃಖಗಳೆರಡೂ ಸಾವಿಗೆ ಕಾರಣವಾಗಬಹುದು' (ಪು.212).

ಇದನ್ನು ನಂಬುವುದೂ ಕಷ್ಟ. ಬೇರೆ ಯಾರಾದರೂ ಈ ಘಟನೆಯನ್ನು ಹೇಳಿದ್ದರೆ ನಾನು ನಂಬುತ್ತಿರಲಿಲ್ಲ. ಆದರೆ ಡಾ. ಯೋಗಣ್ಣನವರು ಸ್ವಯಂ ನೋಡಿರುವುದನ್ನು ದಾಖಲಿಸಿರುವುದರಿಂದ ನಂಬಬೇಕು. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ **'ಸುಖ ದುಃಖೇ ಸಮೋ ಕೃತ್ವಾ'** ಎಂದು ಹೇಳಿದ್ದು ಎಷ್ಟು ಒಳ್ಳೆಯ ಉಪದೇಶ ಅಲ್ಲವೆ?

ಈ ಅನೇಕ ಕಾರಣಗಳಿಂದ **ಆಧ್ಯಾತ್ಮಿಕ ಆರೋಗ್ಯ ದರ್ಶನ** ಅಮೂಲ್ಯ ಪುಸ್ತಕ. ಇದನ್ನು ವೈದ್ಯರೂ, ರೋಗಿಗಳೂ, ರೋಗ ಬರಬಾರದೆಂದು ಅಪೇಕ್ಷಿಸುವವರೂ ಓದಬೇಕು. ತಮ್ಮ ಅನುಭವವನ್ನು ಭಟ್ಟಿ ಇಳಿಸಿ ಸಾರಭೂತವಾದ ಸಾಹಿತ್ಯವನ್ನು ನೀಡಿರುವ ಡಾ. ಎಸ್.ಪಿ.ಯೋಗಣ್ಣನವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಹೇಳೋಣ.

# ಎಸಿಬಿ ರಚನೆಯನ್ನು ಕೋರ್ಟ್ ಸಮರ್ಥಿಸಿತ್ತು

● ವಿಪಕ್ಷ ನಾಯಕ ಸಿದ್ದರಾಮಯ್ಯ ಸಮರ್ಥನೆ ● ಈ ವಿಷಯದಲ್ಲಿ ಜನರ ದಿಕ್ಕು ತಪ್ಪಿಸುವ ಕಾರ್ಯ ನಡೆಯುತ್ತಿದೆ. ● ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳೂ ಸೇರಿ 16 ರಾಜ್ಯಗಳಲ್ಲಿ ಎಸಿಬಿ ಇದೆ ● ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಏಕೆ ಎಸಿಬಿ ರದ್ದುಪಡಿಸಿಲ್ಲ



ಬೆಂಗಳೂರು, ಫೆ.21(ಕೆಎಂಶಿ)– ರಾಜ್ಯ ಬಿಜೆಪಿ ಸರ್ಕಾರದ ಬಜೆಟ್ ಮೇಲಿನ ಚರ್ಚೆ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ ಇಂದು ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಎಸಿಬಿ ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದ ಒಟ್ಟು 16 ರಾಜ್ಯಗಳಲ್ಲಿ ಇದೆ. ಎಸಿಬಿ ರಚನೆ ಮಾಡಿ ಲೋಕಾಯುಕ್ತದ ಅಧಿಕಾರ ಕಸಿಯಲಾಗಿದೆ ಎಂದು ಹೇಳುವುದು ಸರಿಯಲ್ಲ. ಅಡ್ವೋಕೇಟ್ ಜನರಲ್ ಅವರು ಎಸಿಬಿ ರಚನೆ ಮಾಡಿರುವುದು ಸರಿ ಎಂದು ಕೋರ್ಟ್‌ನಲ್ಲಿ ಹೇಳಿದ್ದಾರೆ. ಇದಕ್ಕೆ ವಿರುದ್ಧವಾಗಿ ಸರಕಾರ ಯಾಕೆ ಹೇಳಿಕೆ ಕೊಡಬೇಕು. ಕೋರ್ಟ್‌ನಲ್ಲಿ ಒಂದು ಹೊರಗಡೆ ಒಂದು ಭಿನ್ನ ನಿಲುವು ತಾಳು ತ್ತಿರುವುದೇಕೆ. ಸಿದ್ದರಾಮಯ್ಯ ಅವರು ತಮ್ಮ ಮೇಲಿನ ಆರೋಪಗಳಿಂದ ರಕ್ಷಣೆ ಪಡೆಯಲು ಉದ್ದೇಶಪೂರ್ವಕವಾಗಿ ಎಸಿಬಿ ರಚನೆ ಮಾಡಿ ಲೋಕಾಯುಕ್ತದ ಅಧಿಕಾರವನ್ನು ಕಿತ್ತುಕೊಂಡರು ಎಂದು ಜನರಿಗೆ ತಪ್ಪು ಮಾಹಿತಿ ನೀಡಲಾಗುತ್ತದೆ. ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳ ಲ್ಲಿಯೇ ಇನ್ನು ಏಕೆ ಎಸಿಬಿಯನ್ನು ರದ್ದು ಮಾಡಿಲ್ಲ. ನನ್ನ

ವಿರುದ್ಧ ಲೋಕಾಯುಕ್ತಕ್ಕೆ ನೀಡಿದ್ದ ಅನೇಕ ದೂರುಗಳು ಆಧಾರ ರಹಿತವಾದವು ಎಂದು ಲೋಕಾಯುಕ್ತದವರೇ ರದ್ದು ಮಾಡಿದ್ದಾರೆ ಎಂದರು. ರಾಜ್ಯ ಸರ್ಕಾರದ ವಿರುದ್ಧ ಅನೇಕ ಆರೋಪಗಳು ಬಂದ ಹೊರತಾಗಿಯೂ ಸರ್ಕಾರ ಯಾವುದೇ ತನಿಖೆ ಮಾಡಿಸಲಿಲ್ಲ. ಸರ್ಕಾರ ಈಗಲಾದರೂ ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯ ಮೂರ್ತಿಗಳ ನೇತೃತ್ವದಲ್ಲಿ ಒಂದು ತನಿಖಾ ಸಮಿತಿ ರಚನೆ ಮಾಡಿ ನಮ್ಮ ವಿರುದ್ಧ ಮತ್ತು ಈಗಿನ ಸರ್ಕಾರದ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ತನಿಖೆ ಮಾಡಿಸಲಿ. ಸುಮ್ಮನೆ ಆರೋಪ ಮಾಡುವುದರಿಂದ ಸತ್ಯ ಹೊರಬರುವುದಿಲ್ಲ ಎಂದು ವಾಗ್ದಾಳಿ ನಡೆಸಿದರು. ಅಬ್ಬಕ್ಕ ವರ್ಸಸ್ ಟಿಪ್ಪು ಸುಲ್ತಾನ್, ಗಾಂಧಿ ವರ್ಸಸ್ ಗೋಡ್ಸೆ ಇಂಥ ಭಾವನಾತ್ಮಕ ವಿಚಾರಗಳನ್ನು ಬಿಟ್ಟುಬಿಡಿ. ಅಭಿವೃದ್ಧಿ ವಿಚಾರಗಳ ಮೇಲೆ ಚರ್ಚೆ ಮಾಡೋಣ ಬನ್ನಿ. ಸಾರ್ವಜನಿಕವಾಗಿ ಅಭಿವೃದ್ಧಿ ವಿಷಯ ಚರ್ಚೆಯಾಗಲಿ. ಸಚಿವರೊಬ್ಬರು ಟಿಪ್ಪು ಸುಲ್ತಾನ್‌ನನ್ನು ಮೇಲೆ ಕಳಿಸಿದಂತೆ ಸಿದ್ದರಾಮಯ್ಯ ಅವರನ್ನು ಮೇಲೆ ಕಳಿಸಿ ಎಂದಿದ್ದಾರೆ.

ಹಣಕಾಸಿನ ಪರಿಸ್ಥಿತಿ ಬಹಳ ಸದೃಢವಾಗಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಆದರೆ ಇನ್ನೊಂದು ಕಡೆ ಆರ್ಥಿಕ ಇಲಾಖೆಯವರು, ನಾವು ಈಗಾಗಲೇ ವಿತ್ತೀಯ ಕೊರತೆ ಎದುರಿಸುತ್ತಿದ್ದೇವೆ. ಆ ಕಾರಣದಿಂದ ಯಾವುದೇ ಶಾಲೆಗಳನ್ನು ಗ್ರಾಂಟ್ ಇನ್ ಏಡ್‌ಗೆ ಸೇರಿಸೋಕೆ ಆಗಲ್ಲ. ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ ಎಂದು ಫೈಲ್ ಮೇಲೆ ಬರೆದಿದ್ದಾರೆ. ಕೊರೊನಾ, ಪ್ರವಾಹ ಬಂದ ಕಾರಣಕ್ಕೆ ನಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಿದೆ ಎಂದು ಕಾರಣ ಕೊಟ್ಟಿದ್ದಾರೆ. ಇಡೀ ಕೊರೊನಾ ನಿರ್ವಹಣೆಗೆ ಖರ್ಚು ಮಾಡಿರುವುದು 15 ರಿಂದ 16 ಸಾವಿರ ಕೋಟಿ ರೂ. ಪ್ರವಾಹಕ್ಕೆ ಖರ್ಚು ಮಾಡಿರುವುದು 6000 ಕೋಟಿ. ಪ್ರವಾಹದಿಂದ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಸುಮಾರು 3 ಲಕ್ಷ ಮನೆಗಳು ಹಾನಿಗೊಳಗಾಗಿತ್ತು, ಇದಕ್ಕೆ ಒಂದು ಕಂತು ಪರಿಹಾರ ಕೊಟ್ಟರು, ನಂತರದ ಕಂತು ಕೊಟ್ಟೆ ಇಲ್ಲ. 2022ರಲ್ಲಿ ಪ್ರವಾಹ ಬಂದಾಗ 1944 ಕೋಟಿ ಪರಿಹಾರ ಕೇಳಿ ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಇವತ್ತಿನ ವರೆಗೆ ಒಂದು ರೂಪಾಯಿ ಪರಿಹಾರ ಬಂದಿಲ್ಲ. ಈ ಸರ್ಕಾರವನ್ನು ಅತ್ಯಂತ ದುರ್ಬಲ ಸರ್ಕಾರ ಎನ್ನದೆ ಏನನ್ನಬೇಕು ಎಂದು ಮೂದಲಿಸಿದರು. 15ನೇ ಹಣಕಾಸು ಆಯೋಗದ ಮಧ್ಯಂತರ ವರದಿಯಲ್ಲಿ 5495 ಕೋಟಿ ವಿಶೇಷ ಅನುದಾನ ಶಿಫಾರಸು ಮಾಡಲಾಗಿತ್ತು. ರಾಜ್ಯದಿಂದ ಆಯ್ಕೆಯಾಗಿ ಕೇಂದ್ರ ಹಣಕಾಸು ಸಚಿವರಾಗಿರುವ ನಿರ್ಮಲಾ ಸೀತಾರಾಮನ್, ಇದನ್ನು ತಿರಸ್ಕಾರ ಮಾಡಿದರು. ರಾಜ್ಯದಿಂದ ಆಯ್ಕೆಯಾಗಿರುವ 25 ಜನ ಸಂಸದರಲ್ಲಿ ಒಬ್ಬರೂ ಈ ಬಗ್ಗೆ ಮಾತನಾಡಿಲ್ಲ ಎಂದು ಕುಟುಕಿದರು.

### ತಾಕತ್ತಿದ್ದರೆ ನನ್ನನ್ನು ಹೊಡೆದು ಹಾಕಿ...!

ಬೆಂಗಳೂರು, ಫೆ.21 (ಕೆಎಂಶಿ)–ದಮ್ಮು, ತಾಕತ್ತು ಇದ್ದರೆ ನನ್ನನ್ನು ಹೊಡೆದು ಹಾಕಿ ನಿಮ್ಮ ಬೆದರಿಕೆಗಳಿಗೆ ನಾನು ಹೆದರುವುದೂ ಇಲ್ಲ. ಕುಗ್ಗುವುದು ಇಲ್ಲ. ನನ್ನ ನಿಲುವಿನಲ್ಲಿ ಯಾವ ಬದಲಾವಣೆ ಇಲ್ಲ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಆಡಳಿತ ಪಕ್ಷಕ್ಕೆ ವಿಧಾನಸಭೆಯಲ್ಲಿಂದು ಸವಾಲು ಹಾಕಿದರು. ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂಪುಟದ ಸಚಿವರೊಬ್ಬರು ನನ್ನನ್ನು ಟಿಪ್ಪು ಸುಲ್ತಾನ್ ರೀತಿ ಹೊಡೆದು ಹಾಕಿ ಎಂದು ಕರೆ ಕೊಟ್ಟಿದ್ದಾರೆ. ನನ್ನನ್ನು ಹೆದರಿಸಬಹುದು ಎಂದು ಭಾವಿಸಿದ್ದರೆ, ಅದು ನಿಮ್ಮ ಭ್ರಮೆ. ಬಡವರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಸೇರಿದಂತೆ ಪ್ರತಿಯೊಬ್ಬರ ಪರವಾದ ನನ್ನ ಹೋರಾಟ ನಿಲ್ಲುವುದಿಲ್ಲ. ಸಚಿವರು ಬಳಸಿರುವ ಭಾಷೆ ಭೂಗತ ರೌಡಿಗಳು ಬಳಸುವ ಭಾಷೆಯಂತಿದೆ. ಸರ್ಕಾರ ಹಾಗೂ ಗೃಹ ಇಲಾಖೆ ಜೀವಂತವಾಗಿದ್ದರೆ ಕ್ರಮ ಕೈಗೊಳ್ಳಬೇಕಿತ್ತು ನೀವು ಒಳ್ಳೆಯವರು. ಆದರೆ, ಅಸಮರ್ಥ ಗೃಹಮಂತ್ರಿ ಎಂದು ಆರಗ ಜ್ಞಾನೇಂದ್ರ ವಿರುದ್ಧ ವಾಗ್ದಾಳಿ ನಡೆಸಿದರು. ಅಬ್ಬಕ್ಕ ಮತ್ತು ಟಿಪ್ಪು ಸುಲ್ತಾನ್, ಮಹಾತ್ಮ ಗಾಂಧಿ–ಗೋಡ್ಸೆ, ಗಾಂಧಿ–ಸಾವರ್ಕರ್ ಇದೆಲ್ಲ ಬಿಟ್ಟುಬಿಡಿ. ಅಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ ಬನ್ನಿ. ನಾನು ಸಿದ್ಧ, ನೀವು ಬನ್ನಿ, ಇಲ್ಲಿ ದಮ್ಮು–ತಾಕತ್ತು ತೋರಿಸಿ ಜನರನ್ನು ಭಾವನಾತ್ಮಕವಾಗಿ ಸೆಳೆದು ಮತಧ್ರುವೀಕರಣ ಮಾಡಿಕೊಳ್ಳಬಹುದು ಎಂದು ಭಾವಿಸಿದ್ದರೆ, ಜನತೆ ಒಪ್ಪುವುದಿಲ್ಲ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

# ಪ್ರಮುಖ ರಸ್ತೆಗೆ ಡಾಂಬರ್ ತೇಪೆ: ಕಾರ್ಪೊರೇಟರ್ ಶ್ರೀಧರ್ ಆಕ್ರೋಶ

● ಕಾಮಗಾರಿ ಸ್ಥಳಕ್ಕೆ ಸುಳಿಯದ ಮುಡಾ ಇಂಜಿನಿಯರ್‌ಗಳು
● ಗುತ್ತಿಗೆದಾರ ಹಾಕಿದ್ದೇ ಡಾಂಬರ್: ಸದ್ಯದಲ್ಲೇ ಹಾಳಾಗುವ ಅನುಮಾನ



ಮೈಸೂರು, ಫೆ.21(ಜಿಎ)– ಕಳಪೆ ರಸ್ತೆ ಕಾಮಗಾರಿ ಮೂಲಕ ಸಾರ್ವಜನಿಕರ ತೆರಿಗೆ ಹಣವನ್ನು ಹಾಳುಮಾಡಲಾಗುತ್ತಿದೆ ಎಂದು ಮೈಸೂರು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಮುಡಾ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್‌ವರೆಗಿನ ಸುಮಾರು 700 ಮೀಟರ್ ಉದ್ದದ ರಸ್ತೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದ ಅವರು, ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಕಳಪೆ ಗುಣಮಟ್ಟದ ಕಾಮಗಾರಿ ನಡೆಯುತ್ತಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

**ರಸ್ತೆ ಗುಣಮಟ್ಟದಿಂದ ಕೂಡಿದೆ...**
ರಸ್ತೆ ಡಾಂಬರೀಕರಣ ಗುಣಮಟ್ಟದಿಂದ ಕೂಡಿದ್ದು, ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ. ಡಾಂಬರೀಕರಣ ಪೂರ್ಣಗೊಂಡ ಬಳಿಕ ಪರಿಶೀಲಿಸಿದ ನಂತರವೇ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲಾಗುವುದು.
**- ಚೆನ್ನಕೇಶವ**, ಮುಡಾ ಸೂಪರಿಂಟೆಂಡೆಂಟ್ ಇಂಜಿನಿಯರ್

ಸಾಮಾನ್ಯವಾಗಿ ರಸ್ತೆಗೆ ಹಾಕುವ ಡಾಂಬರ್ ಗಾತ್ರ 50 ಎಂಎಂ(ಮಿಲಿ ಮೀಟರ್) ಇರಬೇಕು. ಆದರೆ, ಅಳತೆ ಮಾಪನದ ಮೂಲಕ ಪರಿಶೀಲಿಸಿದಾಗ 35 ಎಂಎಂ ಮಾತ್ರವಿದ್ದು, 15 ಎಂಎಂನಷ್ಟು ವ್ಯತ್ಯಾಸ ಕಾಣುತ್ತಿದೆ. ಈ ರೀತಿ ರಸ್ತೆಗೆ ತೆಳುವಾಗಿ ಡಾಂಬರ್ ಹಾಕಿದರೆ, ಒಂದೆರಡು ದಿನಗಳಲ್ಲಿಯೇ ಡಾಂಬರ್ ಕಿತ್ತು ಬರಲಿದೆ. ಮುಡಾ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕರ ತೆರಿಗೆ ಹಣ ಲೂಟಿಯಾಗುತ್ತಿದೆ ಎಂದು ಕಿಡಿಕಾರಿದ್ದಾರೆ.

ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸಲಿವೆ. ಮಹದೇಶ್ವರ ಬಡಾವಣೆ, ಹೆಬ್ಬಾಳ, ರಿಂಗ್‌ರಸ್ತೆ ಹಾಗೂ ವಿಜಯನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದ್ದು, ಕಳಪೆ ಡಾಂಬರೀಕರಣ ಮಾಡುತ್ತಿರುವುದರಿಂದ ಕೆಲವೇ ದಿನಗಳಲ್ಲಿ ಮತ್ತೆ ಯಥಾಸ್ಥಿತಿಗೆ ತಲುಪಲಿದೆ. ವಿಜಯನಗರದ ವಾಟರ್ ಟ್ಯಾಂಕ್ ಬಳಿ ವಿದ್ಯಾವರ್ಧಕ ಕಾಲೇಜು ಇದ್ದು, ನೂರಾರು ವಿದ್ಯಾರ್ಥಿಗಳು ರಸ್ತೆ ದಾಟಲು ಅನುಕೂಲಕರವಾಗಿ ರಸ್ತೆ ಅಭಿವೃದ್ಧಿ ಆಗಬೇಕಾಗಿತ್ತು. ಸದಾ ಜನಸಂದಣಿ ಹೆಚ್ಚಾಗಿರುವ ರಸ್ತೆಗೆ ಕಳಪೆ ಕಾಮಗಾರಿ ಮೂಲಕ ತೇಪೆ ಹಚ್ಚುವ ಕೆಲಸವನ್ನು ಮಾಡಲಾಗುತ್ತಿದೆ ಎಂದು ದೂರಿದ್ದಾರೆ.

**ಗುತ್ತಿಗೆದಾರನದ್ದೇ ಕಾರು-ಬಾರು:** ಕಾಮಗಾರಿ ನಡೆಯುವ ಸ್ಥಳದಲ್ಲಿ ಮುಡಾ ಅಧಿಕಾರಿಗಳು ಸುಳಿಯುತ್ತಿಲ್ಲ. ಇದು ಕಳಪೆ ಕಾಮಗಾರಿಗೆ ಮತ್ತಷ್ಟು ಪುಷ್ಟಿ ನೀಡಿದಂತಿದೆ. ಕಾಮಗಾರಿ ಹೇಗೆ ನಡೆಯುತ್ತಿದೆ ಎಂಬುದನ್ನು ಆಗಾಗ ಪರಿಶೀಲನೆ ಮಾಡುವ ಸಾಮಾನ್ಯ ಜವಾಬ್ದಾರಿಯೂ ಅಧಿಕಾರಿಗಳಿಗೆ ಇಲ್ಲದಂತಾಗಿದೆ. ಜನರ ದುಡ್ಡನ್ನು ಲೂಟಿ ಮಾಡಲು ಯಾವುದೇ ಅಡೆ-ತಡೆ ಇಲ್ಲದಂತೆ ಮಾಡಿಕೊಂಡಿದ್ದಾರೆ. ಇವರನ್ನು ಪ್ರಶ್ನಿಸುವವರೇ ಇಲ್ಲದಂತಾಗಿದೆ ಎಂದು 'ಮೈಸೂರು ಮಿತ್ರ'ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಪ್ರತಿಭಟನೆ ಬಳಿಕ ಚುರುಕಾಯಿತು!:** ಕಳೆದ ಮೂರು ತಿಂಗಳಿಂದ ಕಾಮಗಾರಿ ಕುಂಟುತ್ತಾ ಸಾಗುತ್ತಿತ್ತು. ಧೂಳಿನಿಂದ ಹೈರಾಣಾದ ಸ್ಥಳೀಯ ನಿವಾಸಿಗಳು, ವಾಹನ ಸವಾರರು ಕಾರ್ಪೊರೇಟರ್ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಮುಡಾ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಇದರಿಂದ ಎಚ್ಚೆತ್ತ ಅಧಿಕಾರಿಗಳು ಕಾಮಗಾರಿಯನ್ನು ಚುರುಕುಗೊಳಿಸಿ ಸದ್ಯದಲ್ಲಿಯೇ ಪೂರ್ಣಗೊಳಿಸುವ ಹಂತಕ್ಕೆ ಬಂದಿದ್ದಾರೆ.



ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಚಲನಚಿತ್ರ ನಿರ್ಮಾಪಕ ಸಂದೇಶ್ ನಾಗರಾಜು ಅವರನ್ನು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ಸುನಂದ ಕುಮಾರ್, ಮಲ್ಲಿಕಾರ್ಜುನ್, ದುರ್ಗೇಶ್, ಕಾಳಪ್ಪ, ರಾಜಶೇಖರ್, ಮಂಜು, ರಾಜು ಹಾಗೂ ಒಂಟಿಕೊಪ್ಪಲ್ ಗುರುರಾಜ್ ಹಾಜರಿದ್ದರು.

## ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಫೆ.21– 2022-23ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೆಟ್ಟದಪುರ ಶಾಲೆಗೆ ಸಮಾಜ ವಿಜ್ಞಾನ ಬೋಧನೆಗಾಗಿ ಅತಿಥಿ ಶಿಕ್ಷಕರು ಬೇಕಾಗಿರುವ ಕಾರಣ ಜಿಲ್ಲಾ ಕಚೇರಿ ಮೈಸೂರು ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕಡೆಯ ದಿನಾಂಕವನ್ನು ಫೆ.26ಕ್ಕೆ ನಿಗದಿಪಡಿಸಲಾಗಿದೆ.

ಆಸಕ್ತರು ಬಿಎಡ್ ಅಭ್ಯರ್ಥಿಗಳು ಕೊನೆಯ ದಿನಾಂಕದ ಒಳಗೆ ಕಛೇರಿಗೆ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಮೌಲಾನ ಅಜಾದ್ ಭವನದ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾತೃಭಾಷೆ ಶಿಕ್ಷಣದಿಂದ ಆಪ್ತತೆ, ಮಾನಸಿಕ ಬೆಳವಣಿಗೆ ಸಾಧ್ಯ

● ಭಾಷಾ ತಜ್ಞ ಪ್ರೊ. ಬಿ.ಎನ್.ಪಟ್ನಾಯಕ್ ಅಭಿಮತ ● ಮೈಸೂರಲ್ಲಿ 'ಅಂತರಾಷ್ಟ್ರೀಯ ಮಾತೃಭಾಷಾ ದಿನಾಚರಣೆ'



ಮೈಸೂರು,ಫೆ.21(ಎಂಟಿವೈ)– ಮಕ್ಕಳಿಗೆ ಆಡಳಿತ ಹಾಗೂ ವ್ಯವಹಾರಿಕ ಭಾಷೆಗಳಿಗಿಂತ ಮಾತೃಭಾಷೆಯಲ್ಲಿನ ಶಿಕ್ಷಣದಿಂದ ಮಾತ್ರ ಆಪ್ತತೆಯೊಂದಿಗೆ ಮಾನಸಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಭಾಷಾ ತಜ್ಞ ಪ್ರೊ.ಬಿ.ಎನ್. ಪಟ್ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು–ಹುಣಸೂರು ಮುಖ್ಯ ರಸ್ತೆಯಲ್ಲಿ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಅಂತರಾಷ್ಟ್ರೀಯ ಮಾತೃಭಾಷಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಆಡಳಿತ ಹಾಗೂ ವ್ಯವಹಾರಿಕ ಭಾಷೆಗಳಾಗಿರುವ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕೆನ್ನುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಯಾವುದೇ ಪ್ರಾಂತ್ಯದಲ್ಲೂ ಅವರ ಮಾತೃಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ, ಅದು ಪರಿಣಾಮಕಾರಿಯಾಗಿ ಮನಮುಟ್ಟಲಿದೆ. ಇದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿದೆ. ಆದ್ದರಿಂದ ಮಾತೃಭಾಷೆಯ ಶಿಕ್ಷಣಕ್ಕೆ ಆದ್ಯತೆ ನೀಡುವುದು ಒಳಿತು ಎಂದರು.

ಮಾಹಿತಿ, ತಂತ್ರಜ್ಞಾನದ ಯುಗ ಶರವೇಗದಲ್ಲಿ ಬೆಳವಣಿಗೆ ಕಾಣುತ್ತಿದೆ. ಇದರ ಜೊತೆ ಜೊತೆಯಲ್ಲೇ ಭಾಷಾ ಬೆಳವಣಿಗೆಯನ್ನು ನಾವು ಸ್ವೀಕರಿಸಬೇಕು. ಅಲ್ಲದೆ ಪಾರಂಪರಿಕ ಮತ್ತು ಪ್ರಾದೇಶಿಕ ಭಾಷೆಯ ಉಳಿವಿಗೂ ಕಾರ್ಯಕ್ರಮ ರೂಪಿಸಬೇಕು. ಅದಕ್ಕೆ ಆಯಾ ಪ್ರಾಂತ್ಯದ ಜನರ ಸಹಕಾರವೂ ಅಗತ್ಯ. ನಾವು ಮಾತೃಭಾಷಾ ಶಿಕ್ಷಣಕ್ಕೆ ಆದ್ಯತೆ ನೀಡದಿದ್ದರೆ, ಮುಂದಿನ ದಿನಗಳಲ್ಲಿ ಸಂಘರ್ಷಕ್ಕೆ ಕಾರಣವಾಗಬಹುದು. ಅಲ್ಲದೆ, ಪ್ರತ್ಯೇಕತಾವಾದದ ಕೂಗು ಕೇಳಿ ಬರಬಹುದು. ಇದಕ್ಕೆ ನೆರೆ ರಾಷ್ಟ್ರ ಬಾಂಗ್ಲಾದೇಶದ ವಿಭಜನೆ ನಮ್ಮ ಮುಂದೆ ಇರುವ ದೊಡ್ಡ ಉದಾಹರಣೆಯಾಗಿದೆ. ಸ್ಥಳೀಯ ಸಾಂಸ್ಕೃತಿಕ ಭಾಷೆ, ಅದರ ಮಹತ್ವ ಹಾಗೂ ಬಹುತ್ವ ಕಾಪಾಡುವುದು ಎಲ್ಲರ ಹೊಣೆ. ದೇಶದ ವಿವಿಧೆಡೆ ಇರುವ ಬುಡಕಟ್ಟು ಸಮುದಾಯಗಳ ಜನರ ಭಾಷೆಗಳು ಅಳಿವಿನ ಅಂಚಿಗೆ ದೂಡಲ್ಪಟ್ಟಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬುಡಕಟ್ಟು ಜನರಿಗೆ ಅವರ ಮಾತೃ ಭಾಷೆಯಲ್ಲೇ ಶಿಕ್ಷಣ ನೀಡುವ ಮೂಲಕ ಅಳಿವಿನಂಚಿಗೆ ದೂಡಲ್ಪಟ್ಟಿರುವ ಭಾಷೆಗೆ ಚೈತನ್ಯ ತುಂಬಬಹುದು.

ಗ್ರಾಮೀಣ ಪ್ರದೇಶದಲ್ಲೂ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮಕ್ಕೆ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ. ಮಾತೃಭಾಷೆಯೊಂದಿಗೆ ಅನ್ಯಭಾಷೆ ಕಲಿಕೆಗೆ ಆಸಕ್ತಿ ಇದ್ದರೆ ಇಂಗ್ಲಿಷ್ ಅಥವಾ ಹಿಂದಿ ಭಾಷೆಯನ್ನು ಕಲಿಸಬೇಕು. ಆದರೆ, ಮಾತೃಭಾಷೆಯನ್ನು ನಿರ್ಲಕ್ಷಿಸಬಾರದು ಎಂದು ಸಲಹೆ ನೀಡಿದರು.

ಭಾರತೀಯ ಭಾಷಾ ಸಂಸ್ಥೆಯ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಮಾತನಾಡಿ, 1952ರಲ್ಲಿ ಬಾಂಗ್ಲಾದೇಶದಲ್ಲಿ ಅಲ್ಲಿನ ವಿದ್ಯಾರ್ಥಿಗಳು ಆರಂಭಿಸಿದ ಭಾಷಾ ಚಳವಳಿ ಅಂಗವಾಗಿ 2002ರಿಂದ ಫೆ.21 ರಂದು 'ಅಂತರಾಷ್ಟ್ರೀಯ ಮಾತೃಭಾಷಾ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಪಾಕಿಸ್ತಾನದಿಂದ ವಿಭಜನೆ ಪಡೆದು ಬಾಂಗ್ಲಾದೇಶ ಉದಯಗೊಂಡಿದ್ದು ಇತಿಹಾಸವಾದರೂ, ಆ ಮೂಲಕ ಮಾತೃ ಭಾಷಾ ದಿನಕ್ಕೆ ಮುನ್ನುಡಿ ಬರೆದಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 2022ರಿಂದ 2032ರ ನಡುವಿನ ಅವಧಿಯನ್ನು ಸ್ಥಳೀಯ ಭಾಷೆಗಳ ಅಂತರ ರಾಷ್ಟ್ರೀಯ ದಶಕವೆಂದು ಘೋಷಿಸಿದೆ. ವಿಶ್ವದೆಲ್ಲೆಡೆ ಅನೇಕ ಸ್ಥಳೀಯ ಭಾಷೆಗಳು ನಿರ್ಣಾಯಕ ಸ್ಥಿತಿಯತ್ತ ದೂಡಲ್ಪಟ್ಟಿದ್ದು, ಅವುಗಳ ಸಂರಕ್ಷಣೆ, ಪುನರುಜ್ಜೀವನ ಮತ್ತು ಪ್ರಚಾರಕ್ಕಾಗಿ ಕಾರ್ಯಕ್ರಮ ರೂಪಿಸಲು ಉತ್ತೇಜನ ನೀಡಲಾಗುತ್ತಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಭಾರತದಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣಕ್ಕೆ ಒತ್ತು ನೀಡಲಿದೆ. ಕನಿಷ್ಠ 5ನೇ ತರಗತಿಯವರೆಗೆ ಬೋಧನಾ ಮಾಧ್ಯಮವನ್ನು ಕಡ್ಡಾಯಗೊಳಿಸುತ್ತದೆ. 8ನೇ ತರಗತಿಯವರೆಗೆ ಮಗುವಿನ ಮನೆ ಭಾಷೆ ಅಥವಾ ಪ್ರಾದೇಶಿಕ ಭಾಷೆಯಾಗಿರಬೇಕು. ಶಿಕ್ಷಣ ತಜ್ಞರು ಮತ್ತು ಭಾಷಾಶಾಸ್ತ್ರಜ್ಞರು ಈಗಾಗಲೇ ಮಾತೃ ಭಾಷೆ ಆಧಾರಿತ ಶಿಕ್ಷಣದ ಮಹತ್ವವನ್ನು ತಿಳಿಸಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಉಪ ನಿರ್ದೇಶಕ ಪ್ರೊ.ಸಿ.ವಿ.ಶಿವರಾಮಕೃಷ್ಣ, ಪ್ರೊ.ಡಿ.ಜಿ.ರಾವ್, ಪುದುಚೇರಿಯ ಪಾಂಡಿಚೇರಿ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮಾಜಿ ಮುಖ್ಯಸ್ಥ ಪ್ರೊ.ಪಿ.ಮರುದನಾಯಗಮ್, ಮೈಸೂರು ವಿವಿಯ ಪ್ರಸಾರಾಂಗ ಮಾಜಿ ನಿರ್ದೇಶಕ ಪ್ರೊ.ಲಕ್ಷ್ಮಿ ನಾರಾಯಣ ಅರೋರ, ಭಾರತೀಯ ಭಾಷೆಗಳ ಕೇಂದ್ರಿಯ ಸಂಸ್ಥೆಯ ಉಪ ನಿರ್ದೇಶಕ ಪ್ರೊ.ವಿ.ಜ್ಞಾನಸುಂದರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಭಾರತವು ಬಹುಭಾಷಾ ಮತ್ತು ಬಹುಸಂಸ್ಕೃತಿಯ ದೇಶವಾಗಿದ್ದು, 22 ಅನುಸೂಚಿತ ಭಾಷೆಗಳು, 100ಕ್ಕೂ ಹೆಚ್ಚು ಅನುಸೂಚಿತವಲ್ಲದ ಭಾಷೆಗಳನ್ನು ಹೊಂದಿದೆ. ಅತ್ಯಂತ ವೈವಿಧ್ಯಮಯ ರಾಷ್ಟ್ರ ಎನಿಸಿದೆ. 2011ರ ಭಾರತದ ಜನಗಣತಿಯ ಮಾಹಿತಿಯಂತೆ, 10 ಸಾವಿರಕ್ಕಿಂತ ಹೆಚ್ಚು ಜನರು ಮಾತನಾಡುವ 121 ಭಾಷೆಗಳು, 270 ಮಾತೃ ಭಾಷೆಗಳಿರುವುದು ದಾಖಲಿಸಲಾಗಿದೆ. 10 ಸಾವಿರಕ್ಕಿಂತ ಕಡಿಮೆ ಜನರು ಮಾತನಾಡುವ ಹಲವು ಭಾಷೆಗಳಿವೆ. ಈ ಭಾಷೆಗಳ ಅಭಿವೃದ್ಧಿಗಾಗಿ ದಾಖಲೆಗಳು, ವಿವರಿಸುವುದು, ನಿಘಂಟುಗಳು, ವ್ಯಾಕರಣ ಮತ್ತು ಇತರ ಬೋಧನೆ ಮತ್ತು ಕಲಿಕಾ ಸಂಪನ್ಮೂಲಗಳನ್ನು ಸಿದ್ಧಪಡಿಸುವ ತುರ್ತು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.**
**–ಪ್ರೊ.ಶೈಲೇಂದ್ರ ಮೋಹನ್**, ಭಾರತೀಯ ಭಾಷಾ ಸಂಸ್ಥೆಯ ನಿರ್ದೇಶಕ

## ಟರ್ಕಿ–ಸಿರಿಯಾದಲ್ಲಿ ಮತ್ತೆ ಭೂಕಂಪ; 8 ಸಾವು, 290ಕ್ಕೂ ಹೆಚ್ಚು ಮಂದಿಗೆ ಗಾಯ

ಅಂಕಾರಾ, ಫೆ.21– ಟರ್ಕಿ–ಸಿರಿಯಾ ಗಡಿಯಲ್ಲಿ ಮತ್ತೆ ಭೂಕಂಪ ಸಂಭವಿಸಿದ್ದು, ಸಾವಿನ ಸಂಖ್ಯೆ 8ಕ್ಕೆ ಏರಿದೆ. ವರದಿಯ ಪ್ರಕಾರ ಈ ಭೂಕಂಪದ ತೀವ್ರತೆಯು 6.4ರಷ್ಟಿತ್ತು. ಇದರಿಂದಾಗಿ 294 ಜನರು ಗಾಯಗೊಂಡಿದ್ದು, ಅವರ ಪೈಕಿ 18 ಜನರು ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ.



ಸಿರಿಯಾದ ಹಮಾ ಮತ್ತು ಟಾರ್ಟಸ್ ಪ್ರಾಂತ್ಯಗಳಲ್ಲಿ ಭೂಕಂಪ ಸಂಭವಿಸಿದ ಸಮಯದಲ್ಲಿ ಭಯಭೀತರಾಗಿ ಓರ್ವ ಮಹಿಳೆ ಮತ್ತು ಬಾಲಕಿ ಸಾವನ್ನಪ್ಪಿದ್ದಾರೆ. ಭೂಕಂಪದ ಕೇಂದ್ರ ಬಿಂದು ಸಿರಿಯಾದ ಗಡಿಯುದ್ದಕ್ಕೂ ಇರುವ ಟರ್ಕಿಯ ಹಟೇ ಪ್ರಾಂತ್ಯದ ಡೆಫ್ನೆ ಪಟ್ಟಣದಲ್ಲಿದೆ. ಜೋಡಾನ್, ಸೈಪ್ರಸ್, ಇಸ್ರೇಲ್, ಲೆಬನಾನ್ ಮತ್ತು ದೂರದ ಈಜಿಪ್ಟ್ ನಲ್ಲೂ ಈ ಭೂಕಂಪದ ಅನುಭವವಾಗಿತ್ತು.

ಫೆಬ್ರವರಿ 6ರಂದು 7.8 ತೀವ್ರತೆಯ ಭೂಕಂಪವು ಟರ್ಕಿ ಮತ್ತು ಸಿರಿಯಾ ದೇಶವನ್ನು ಕಂಗೆಡಿಸಿತ್ತು. ಈ ಸಂದರ್ಭದಲ್ಲಿ ಟರ್ಕಿಯ ಹಟೇ ಪ್ರಾಂತ್ಯವು ಅತ್ಯಂತ ಹೆಚ್ಚು ಹಾನಿಗೊಳಗಾಗಿ, ಸಾವಿರಾರು ಕಟ್ಟಡಗಳು ನೆಲಕ್ಕುರುಳಿದ್ದವು. ಎರಡನೇ ಭೂಕಂಪವು ಮತ್ತಷ್ಟು ಹಾನಿಯನ್ನುಂಟು ಮಾಡಿತ್ತು. ಹಟೇ ಪ್ರಾಂತ್ಯದಲ್ಲಿದ್ದ ರಾಜ್ಯಪಾಲರ ಕಚೇರಿಯೂ ಹಾನಿಗೊಳಗಾಗಿದೆ ಎಂದು ವರದಿಗಳು ತಿಳಿಸಿವೆ.

ಫೆ.6ರಂದು ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಟರ್ಕಿಯಲ್ಲಿ ಕನಿಷ್ಠ 41,156 ಜನರು ಸಾವನ್ನಪ್ಪಿದ್ದಾರೆ. ಭೂಕಂಪದ ಕೇಂದ್ರಬಿಂದು ದಕ್ಷಿಣ ಕಹ್ರಮನ್ಮರಸ್ ಪ್ರಾಂತ್ಯದಲ್ಲಿದೆ. ಟರ್ಕಿಯಲ್ಲಿ 11 ಪ್ರಾಂತ್ಯದಲ್ಲಿ ಭೂಕಂಪ ಸಂಭವಿಸಿದ್ದು, 1,10,000ಕ್ಕೂ ಹೆಚ್ಚು ಕಟ್ಟಡಗಳು ನಾಶವಾಗಿವೆ.



ಗೋಕುಲಂ 2ನೇ ಹಂತದ ವಾರ್ಡ್ ನಂ. 19 ಸಾಯಿಬಾಬ ರಸ್ತೆಯಲ್ಲಿ ಮಂಗಳವಾರ ಜನರಲ್ ಅನುದಾನ 15 ಲಕ್ಷ ರೂ. ವೆಚ್ಚದಲ್ಲಿ ಮರುಡಾಂಬರೀಕರಣ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಲಾಯಿತು. ಈ ವೇಳೆ ಪಾಲಿಕೆ ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಜೆಡಿಎಸ್ ರಾಜ್ಯ ಕಾರ್ಯದರ್ಶಿಗಳಾದ ಪಾಲಹಳ್ಳಿ ರಾಮಕೃಷ್ಣ, ಶ್ರೀನಿವಾಸ್, ಕರುಣಾನಿಧಿ, ಕರಿಯಪ್ಪ, ಶಂಕರ್, ಭೋಜರಾಜ್, ಚಂದ್ರ, ಇಂಜಿನಿಯರ್ ರಾಮಣ್ಣ, ಜಯರಾಮ ರೈ, ಗುತ್ತಿಗೆದಾರ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಬಟ್ಟೆ ಬ್ಯಾಗ್ ಖರೀದಿಯಲ್ಲಿ ಅಕ್ರಮ: ರೋಹಿಣಿ ವಿರುದ್ಧ ಹೈಕೋರ್ಟ್ ಮೊರೆ

**ಜೆಡಿಎಸ್ ವಕ್ತಾರ ರವಿಚಂದ್ರೇಗೌಡ ನಿರ್ಧಾರ**

ಮೈಸೂರು, ಫೆ21(ಜಿಎ)– ಪರಿಸರ ಸ್ನೇಹಿ ಬಟ್ಟೆ ಬ್ಯಾಗ್ ಖರೀದಿಯಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮಾಡಿರುವ ಭ್ರಷ್ಟಾಚಾರದ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡುವುದಾಗಿ ಜೆಡಿಎಸ್ ವಕ್ತಾರ ಹಾಗೂ ವಕೀಲ ರವಿಚಂದ್ರೇಗೌಡ ತಿಳಿಸಿದ್ದಾರೆ.



ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಶಾಸಕ ಸಾ.ರಾ.ಮಹೇಶ್ ಈ ವಿಚಾರ ಕೈ ಬಿಟ್ಟಿರಬಹುದು. ಆದರೆ, ಬಟ್ಟೆ ಬ್ಯಾಗ್ ಖರೀದಿಯಲ್ಲಿ ರೋಹಿಣಿ ಸಿಂಧೂರಿ, ಮಾಡಿರುವ ಅವ್ಯವಹಾರವನ್ನು ಕಾನೂನು ಹೋರಾಟದ ಮೂಲಕ ಬಹಿರಂಗ ಪಡಿಸುತ್ತೇನೆ ಎಂದಿದ್ದಾರೆ.

ರೋಹಿಣಿ ಸಿಂಧೂರಿ ಅವರು, ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್ ಖರೀದಿಯಲ್ಲಿ ಮೋಸ ಮಾಡಿದ್ದಾರೆ. ಒಂದು ಬ್ಯಾಗ್ 13 ರೂ.ನಂತೆ 1 ಕೋಟಿ ರೂ. ತಗಲುವ 14 ಲಕ್ಷ ಬ್ಯಾಗ್‌ಗಳಿಗೆ 7 ಕೋಟಿ ರೂ. ನೀಡಿದ್ದಾರೆ. ಅಲ್ಲದೆ ಯಾವುದೇ ಟೆಂಡರ್ ಕರೆಯದೆ ತಮಗೆ ಬೇಕಾದವರಿಗೆ ಬ್ಯಾಗ್ ತಯಾರಿಕೆಗೆ ಅನುಮತಿ ನೀಡಿ, ವಂಚಿಸಿದ್ದಾರೆ. ಈ ಸಂಬಂಧ 2021ರ ಅ.13 ರಂದು ಎಸಿಬಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಎಸಿಬಿಯಿಂದ ಲೋಕಾಯುಕ್ತಕ್ಕೆ ಪ್ರಕರಣ ವರ್ಗಾವಣೆಯಾಗಿದ್ದರೂ ಯಾವುದೇ ಪ್ರಯೋಜನವಾಗಲಿಲ್ಲ. ಆದ್ದರಿಂದ ಕಾನೂನು ಹೋರಾಟ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

# ಹೈದರಾಬಾದ್: ಬೀದಿ ನಾಯಿಗಳ ದಾಳಿ, 4 ವರ್ಷದ ಮಗು ಸಾವು!

ಹೈದರಾಬಾದ್, ಫೆ21– ಬೀದಿ ನಾಯಿಗಳು ಕಚ್ಚಿ, 4 ವರ್ಷಗಳ ಮಗು ಸಾವನ್ನಪ್ಪಿರುವ ಘಟನೆ ತೆಲಂಗಾಣದಲ್ಲಿ ನಡೆದಿದೆ. ಆತಂಕ ಮೂಡಿಸುವ ವೀಡಿಯೋ ವೈರಲ್ ಆಗಿದ್ದು, ಆಹಾರ ಪದಾರ್ಥವಿದ್ದ ಪೊಟ್ಟಣ ಕೊಂಡೊಯ್ಯುತ್ತಿದ್ದ ಮಗುವಿನ ಮೇಲೆ ಏಕಾ ಏಕಿ ಬೀದಿ ನಾಯಿಗಳ ಹಿಂಡು ಎರಗಿವೆ. ಅಂಬರ್ ಪೇಟ್ ಪ್ರದೇಶದಲ್ಲಿ ನಡೆದಿರುವ ಈ ಘಟನೆ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಮಗು ತಂದೆಯ ಜೊತೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಮಗುವಿನ ತಂದೆ ಆಟೋಮೊಬೈಲ್ ಶೋ ರೂಮ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ನಾಯಿಗಳಿಂದ ದಾಳಿಗೊಳಗಾದ ಮಗುವಿಗೆ ತೀವ್ರವಾದ ಗಾಯಗಳಾಗಿತ್ತು. ತಂದೆ ಆ ಮಗುವನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ ಆದರೂ ಆ ವೇಳೆಗೆ ಮಗು ಮೃತಪಟ್ಟಿದೆ ಎಂದು ವೈದ್ಯರು ಹೇಳಿದ್ದಾರೆ.

# ಚಿಂಚೋಳಿ ಬಸ್ ನಿಲ್ದಾಣದಲ್ಲಿ ನಿಂತಿದ್ದ ಬಸ್ಸನ್ನೇ ಕದ್ದ ಖತರ್ನಾಕ್‌ಗಳು!

ಕಲಬುರಗಿ, ಫೆ.21– ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಕೆಎಸ್‌ಆರ್‌ಟಿಸಿ ಬಸ್ಸನ್ನೇ ಖತರ್ನಾಕ್ ಕಳ್ಳರು ಕದ್ದಿದ್ದಾರೆ, ಈ ವಿಚಿತ್ರ ಘಟನೆ ಕಲಬುರಗಿ ಜಿಲ್ಲೆಯ ಚಿಂಚೋಳಿ ಬಸ್ ನಿಲ್ದಾಣದಲ್ಲಿ ಇಂದು ಮುಂಜಾನೆ 3.30ಕ್ಕೆ ನಡೆದಿದೆ. ತಡರಾತ್ರಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಬಸ್ ಅನ್ನು ಕಳ್ಳರು ನಸುಕಿನ ಜಾವ 3.30ರ ಸುಮಾರಿಗೆ ಕಳ್ಳತನ ಮಾಡಿರುವ ಘಟನೆ ಚಿಂಚೋಳಿ ಬಸ್ ನಿಲ್ದಾಣದಲ್ಲಿ ನಡೆದಿದೆ. ಬೀದರ್ ನಂಬರ್ 2 ಡಿಪೋಗೆ ಸೇರಿದ ಬಸ್ ಇದಾಗಿದೆ. ಕೆಎ 38 ಎಫ್ 971 ನಂಬರ್‌ನ ಬಸ್ ಕಳ್ಳತನ ಮಾಡಿದ ಕಳ್ಳರು, ಮಿರಿಯಾಣ ಮಾರ್ಗವಾಗಿ ತಾಂಡೂರ ಮೂಲಕ ತೆಲಂಗಾಣದ ಕಡೆ ತೆಗೆದುಕೊಂಡು ಹೋಗಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಇದರಿಂದಾಗಿ ಬಸ್ಸು ಹುಡುಕಾಟಕ್ಕೆ ಪೊಲೀಸರ ಎರಡು ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಈಗಾಗಲೇ ಎರಡು ಪೊಲೀಸ್ ತಂಡಗಳು ತೆಲಂಗಾಣದಲ್ಲಿ ಹುಡುಕಾಟ ನಡೆಸಿದೆ. ಸ್ಥಳಕ್ಕೆ ಚಿಂಚೋಳಿ ಪೊಲೀಸರು ಆಗಮಿಸಿ, ಪರಿಶೀಲನೆ ನಡೆಸಿದ್ದಾರೆ.



ಮೈಸೂರು ನಗರ ಪಾಲಿಕೆ ಅನುದಾನದಲ್ಲಿ ವಾರ್ಡ್ ಸಂಖ್ಯೆ–6ರ ವ್ಯಾಪ್ತಿಯ ಗೋಕುಲಂ ಒಂದನೇ ಹಂತದ ಸುವರ್ಣ ಮಹೋತ್ಸವ ಉದ್ಯಾನವನದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು, ಶಾಸಕ ಎಲ್.ನಾಗೇಂದ್ರ ಹಾಗೂ ಸ್ಥಳೀಯ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸೋಮಶೇಖರ್, ಹನುಮಗೌಡ, ಲೋಕೇಶ್, ರಾಜು, ದಿನಕರ್ ಶ್ರೀನಿವಾಸ್, ನಾಗರಾಜಣ್ಣ, ಶ್ರೀಧರ್, ಇಂಜಿನಿಯರ್ ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

**ಬಿಜೆಪಿ ಸರ್ಕಾರ ವಿಧಾನಸೌಧ ಖಾಲಿ ಮಾಡುವಂತೆ ಆಗ್ರಹಿಸಿ**

# ನಾಳೆ ಮಂಡ್ಯ ಡಿಸಿ ಕಚೇರಿಗೆ ರೈತರಿಂದ ದಿಗ್ಬಂಧನ

**ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಜನ-ಜಾನುವಾರು ಸಹಿತ ಚಳವಳಿ**



ಮೈಸೂರು, ಫೆ.21(ಎಸ್‌ಬಿಡಿ)– ರೈತರ ಹೋರಾಟ, ಸತ್ಯಾಗ್ರಹವನ್ನು ಕಾಲಕಸದಂತೆ ಕಾಣುತ್ತಿರುವ ಅಂತಃಕರಣವಿಲ್ಲದ ಬಿಜೆಪಿ ಸರ್ಕಾರ, ವಿಧಾನಸೌಧವನ್ನು ಖಾಲಿ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಸಾವಿರಾರು ರೈತರಿಂದ ಮಂಡ್ಯ ಜಿಲ್ಲಾಧಿಕಾರಿ ಕಚೇರಿಗೆ ಫೆ.23ರಂದು ದಿಗ್ಬಂಧಿಸಲು ನಿರ್ಧರಿಸಲಾಗಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ಅಂದು ಬೆಳಗ್ಗೆ 11 ಗಂಟೆಗೆ ತಲಾ 101 ಟ್ರ್ಯಾಕ್ಟರ್, ಎತ್ತಿನ ಗಾಡಿ, ಹಸು, ಎಮ್ಮೆ, ಕುರಿ, ಕೋಳಿ, ನಾಯಿ ಸೇರಿದಂತೆ ನೂರಾರು ಜಾನುವಾರುಗಳ ಸಹಿತ 5 ಸಾವಿರಕ್ಕೂ ಹೆಚ್ಚು ಮಂದಿ ಮಂಡ್ಯ ಜಿಲ್ಲಾಧಿಕಾರಿ ಕಚೇರಿಯನ್ನು ದಿಗ್ಬಂಧಿಸಲಿದ್ದೇವೆ. ಮೈಸೂರು, ಹಾಸನ, ಚಾಮರಾಜನಗರ, ರಾಮನಗರ ಇನ್ನಿತರ ಜಿಲ್ಲೆಗಳಿಂದ ರೈತರು, ಸಂಘಟನೆಗಳ ಸದಸ್ಯರು, ಮಹಿಳೆಯರು, ಯುವಕರೂ ಭಾಗಿಯಾಗಲಿದ್ದಾರೆ. ಆ ಮೂಲಕ ಅಂತಃಕರಣವಿಲ್ಲದ ಬಿಜೆಪಿ ಸರ್ಕಾರ, ವಿಧಾನಸೌಧ ಖಾಲಿ ಮಾಡುವಂತೆ ಆಗ್ರಹಿಸಲಿದ್ದೇವೆ ಎಂದು ತಿಳಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನ ಕಿಷ್ಕಿಂದೆ ಜಾಗದಲ್ಲಿ ಹತ್ತಾರು ಟೆಂಟ್‌ಗಳನ್ನು ಹಾಕಿಕೊಂಡು ವಿವಿಧ ಸಂಘಟನೆಯವರು ಪ್ರತಿಭಟನೆ ನಡೆಸುತ್ತಿದ್ದಾರೆ. ವರ್ಷದಿಂದ ಚಳವಳಿ ನಡೆಸುತ್ತಿರುವವರೂ ಅಲ್ಲಿದ್ದಾರೆ. ಆದರೆ ಸರ್ಕಾರ ಹೋರಾಟ, ಸತ್ಯಾಗ್ರಹವನ್ನು ಕಾಲಕಸದಂತೆ ಕಾಣುತ್ತಿದೆ. ರೈತರ ಹಿತದೃಷ್ಟಿಯಿಂದ ಹತ್ತಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಾವೂ ಕೂಡ ಮಂಡ್ಯದಲ್ಲಿ 100 ದಿನ ಅಹೋರಾತ್ರಿ ಧರಣಿ ನಂತರ 6 ದಿನ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡಿದ್ದೇವೆ. ಜಿಲ್ಲೆಯವರೇ ಆದ ಸಚಿವ ಕೆ.ಸಿ.ನಾರಾಯಣಗೌಡರು ಅಲ್ಲೇ ಓಡಾಡುತ್ತಾರೆ. ಸಮೀಪದ ಐಬಿಯಲ್ಲಿ ವಿಶ್ರಾಂತಿ ಪಡೆದು ಹೋಗುತ್ತಾರೆ. ಆದರೆ ಒಮ್ಮೆಯೂ ಪ್ರತಿಭಟನಾನಿರತ ರೈತರ ಮಾತನಾಡಿಸಲಿಲ್ಲ. ಸರ್ಕಾರಕ್ಕೆ ಮಾಹಿತಿ ಇದ್ದರೂ ಸೌಜನ್ಯಕ್ಕೂ ಸಮಸ್ಯೆ ಕೇಳಲಿಲ್ಲ. ಸಮಸ್ಯೆ ಬಗೆಹರಿಸುವುದು ನಂತರದ ಮಾತು. ಆದರೆ ಅಮರಣಾಂತ ಉಪವಾಸದ ವೇಳೆ ಏನಾದರೂ ಅವಘಡವಾದರೆ ಅದಕ್ಕೆ ಸರ್ಕಾರವೇ ಹೊಣೆಯಾಗುತ್ತದೆ. ಆದರೆ ರೈತರ ಪ್ರಾಣ ಸರ್ಕಾರಕ್ಕೆ ಲೆಕ್ಕಕ್ಕಿಲ್ಲ. ಜಿಲ್ಲಾಡಳಿತದ ಮನವಿಗೂ ಸರ್ಕಾರ ಸ್ಪಂದಿಸಿಲ್ಲ. ಇಂತಹ ಸರ್ಕಾರ ಇನ್ನು 3 ತಿಂಗಳು ಆಡಳಿತ ನಡೆಸುವುದೂ ರಾಜ್ಯಕ್ಕೆ ಕಂಟಕ. ಕೊನೆ ಸಮಯದಲ್ಲಿ ಭ್ರಷ್ಟಾಚಾರ ಮತ್ತಷ್ಟು ಹೆಚ್ಚಾಗುವ ಆತಂಕವಿದೆ ಎಂದು ಹೇಳಿದರು.

**ಮೋದಿಗೂ ಪ್ರತಿಭಟನೆ ಬಿಸಿ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜನತಾ ಪರಿವಾರದಿಂದ ಬಂದವರು. ಆದರೆ ಬಿಜೆಪಿಗೆ ಹೋದ ಮೇಲೆ ಅವರು ಬದಲಾಗಿದ್ದಾರೆ. ಈ ಬಗ್ಗೆ ಬಹಿರಂಗಪತ್ರವನ್ನೂ ಬರೆದಿದ್ದೇನೆ. ಮಂಡ್ಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ರೋಡ್ ಶೋ ಹಿನ್ನೆಲೆಯಲ್ಲಿ ಕಳೆದ ಡಿಸೆಂಬರ್ 28ರಂದು ಸತ್ಯಾಗ್ರಹಿಗಳನ್ನು ವಶಕ್ಕೆ ಪಡೆದು, ಟೆಂಟ್‌ಗಳನ್ನು ಕಿತ್ತು ಹಾಕಿದ್ದರು. ನಂತರ ಟೆಂಟ್‌ಗಳನ್ನು ಮತ್ತೆ ಅಳವಡಿಸಿಕೊಟ್ಟರು. ಆ ವೇಳೆ ಜನವರಿ 7ರಂದು ಮುಖ್ಯಮಂತ್ರಿಗಳು ಸಭೆ ನಡೆಸಿ, ನಿಮ್ಮ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಿದ್ದು, ಅಮಿತ್ ಶಾ ಕಾರ್ಯಕ್ರಮಕ್ಕೆ ಅಡ್ಡಿ ಮಾಡದಂತೆ ಮನವಿ ಮಾಡಿದರು. ಅದನ್ನು ನಂಬಿ ನಾವು ಅಡ್ಡಿ ಮಾಡದಂತೆ ಧರಣಿ ನಡೆಸಿದೆವು. ಸಭೆಗೂ ಮುನ್ನ ಕೆಲ ಮುಖಂಡರೊಂದಿಗೆ ಪೂರ್ವಭಾವಿ ಸಭೆ ನಡೆಸಿ ಸಮಸ್ಯೆಗಳನ್ನು ಅರಿಯುವುದಾಗಿ ಮುಖ್ಯಮಂತ್ರಿಗಳೂ ಭರವಸೆ ನೀಡಿದ್ದರು. ಆದರೆ ಈವರೆಗೂ ಆಗಿಲ್ಲ. ಮುಖ್ಯಮಂತ್ರಿಗಳು ಮಾತಿಗೆ ತಪ್ಪಿದ್ದಾರೆ. ಹಾಗಾಗಿ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಹಾಗೂ ಅಮಿತ್ ಷಾ ಪದೇ ಪದೆ ರಾಜ್ಯಕ್ಕೆ ಬರುತ್ತಾರೆ. ರಾಜ್ಯದಲ್ಲಿ ಎಲ್ಲಿಗೆ ಬಂದರೂ ಧಿಕ್ಕಾರ, ಕಪ್ಪು ಬಾವುಟ, ಬ್ಯಾನರ್ ಪ್ರದರ್ಶನ ಇನ್ನಿತರ ರೀತಿಯಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಜಿಲ್ಲಾ ಮುಖಂಡ ಪಿ.ಮರಂಕಯ್ಯ, ಮೈಸೂರು ತಾಲೂಕು ಗೌರವಾಧ್ಯಕ್ಷ ನಾಗನಹಳ್ಳಿ ವಿಜಯೇಂದ್ರ, ತಾಲೂಕು ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್ ಮತ್ತಿತರರು ಹಾಜರಿದ್ದರು.

## ಇಬ್ಬರನ್ನೂ 6 ತಿಂಗಳು ಅಮಾನತು ಮಾಡಬೇಕು

ಮೈಸೂರು: ಬೀದಿ ರಂಪಾಟ ನಡೆಸಿದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ರೂಪಾ ಅವರನ್ನು ಕನಿಷ್ಠ 6 ತಿಂಗಳು ಸೇವೆಯಿಂದ ಅಮಾನತು ಮಾಡಬೇಕೆಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ಬಿಳಿ ಆನೆಗಳಿದ್ದಂತೆ. ಅಧಿಕಾರದಲ್ಲಿರುವವರೆಗೆ ದೊರೆಗಳಂತೆ ಮೆರೆದು, ನಿವೃತ್ತಿ ನಂತರ ಯಾವುದಾದರೂ ರಾಜಕೀಯ ಪಕ್ಷ ಸೇರಿ ದರ್ಬಾರ್ ಮಾಡುತ್ತಾರೆ. ಇಲ್ಲವೇ ಯಾವುದಾದರೂ ಕಂಪನಿ ಆರಂಭಿಸುತ್ತಾರೆ. ಹಾಗಾಗಿ ಐಎಎಸ್ ಹಾಗೂ ಐಪಿಎಸ್ ಹುದ್ದೆ ರದ್ದು ಮಾಡಿ, ರಾಜ್ಯದಲ್ಲೇ ತಳಮಟ್ಟದಿಂದ ಸೇವೆ ಮಾಡಿದವರಿಗೆ ಪದೋನ್ನತಿ ನೀಡಬೇಕೆಂಬ ರೈತ ಸಂಘದ ನಿಲುವನ್ನು ಹಿಂದೆಯೇ ತಿಳಿಸಲಾಗಿದೆ ಎಂದರು.

ಈ ಅಧಿಕಾರಿಗಳು ಸಂವಿಧಾನಬದ್ಧವಾಗಿ ನಿಯಮಾನುಸಾರ ಅಧಿಕಾರ ನಡೆಸದೆ ರಾಜಕಾರಣಿಗಳನ್ನು ಮೀರಿಸುವಂತೆ ಹಾದಿ–ಬೀದಿಯಲ್ಲಿ ಕಿತ್ತಾಡುತ್ತಾರೆ. ಹಿಂದೆ ಮೈಸೂರಿನಲ್ಲಿ ಐಎಎಸ್ ಅಧಿಕಾರಿಗಳಾದ ರೋಹಿಣಿ ಸಿಂಧೂರಿ ಹಾಗೂ ಶಿಲ್ಪಾನಾಗ್ ಜಟಾಪಟಿ ನಡೆಸಿದ್ದರು. ಈಗ ಐಎಎಸ್ v/s ಐಪಿಎಸ್ ಜಟಾಪಟಿ ನಡೆದಿದೆ. ಸರ್ಕಾರ ಬೆಂಗಳೂರು ರೇಸ್‌ಕೋರ್ಸ್‌ನಲ್ಲಿ ಕುಸ್ತಿ ಅಖಾಡ ನಿರ್ಮಿಸಿ ಅಲ್ಲಿ ಅವಕಾಶ ನೀಡಲಿ. ರೋಹಿಣಿ ಹಾಗೂ ರೂಪಾ ಅವರಿಂದ ಮುಚ್ಚಳಿಕೆ ಬರೆಸಿಕೊಂಡು ವರ್ಗಾವಣೆ ಮಾಡಿದರೆ ಸಾಲದು. ಕನಿಷ್ಠ 6 ತಿಂಗಳು ಅಮಾನತು ಮಾಡಿ, ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಬೇಕು. ಇಲ್ಲವಾದರೆ ವ್ಯವಸ್ಥೆ ವಿಫಲವಾದಾಗ ಪ್ರಜಾಪ್ರಭುತ್ವ ಉಳಿಸಲು ಹಾಗೂ ಆಡಳಿತ ನಿಯಂತ್ರಿಸುವ ಉತ್ತರದಾಯಿತ್ವ ಅಧಿಕಾರವನ್ನು ಜನರೇ ಚಲಾಯಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರು ಮಿತ್ರ ಬುಧವಾರ 22 ಫೆಬ್ರವರಿ 2023

## ಕಾಡಾನೆ ದಾಳಿ: ತೆಂಗು, ಮಾವು ನಾಶ

ಹಲಗೂರು, ಫೆ.21– ಹಲಗೂರಿನಿಂದ ಮುತ್ತತ್ತಿಗೆ ಹೋಗುವ ಕರಲಕಟ್ಟೆ ಗ್ರಾಮದ ಬಳಿಯ ರಾಯಲ್ಸ್ ಫಾರಂ ಮೇಲೆ ಕಾಡಾನೆ ದಾಳಿ ಮಾಡಿ 50ಕ್ಕೂ ಹೆಚ್ಚು ತೆಂಗು ಹಾಗೂ ಮಾವಿನ ಮರಗಳನ್ನು ನಾಶ ಮಾಡಿದೆ.

ರಾಯಲ್ ಫಾರಂನ ಮ್ಯಾನೇಜರ್ ಜಾಕೀರ್ ಮಾತನಾಡಿ, ನಾವು ಸುಮಾರು ವರ್ಷಗಳಿಂದ ಇಲ್ಲಿ ವಾಸ ಮಾಡುತ್ತಿದ್ದು, ಆನೆಗಳ ಕಾಟ ಹೆಚ್ಚಾಗಿದೆ. 15 ವರ್ಷಗಳಿಂದ ಬೆಳೆದ 30 ಮಾವಿನ ಮರ ಹಾಗೂ 20 ತೆಂಗಿನ ಮರವನ್ನು ಬಸವನ ಬೆಟ್ಟದಿಂದ ಬಂದ ಕಾಡಾನೆಗಳು ಮುರಿದು ನಾಶಪಡಿಸಿ, ಲಕ್ಷಾಂತರ ನಷ್ಟವಾಗುವಂತೆ ಮಾಡಿವೆ. ಪ್ರತಿ ವರ್ಷ ಕಾಡಾನೆಗಳಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡರು.

ಅರಣ್ಯ ಇಲಾಖೆಯವರು ಭೇಟಿ ನೀಡಿದ್ದಾರೆ. ಅವರು ಕೊಡುವ ಪರಿಹಾರ ನಮಗೆ ಸಾಲುವುದಿಲ್ಲ. ಸರ್ಕಾರ ಸೂಕ್ತ ಪರಿಹಾರ ಕೊಡುವುದರ ಜೊತೆಗೆ ಕಾಡಾನೆಗಳ ಹಾವಳಿಯಿಂದ ಶಾಶ್ವತ ಪರಿಹಾರ ಮಾಡಿಕೊಡಬೇಕೆಂದು ಮನವಿ ಮಾಡಿದರು.



# ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಏಕೈಕ ಸಿಎಂ ಬಿಎಸ್‌ವೈ

### ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಣ್ಣನೆ



ಮಂಡ್ಯ, ಫೆ.21– ಮಣ್ಣಿನ ಮಗ ಬಿ.ಎಸ್.ಯಡಿಯೂರಪ್ಪನವರು 4 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ, ರೈತರನ್ನು ಹಾಗೂ ದೇಶದ ಸೈನಿಕರನ್ನು ತನ್ನ ಎರಡು ಕಣ್ಣಂತೆ ಕಂಡವರು. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ, ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ದೇಶದ ಏಕೈಕ ಸಿಎಂ ಯಡಿಯೂರಪ್ಪ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಣ್ಣಿಸಿದರು.

ತಾಲೂಕಿನ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾಚಹಳ್ಳಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಡಾ.ಶಿವಕುಮಾರಸ್ವಾಮೀಜಿ ಪುತ್ಥಳಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಾಚಹಳ್ಳಿಗೆ ಮೊದಲ ಬಾರಿಗೆ ಬಂದಿದ್ದೇನೆ. ಮೊದಲ ಆಗಮನದಲ್ಲೇ ಅದ್ದೂರಿ ಸ್ವಾಗತವನ್ನು ಇಲ್ಲಿನ ಜನ ಕೊಟ್ಟಿದ್ದಾರೆ. ನನಗೆ ಸ್ಥಾನಮಾನ ಕೊಟ್ಟಿಲ್ಲ ಎಂದು ಮಾಧ್ಯಮದವರು ಸದಾ ಕೇಳುತ್ತಾರೆ. ರಾಜ್ಯದಲ್ಲಿ ಎಲ್ಲೇ ಹೋದರೂ ನಮ್ಮ ಯಡಿಯೂರಪ್ಪನ ಮಗ ಅಂತಾ ಪ್ರೀತಿಸುತ್ತಾರೆ. ನಾಡಿನ ಜನ ಹೃದಯದಿಂದ ಗೌರವಿಸುತ್ತಾರೆ. ನಮ್ಮ ತಂದೆಯವರ ರಾಜಕೀಯ ಜೀವನವನ್ನು ಹತ್ತಿರದಿಂದ ಕಂಡಿದ್ದೇನೆ. ಜನರು ಇಷ್ಟು ಪ್ರೀತಿಕೊಟ್ಟ ಮೇಲೆ ಪ್ರೀತಿಗಿಂತ ಯಾವುದೇ ಅಧಿಕಾರ ಮುಖ್ಯವಲ್ಲ ಎನಿಸುತ್ತದೆ ಎಂದರು. ವಿಶ್ವದಲ್ಲೇ ಭರತ ಭೂಮಿ ಅತ್ಯಂತ ಪುಣ್ಯ ಭೂಮಿ. ಅನೇಕ ಸಿದ್ಧ ಪುರುಷರು ಇಲ್ಲಿ ಹುಟ್ಟಿ, ಬೆಳೆದು ಹೋಗಿದ್ದಾರೆ. ಅತೀ ಹೆಚ್ಚು ದಾರ್ಶನಿಕರನ್ನು ಕೊಟ್ಟಿದ್ದು ಕನ್ನಡ ನಾಡು. ಶಿವಕುಮಾರಶ್ರೀಗಳು ಈ ಗ್ರಾಮಕ್ಕೆ 3 ಸಲ ಬಂದಿದ್ದಾರೆ. ಈ ಭೂಮಿಗೆ ವಿಶೇಷ ಶಕ್ತಿ ಇದೆ ಎಂದರು.

ಮಕ್ಕಳಿಗೆ ಆಸ್ತಿಗಿಂತ ಶಿಕ್ಷಣ, ಸಂಸ್ಕಾರ ಕಲಿಸಿ. ಯಡಿಯೂರಪ್ಪ ಸಿಎಂ ಆದಾಗ ಭಾಗ್ಯಲಕ್ಷ್ಮಿ, ಬೈಸಿಕಲ್ ಯೋಜನೆ ಕೊಟ್ಟರು. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ಅವರ ಉದ್ದೇಶ ಹೀಗಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಿ, ಸ್ವಾವಲಂಬಿ ಬದುಕಿಗೆ ಸಹಕರಿಸಿ ಎಂದು ನುಡಿದರು.

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ವಿಜಯೇಂದ್ರ ತಂದೆಗೆ ತಕ್ಕ ಮಗ. ರಾಜ್ಯದಲ್ಲಿ ಯುವಕರಿಗೆ ಹಾಗೂ ಬಿಜೆಪಿ ಶಕ್ತಿ ತುಂಬುತ್ತಿದ್ದಾರೆ. ನಾನು ಜೆಡಿಎಸ್ ಪಕ್ಷದಲ್ಲಿದ್ದೆ. ನಮ್ಮ ಯಡಿಯೂರಪ್ಪ ಮುಖ್ಯಮಂತ್ರಿ ಆಗುತ್ತಾರೆ ಅಂತ ಅವರ ಜೊತೆ ಸೇರಿದೆ. ನನ್ನ ಗೆಲ್ಲಿಸಲು 2 ತಿಂಗಳ ಕಾಲ ವಿಜಯೇಂದ್ರ ಶ್ರಮಿಸಿದ್ದಾರೆ. ನನ್ನ ಚುನಾವಣೆ ಸಂಪೂರ್ಣ ಜವಾಬ್ದಾರಿಯನ್ನು ವಿಜಯೇಂದ್ರ ಹೊತ್ತಿದ್ದರು. ಇತ್ತ ವಿಜಯೇಂದ್ರ ಬಿಜೆಪಿಗಾಗಿ ಶ್ರಮಿಸುತ್ತಿದ್ದರೆ, ಅತ್ತ ಯಡಿಯೂರಪ್ಪ ಅವರ ಮತ್ತೋರ್ವ ಪುತ್ರ ಬಿ.ವೈ.ರಾಘವೇಂದ್ರ ತಂದೆಯಂತೆ ಶಿವಮೊಗ್ಗ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇಬ್ಬರೂ ಸಹ ಯಡಿಯೂರಪ್ಪಗೆ ತಂದೆಗೆ ತಕ್ಕ ಮಕ್ಕಳಾಗಿದ್ದಾರೆ ಎಂದರು.

ಇದೇ ವೇಳೆ ಹಳ್ಳಿಕಾರ್ ತಳಿಯ ಹೋರಿಯನ್ನು ಮಾಚಹಳ್ಳಿ ಗ್ರಾಮದ ಸ್ವಾಮಿ ಎಂಬುವರು ಉಡುಗೊರೆಯಾಗಿ ನೀಡಿದರು. ಖುಷಿಯಿಂದಲೇ ಬಿ.ವೈ.ವಿಜಯೇಂದ್ರ ಅಭಿಮಾನಿ ಉಡುಗೊರೆ ಸ್ವೀಕರಿಸಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಡಾ ಅಧ್ಯಕ್ಷ ಶ್ರೀನಿವಾಸ್, ಮೈಷುಗರ್ ಮಾಜಿ ಅಧ್ಯಕ್ಷ ಶಿವಲಿಂಗೇಗೌಡ, ಮುಖಂಡರಾದ ಡಾ.ಸಿದ್ದರಾಮಯ್ಯ, ಡಾ.ಇಂದ್ರೇಶ್, ಇಂಡುವಾಳು ಸಚ್ಚಿದಾನಂದ, ಸಾಯಿ ರವೀಂದ್ರ, ಎಸ್.ಪಿ.ಸ್ವಾಮಿ, ಶ್ರೀಧರ್ ಸೇರಿದಂತೆ ಇತರರಿದ್ದರು.

### ಚುನಾವಣೆ ಹತ್ತಿರವಿದೆ, ಈಗ ಉಸ್ತುವಾರಿ ಮಾತೇಕೆ

ಮಂಡ್ಯ, ಫೆ.21– ತೀವ್ರ ಕಗ್ಗಂಟಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಚುನಾವಣೆ ಹತ್ತಿರ ಬಂದಿದೆ ಈಗ ಉಸ್ತುವಾರಿ ಮಾತೇಕೆ? ಎನ್ನುವ ಮೂಲಕ ಜಿಲ್ಲಾ ಉಸ್ತುವಾರಿ ಘೋಷಣೆ ಮಾಡುವುದಿಲ್ಲ ಎಂದು ಪರೋಕ್ಷವಾಗಿ ಹೇಳಿದರು.

ತಾಲೂಕಿನ ಹೊಳಲು ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣಾ ಉಸ್ತುವಾರಿ ಬಗ್ಗೆ ಪ್ರತಿಕ್ರಿಯಿಸಿ, ಮಂಡ್ಯ ಉಸ್ತುವಾರಿಯನ್ನು ಬಿಜೆಪಿ ಪಕ್ಷವೇ ತೆಗೆದುಕೊಂಡಿದೆ. ಮಂಡ್ಯ ಚುನಾವಣಾ ಉಸ್ತುವಾರಿಯನ್ನು ನನಗೆ ನೀಡಿದರೆ ನಿಭಾಯಿಸುವೆ ಎನ್ನುವ ಮೂಲಕ ಜಿಲ್ಲಾ ಚುನಾವಣೆ ಉಸ್ತುವಾರಿ ವಹಿಸಿಕೊಳ್ಳಲು ಆಸಕ್ತಿ ತೋರಿದರು.

ಕಾಂಗ್ರೆಸ್, ಜೆಡಿಎಸ್ ಬಗ್ಗೆ ಜಿಲ್ಲೆ ಜನ ಬೇಸತ್ತಿದ್ದಾರೆ. ಬಿಜೆಪಿ ಪರ ಒಲವು ತೋರುತ್ತಿದ್ದಾರೆ. ಕೆ.ಆರ್.ಪೇಟೆ ಗೆಲುವು ಮುಂದಿನ ವಿಧಾನಸಭೆ ಗೆಲ್ಲಲು ಪ್ರೇರಣೆ. ಕಾಂಗ್ರೆಸ್ ಕಿವಿ ಮೇಲೆ ಹೂ ಅಭಿಯಾನ ವಿಚಾರಕ್ಕೆ ಪ್ರತಿಕ್ರಿಯಿಸಿ, ಚುನಾವಣೆಯಲ್ಲಿ ರಾಜ್ಯದ ಜನರೆ ಕಾಂಗ್ರೆಸ್ ನಾಯಕರ ಕಿವಿಗೆ ಹೂ ಮುಡಿಸಲಿದ್ದಾರೆ. ಕಾಂಗ್ರೆಸ್‌ನಲ್ಲಿ ಬಹಳಷ್ಟು ಜನ ಈಗಾಗಲೇ ಸಿಎಂ ಆಗಿದ್ದೇವೆ ಎಂಬ ಭ್ರಮೆಯಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ, ಅವರಿಗೆಲ್ಲಾ ನಿರಾಸೆ ಆಗಲಿದೆ ಎಂದರು.

**ಸಿಎಂ ವಿರುದ್ಧ ದೂರು:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಬಿ.ವೈ.ವಿಜಯೇಂದ್ರಗೆ ರೈತರು ದೂರು ನೀಡಿದ್ದಾರೆ. ಹೊಳಲು ಗ್ರಾಮದಲ್ಲಿ ವಿಜಯೇಂದ್ರರನ್ನು ಭೇಟಿ ಮಾಡಿದ ರೈತರು, ಯಡಿಯೂರಪ್ಪ ನಮ್ಮ ಸಮಸ್ಯೆ ಬಗ್ಗೆ ಗಮನ ಕೊಟ್ಟಿದ್ದರು. ಈಗಿನ ಸಿಎಂ ಬೊಮ್ಮಾಯಿ ಗಮನಕೊಡುತ್ತಿಲ್ಲ. ನಿಮ್ಮ ಕೈ ಮುಗಿದು ಕಳಕಳಿಯಿಂದ ಕೇಳಿ ಕೊಳ್ತಿದ್ದೇವೆ. ನೀವಾದರೂ ಗಮನಕೊಟ್ಟು, ನಮ್ಮ ಹೋರಾಟಕ್ಕೆ ಸ್ಪಂದಿಸಿ ಎಂದು ಆಗ್ರಹಿಸಿದರು. ಕಳೆದ ನೂರಾರು ದಿನಗಳಿಂದ ನಿರಂತರ ಹೋರಾಟ ಮಾಡುತ್ತಿದ್ದೇವೆ. ಅಹೋರಾತ್ರಿ ಧರಣಿ, ಉಪವಾಸ ಸತ್ಯಾಗ್ರಹ ಕೂಡ ಮಾಡುತ್ತಿದೇವೆ. ಆದರೂ ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲ. ಕಬ್ಬು, ಹಾಲಿನ ದರದ ಬಗ್ಗೆ ರೈತರ ನಿರಂತರ ಹೋರಾಟವನ್ನು ಮಂಡ್ಯದ ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಮಾಡುತ್ತಿದ್ದು, ಈ ವಿಚಾರವಾಗಿ ಮಾಜಿ ಸಿಎಂ ಯಡಿಯೂರಪ್ಪರಿಂದ ಬೊಮ್ಮಾಯಿ ಅವರಿಗೆ ಸಮಸ್ಯೆ ಬಗೆಹರಿಸುವಂತೆ ಹೇಳಬೇಕೆಂದು ಮನವಿ ಮಾಡಿದರು.

## ಬಾಲ್ ಬ್ಯಾಡ್ಮಿಂಟನ್: ಶ್ರೀರಕ್ಷಾ ರಾಷ್ಟ್ರಮಟ್ಟಕ್ಕೆ ಆಯ್ಕೆ

ಕೆ.ಆರ್.ಪೇಟೆ, ಫೆ.21– ಇತ್ತೀಚೆಗೆ ಚೆನ್ನೈನಲ್ಲಿ ನಡೆದ ಅಂತರರಾಜ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗುವ ಮೂಲಕ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಎ.ಡಿ.ಶ್ರೀರಕ್ಷಾ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ಈಕೆ ಮಂಡ್ಯದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ವಿಭಾಗದ 6ನೇ ಸೆಮ್‌ನಲ್ಲಿ ವ್ಯಾಸಾಂಗ ಮಾಡುತ್ತಿದ್ದು, ಇತ್ತೀಚೆಗೆ ತಮಿಳುನಾಡಿನ ಚೆನ್ನೈನಲ್ಲಿ ನಡೆದ ಅಂತರರಾಜ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.



ಈಕೆ ಸಾಧನೆಗೆ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ, ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಅಗ್ರಹಾರಬಾಚಹಳ್ಳಿ ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ಫೆ.28, ಕೃಷಿ ಯಂತ್ರೋಪಕರಣ ಮೇಳ

ಮಂಡ್ಯ, ಫೆ.21– ಮಂಡ್ಯ ಕೃಷಿ ಸಂಶೋಧನಾ ಕೇಂದ್ರದ ಆವರಣದಲ್ಲಿ ಫೆ.28ರಂದು ಕೃಷಿ ಯಂತ್ರೋಪಕರಣಗಳ ಮೇಳ ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ ಭತ್ತ, ರಾಗಿ, ಮುಸುಕಿನ ಜೋಳ, ಮೇವಿನ ಬೆಳೆ, ತೋಟಗಾರಿಕೆ ಹಾಗೂ ಇನ್ನಿತರೆ ಬೆಳೆಗಳ ಬೇಸಾಯದಲ್ಲಿ ಉಪಯೋಗಿಸುವ ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗಿದೆ. ಕೊಯ್ಲೋತ್ತರ ಸಂಸ್ಕರಣಾ ತಾಂತ್ರಿಕತೆ ಮತ್ತು ಮೌಲ್ಯವರ್ಧನೆ ಈ ಬಾರಿಯ ಮೇಳದ ಪ್ರಮುಖ ಆಕರ್ಷಣೆಯಾಗಲಿದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಹಕರಿಸಬೇಕು ಎಂದು ವಲಯ ಪ್ರಕಟಣೆ ತಿಳಿಸಿದೆ.

# ಕೆಳಸೇತುವೆಗಾಗಿ ಪ್ರತಿಭಟನೆ ರಾಜಕೀಯ ಪ್ರೇರಿತ: ಶಾಸಕ ಎಂ.ಶ್ರೀನಿವಾಸ್

ಮಂಡ್ಯ, ಫೆ.21– ತಾಲೂಕಿನ ಹನಕರೆ ಸಮೀಪ ಕೆಳಸೇತುವೆ ನಿರ್ಮಿಸುವಂತೆ ರೈತ ಸಂಘದ ಕಾರ್ಯಕರ್ತರು ನಡೆಸಿದ ಪ್ರತಿಭಟನೆ ರಾಜಕೀಯ ಪ್ರೇರಿತ ಎಂದು ಶಾಸಕ ಎಂ.ಶ್ರೀನಿವಾಸ್ ಆರೋಪಿಸಿದರು.

ವೈಜ್ಞಾನಿಕ ರೀತಿ ಜನೋಪಯೋಗಿ ಕೆಳಸೇತುವೆ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ 2021ರ ಸೆ.6ರಂದು ಮನವಿ ಸಲ್ಲಿಸಿದ್ದೇನೆ. 2022ರಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೂ ಮನವಿ ಸಲ್ಲಿಸಿದ್ದು, ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದು ವೈಜ್ಞಾನಿಕ ಕೆಳಸೇತುವೆ ನಿರ್ಮಾಣಕ್ಕೆ ಸೂಚಿಸಿದ್ದರು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಲ್ಲದೇ ಸಂಸದ ಪ್ರತಾಪಸಿಂಹ ಅವರಿಗೂ 2022ರ ಮೇ 22ರಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದೆ. ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೇ 30ರಂದು ಮನವಿ ಸಲ್ಲಿಸಿ, ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಒತ್ತಾಯಿಸಿದ್ದೆ ಅವರೂ ಸಹ ಸಂಬಂಧಿಸಿದ ಹೆದ್ದಾರಿ ಪ್ರಾಧಿಕಾರಕ್ಕೆ ಕ್ರಮ ವಹಿಸುವಂತೆ ಸೂಚಿಸಿದ್ದರು ಎಂದರು.

ಜ.5ರಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಹೆದ್ದಾರಿ ಪರಿಶೀಲನೆಗೆ ಆಗಮಿಸಿದ್ದ ವೇಳೆ ಸಚಿವರನ್ನು ಖುದ್ದು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇನೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಲವಾರು ಬಾರಿ ಪತ್ರ ವ್ಯವಹಾರ ಮಾಡಿದ್ದೇನೆ. ಇಷ್ಟೇ ಅಲ್ಲದೆ ಸುತ್ತಮುತ್ತಲ ಗ್ರಾಮಸ್ಥರೊಂದಿಗೂ ಸ್ಥಳದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ದೊಡ್ಡ ಮಟ್ಟದಲ್ಲಿ ಗಮನ ಸೆಳೆದಿದ್ದೇವೆ. ಈ ಬಗ್ಗೆ ಗಂಭೀರವಾಗಿ ಪರಿಗಣಿಸಿದ ಹೆದ್ದಾರಿ ಪ್ರಾಧಿಕಾರ ಕಳೆದ ಫೆ.14ರಂದೇ ಕೆಳಸೇತುವೆ ನಿರ್ಮಾಣಕ್ಕೆ ಆದೇಶ ಹೊರಡಿಸಿದೆ. ಇದು ತಿಳಿದಿದ್ದರೂ ಸಹ ರೈತ ಸಂಘದ ಮಧುಚಂದನ್ ಜನರನ್ನು ಕಟ್ಟಿಕೊಂಡು ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್ ಮುಖಂಡ ರವಿಕುಮಾರ್ ಗಣಿಗ ಅವರು ಸಾಮಾಜಿಕ ಜಾಲತಾಣದಲ್ಲಿ ಸುಖಾಸುಮ್ಮನೆ ಪೋಸ್ಟ್ ಮಾಡಿ ಗೊಂದಲ ಉಂಟುಮಾಡಿದ್ದಾರೆ.



> ಮುಂದಿನ ಚುನಾವಣೆಯಲ್ಲಿ ಮಂಡ್ಯದಿಂದ ನಾನೇ ಕಣಕ್ಕಿಳಿಯಲಿದ್ದು, ಟಿಕೆಟ್ ಅನ್ನು ಬೇರೆಯವರಿಗೆ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಜೊತೆಗೆ ಕ್ಷೇತ್ರದ ಮತ್ತೋರ್ವ ಟಿಕೆಟ್ ಆಕಾಂಕ್ಷಿ ಬಿ.ಆರ್.ರಾಮಚಂದ್ರು ಪ್ರಚಾರ ನಡೆಸುತ್ತಿದ್ದಾರೆ. ಅದರೆ ಅವರು ಪಂಚರತ್ನ ವಿಚಾರ ಹಾಗೂ ಜೆಡಿಎಸ್ ಸಂಘಟನೆ ಬಗ್ಗೆ ಪ್ರಚಾರ ನಡೆಸುತ್ತಿದ್ದು, ಇದಕ್ಕೆ ನನ್ನ ಅಭ್ಯಂತರವಿಲ್ಲ. ಒಂದು ವೇಳೆ ನಾನೇ ಅಭ್ಯರ್ಥಿ ಎಂದು ಪ್ರಚಾರ ನಡೆಸಿದರೆ, ಪಕ್ಷದ ನಾಯಕರ ಗಮನಕ್ಕೆ ತರುವೆ. – ಎಂ.ಶ್ರೀನಿವಾಸ್, ಶಾಸಕ.

ಇದು ರಾಜಕೀಯ ಪ್ರೇರಿತ ಪ್ರತಿಭಟನೆ ಎಂದು ಆರೋಪಿಸಿದರು.

ಕೆಳಸೇತುವೆ ನಿರ್ಮಾಣಕ್ಕಾಗಿ 8 ಕೋಟಿ ರೂ. ಬಿಡುಗಡೆಯಾಗಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಆದೇಶದಂತೆ ಮುಂದಿನ ದಿನಗಳಲ್ಲಿ ಜನರಿಗೆ ಅನುಕೂಲವಾಗುವ ರೀತಿ ಕೆಳಸೇತುವೆ ನಿರ್ಮಾಣ ಮಾಡುತ್ತದೆ. ಇನ್ನೂ ಹೆದ್ದಾರಿ ಕಾಮಗಾರಿ ಪೂರ್ಣವಾಗಿಲ್ಲ. ಸಾಂಕೇತಿಕವಾಗಿ ಉದ್ಘಾಟನೆಯಾದರೂ ಕೆಳಸೇತುವೆ ಮಾಡುತ್ತದೆ. ಇದರಲ್ಲಿ ಯಾವುದೇ ಸಂಶಯ ಬೇಡ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ವರಿಷ್ಠರ ಗಮನಕ್ಕೆ:** ಜಾತ್ಯಾತೀತ ಜನತಾ ದಳ ಈಗಾಗಲೇ 93 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಣೆ ಮಾಡಿದೆ. ಇದರಲ್ಲಿ ಮಂಡ್ಯ ಕ್ಷೇತ್ರವೂ ಒಂದಾಗಿದೆ. ಪಕ್ಷದ ವರಿಷ್ಠರು ನನ್ನ ಹೆಸರನ್ನು ಮತ್ತೆ ಘೋಷಣೆ ಮಾಡಿ ಟಿಕೆಟ್ ನೀಡುವುದಾಗಿ ತಿಳಿಸಿದೆ. ಹೀಗಿರುವಾಗ ಬೇರೆ ಪಕ್ಷದ ಮುಖಂಡರು ಗೊಂದಲ ಮೂಡಿಸಿ ಪ್ರಚಾರ ಕಾರ್ಯದಲ್ಲಿ ತೊಡಗಿರುವುದು ಸರಿಯಲ್ಲ. ಈ ಬಗ್ಗೆ ವರಿಷ್ಠರ ಗಮನ ಸೆಳೆಯಲಾಗುವುದು ಎಂದು ಸ್ಪಷ್ಟಪಡಿಸಿದರು. ಪಕ್ಷ ಸಂಘಟನೆಗೆ ಯಾವುದೇ ಆಕ್ಷೇಪ ಇಲ್ಲ. ಯಾರೇ ಆಗಲಿ ಪಕ್ಷದ ಆದೇಶಕ್ಕೆ ಮನ್ನಣೆ ನೀಡಬೇಕು ಎಂದರು.

ಗೋಷ್ಠಿಯಲ್ಲಿ ನಗರಸಭಾಧ್ಯಕ್ಷ ಎಚ್.ಎಸ್.ಮಂಜು, ಸದಸ್ಯೆ ಮಂಜುಳಾ, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಚ್.ಎನ್.ಯೋಗೇಶ್, ಜೆಡಿಎಸ್ ತಾಲೂಕು ಅಧ್ಯಕ್ಷ ತಿಮ್ಮೇಗೌಡ, ತಾಪಂ ಮಾಜಿ ಸದಸ್ಯ ಕಿರಣ್ ಕುಮಾರ್ ಹಾಜರಿದ್ದರು.

### ಎಲ್ಲರ ಹೋರಾಟದ ಫಲವಾಗಿ ಕೆಳಸೇತುವೆಗೆ ಒಪ್ಪಿಗೆ

ತಾಲೂಕಿನ ಹನಕೆರೆ ಬಳಿ ಕೆಳಸೇತುವೆ ನಿರ್ಮಾಣಕ್ಕೆ ಹೆದ್ದಾರಿ ಪ್ರಾಧಿಕಾರ ಒಪ್ಪಿಗೆ ಸೂಚಿಸಿರುವುದು ಎಲ್ಲರ ಹೋರಾಟದ ಫಲ ಎಂದು ರೈತ ಸಂಘದ ಸಂಘಟನಾ ಕಾರ್ಯದರ್ಶಿ ಎಸ್.ಸಿ.ಮಧುಚಂದನ್ ತಿಳಿಸಿದರು. ಸೋಮವಾರ ಬೆಂಗಳೂರು–ಮೈಸೂರು ಸಂಚಾರ ತಡೆದು ಪ್ರತಿಭಟನೆ ನಡೆಸಿದ ಬಳಿಕ ಹೆದ್ದಾರಿ ಪ್ರಾಧಿಕಾರದವರು ಕೆಳಸೇತುವೆ ನಿರ್ಮಿಸುವ ಆದೇಶ ಪ್ರತಿ ಕಳುಹಿಸಿದ್ದಾರೆ. ಮೊದಲೇ ಕಳುಹಿಸಿದ್ದರೆ ನಾವು ಪ್ರತಿಭಟನೆ ಮಾಡುತ್ತಿರಲಿಲ್ಲ. ಇದಕ್ಕೆ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ ಎಂದರು.

# ಶ್ರೀ ರಾಮಕೃಷ್ಣರ 188ನೇ ಜನ್ಮ ದಿನೋತ್ಸವ, ಜಾತ್ರಾ ಮಹೋತ್ಸವಕ್ಕೆ ಸಿಪಿಕೆ ಚಾಲನೆ

● ಐದು ದಿನಗಳ ರಾಮಕೃಷ್ಣರು, ವಿವೇಕಾನಂದರ ಆಧ್ಯಾತ್ಮಿಕ ಚಿಂತನೆ ● ರಾಮಕೃಷ್ಣನಗರ, ಶಾರದಾದೇವಿನಗರ, ವಿವೇಕಾನಂದನಗರ, ನಿವೇದಿತಾ ನಗರವೂ ಸೇರಿದಂತೆ ಸುತ್ತಮುತ್ತಲ ಬಡಾವಣೆ ನಿವಾಸಿಗಳಲ್ಲಿ ಹಬ್ಬದ ವಾತಾವರಣ



ಮೈಸೂರು, ಫೆ.21(ಎಸ್‌ಪಿಎನ್)– ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜನ್ಮ ದಿನೋತ್ಸವ ಹಾಗೂ 3ನೇ ವರ್ಷದ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವಕ್ಕೆ ಮಂಗಳವಾರ ಅರ್ಥ ಪೂರ್ಣ ಚಾಲನೆ ದೊರಯಿತು.

ಮೈಸೂರು ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ, ಶ್ರೀ ರಾಮಕೃಷ್ಣ ಸೇವಾ ಸಂಘ ಮತ್ತು ವಿವೇಕ ಬಳಗ, ಶ್ರೀ ರಾಮಕೃಷ್ಣ ಸೇವಾ ಬಳಗ, ಶ್ರೀ ರಾಮಕೃಷ್ಣಾಶ್ರಮ ಹಾಗೂ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಐದು ದಿನಗಳ ಜಾತ್ರಾ ಮಹೋತ್ಸವಕ್ಕೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಚಾಲನೆ ನೀಡಿ, ಮಾತನಾಡಿದರು.

'ವಿವೇಕಾನಂದರ ಸಾಹಿತ್ಯದಲ್ಲಿ ಆಧ್ಯಾತ್ಮ' ಕುರಿತು ಸಿಪಿಕೆ ಮಾತನಾಡಿ, ಸ್ವಾಮಿ ವಿವೇಕಾನಂದರು 'ದರಿದ್ರ ನಾರಾಯಣ' ಹೆಸರಿನ ಆಧ್ಯಾತ್ಮದ ಮಹತ್ವ ತಿಳಿಸಿಕೊಟ್ಟಿದ್ದರು. ಇದನ್ನು 339 ಕೋಟಿ ದೇವತೆಗಳ ಜೊತೆ ಜೋಡಿಸದೇ ಇದರಲ್ಲಿ ಮಾತೃ ದೇವೋಭವ, ಪಿತೃ ದೇವೋಭವ ಎಂದು ಹೇಳಿದಂತೆ 'ದರಿದ್ರ ದೇವೋಭವ' ಎಂದು ವಿವೇಕಾನಂದರು ತಮ್ಮ ಪ್ರವಚನದಲ್ಲಿ ಪದೇಪದೆ ಉಚ್ಛಾರ ಮಾಡುತ್ತಿದ್ದರು. ಏಕೆಂದರೆ ದರಿದ್ರರು ನಿಮ್ಮ ದೇವರಾಗಲಿ, ಮೂರ್ಖ ದೇವೋಭವ ಎಂದರೆ ಮೂರ್ಖರು ನಿಮ್ಮ ದೇವರಾಗಲಿ, ಪಾಪಿ ದೇವೋಭವ ಎಂದರೆ, ಪಾಪಿಗಳು ನಿಮ್ಮ ಮನೆ ದೇವರಾಗಲಿ ಎಂದು ಕಟ್ಟಕಡೆಯ ವ್ಯಕ್ತಿಯನ್ನು ಸಹ ಸಮಾಜದಲ್ಲಿ ಸಮಾನತೆಯಿಂದ ನೋಡಲಿ ಎಂಬುದು ಅವರ ಮಾತಿನ ಅರ್ಥವಾಗಿತ್ತು ಎಂದು ತಿಳಿಸಿದರು.

ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರನ್ನು 'ಜ್ಞಾನಸಿದ್ಧ'ರು ಎಂದು ಕರೆಯುತ್ತಿದ್ದರು. ಇದಕ್ಕೆ ಕಾರಣ ಸ್ವಾಮಿ ವಿವೇಕಾನಂದರ ಸಾಮಾಜಿಕ ಕಳಕಳಿ ಹಾಗೂ ಅವರಲ್ಲಿದ್ದ ಅಪಾರ ಆಧ್ಯಾತ್ಮಿಕ ಜ್ಞಾನ ಸಂಪತ್ತು. ಸಮಾಜದ ಪರಿವರ್ತನೆಗಾಗಿ ಅದರಲ್ಲೂ ಯುವಕರ ಪರಿವರ್ತನೆಗಾಗಿ ಅವರ ಪ್ರವಚನಗಳು ಬಹುತೇಕ ಮೀಸಲಾಗಿದ್ದವು. ಈ ವಿಷಯದಲ್ಲಿ ಅವರನ್ನು ವೀರಸನ್ಯಾಸಿ ಎಂದರೂ ತಪ್ಪಿಲ್ಲ. ಅವರು(ವಿವೇಕಾನಂದರು) ಸಮಾಜವಾದಿ ಎಂಬ ಮಾತನ್ನು ಅವರ ಬರಹಗಳಲ್ಲಿ ಉಲ್ಲೇಖಿಸಿದ್ದಾರೆ. ನಮ್ಮ ದೇಶದ ಪ್ರತಿಯೊಬ್ಬ ಯುವಕ ಆಧ್ಯಾತ್ಮ ವಿಚಾರ ತಿಳಿದುಕೊಳ್ಳುವಂತೆ ಮಾಡಬೇಕು. ನಂತರದ ಸ್ಥಾನದಲ್ಲಿ ಸಾಮಾಜಿಕ ವಿಚಾರಗಳು ಅವರ ಹೃದಯಲ್ಲಿ ಮೂಡುವಂತಿರಬೇಕು ಎಂಬುದು ಅವರ ಆಲೋಚನೆಯಾಗಿತ್ತು ಎಂದು ಅಭಿಪ್ರಾಯಪಟ್ಟರು.

ಈ ದೃಷ್ಟಿಯಿಂದ ನೋಡಿದಾಗ 'ಮಾನವ ಸೇವೆಯೇ ಮಾಧವ ಸೇವೆ, ದೇಶ ಸೇವೆಯೇ ಈಶ ಸೇವೆ' ಎಂಬುದು ಅವರ ನಿಲುವಾಗಿತ್ತು. ಸಮಾಜದಲ್ಲಿ ಹಸಿದವನಿಗೆ ಮೊದಲು ಅನ್ನ ನೀಡಬೇಕು. ನಂತರ ಆಧ್ಯಾತ್ಮ ಬೋಧಿಸಬೇಕು. ರೋಗ–ರುಜಿನಗಳಿಂದ ಬಳಲುತ್ತಿರುವವರಿಗೆ ಮೊದಲು ಸಹಾಯ ಮಾಡಬೇಕು. ಒಟ್ಟಿನಲ್ಲಿ ದಲಿತರು, ಶೋಷಿತರ ಏಳಿಗೆಗೆ ಶ್ರಮಿಸಬೇಕು ಎನ್ನುವ ನಿಲುವು ಅವರದ್ದಾಗಿತ್ತು. ವಿವೇಕಾನಂದರು ಆಧ್ಯಾತ್ಮ ಲೋಲಪತೆಯನ್ನು ತಿರಸ್ಕರಿಸಿ, ಶ್ರೀ ರಾಮಕೃಷ್ಣ ಪರಮಹಂಸರ ಆದೇಶದಂತೆ ಸರ್ವೋದಯ ಮಂತ್ರ ಜಪಿಸಿದರು. ಮುಂದೆ ಕುವೆಂಪು ಅವರು 'ಸರ್ವೋದಯ ಯುಗ ಮಂತ್ರ' ಎಂದು ತಮ್ಮ ತಮ್ಮ ಬರಹದಲ್ಲಿ ಉಲ್ಲೇಖಿಸಿದ್ದಾರೆ.

ಸ್ವಾಮಿ ವಿವೇಕಾನಂದರು ಅದ್ವೈತ ಸಿದ್ಧಾಂತ ಪ್ರತಿಪಾದಕರಾಗಿದ್ದರು. ವಿವೇಕಾನಂದರ ಮಾತಿನಲ್ಲಿ ಹಾಸ್ಯ ಮತ್ತು ವಿಡಂಬನಾ ಪ್ರಜ್ಞೆಯನ್ನು ಕಾಣಬಹುದು. ಈ ಅಂಶಗಳು ತಮ್ಮ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರಿಂದ ಬಳುವಳಿಯಾಗಿ ಬಂದಿವೆ ಎಂದು ಕೆಲ ಘಟನೆಗಳನ್ನು ಉದಾಹರಣೆ ನೀಡಿ ವಿವರಿಸಿದರಲ್ಲದೆ, ಇತ್ತೀಚೆಗೆ ನಮ್ಮ ಸಮಾಜದಲ್ಲಿ ಸ್ವರ್ಗ ಸಂಪಾದಿಸುವ ಜನರ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಸ್ವಾಮಿ ವಿವೇಕಾನಂದರು ಸ್ವರ್ಗದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದು ಆಧ್ಯಾತ್ಮಿಕ ಪ್ರವಚನ ನೀಡುವಾಗ ಹಾಸ್ಯ ಚಟಾಕಿ ಹಾರಿಸುತ್ತಿದ್ದ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರು.



ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿದರು. ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮಂಜುಳಾ ಬಸವರಾಜ್ ಉಪಸ್ಥಿತರಿದ್ದರು.

> ಶ್ರೀ ರಾಮಕೃಷ್ಣ ಪರಮಹಂಸರ ಸ್ಮರಣೆ ಮಾಡುವುದು ರಾಮಕೃಷ್ಣ ನಗರ, ವಿವೇಕಾನಂದ ನಗರ, ನಿವೇದಿತಾ ನಗರ, ಹಾಗೂ ಶಾರದಾದೇವಿ ನಗರದ ನಿವಾಸಿಗಳು ಸೇರಿದಂತೆ ಇತರೆ ಸುತ್ತಮುತ್ತಲಿನ ಬಡಾವಣೆ ಜನರ ಆದ್ಯ ಕರ್ತವ್ಯವಾಗಬೇಕು. ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಶ್ರೀ ರಾಮಕೃಷ್ಣ ಪರಮಹಂಸರ ವೃತ್ತದಲ್ಲಿ ಐದು ದಿನ ಜಾತ್ರಾ ಮಹೋತ್ಸವದಲ್ಲಿ ವಿವಿಧ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇದರಲ್ಲಿ ಹೆಚ್ಚಿನ ಜನರು ಪಾಲ್ಗೊಂಡು ಈ ಮಹೋತ್ಸವವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರಲ್ಲದೆ, ನಾನೂ ಕೂಡ ಐದು ದಿನಗಳ ಜಾತ್ರಾ ಮಹೋತ್ಸವದಲ್ಲಿ ಪ್ರತಿ ದಿನವೂ ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಕೈಜೋಡಿಸುತ್ತೇನೆ. ಈ ಜಾತ್ರಾ ಮಹೋತ್ಸವ ಅಂಗವಾಗಿ ಸುಯೋಗ ಆಸ್ಪತ್ರೆಯಿಂದ ಉಚಿತ ಆರೋಗ್ಯ ಶಿಬಿರ ಆಯೋಜಿಸಿದ್ದು, ಸುತ್ತಮುತ್ತಲಿನ ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. –ಡಿ.ಮಾದೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ

ಪ್ರತಿಯೊಬ್ಬರು ತಮ್ಮ ಜೀವಿತಾವಧಿಯಲ್ಲಿ ಸತ್ಯವನ್ನು ಹೇಳಬೇಕು. ಸತ್ಯ ಹೇಳುವುದು ಆಧ್ಯಾತ್ಮ. ಉಪನಿಷತ್‌ನಲ್ಲಿ 'ಸತ್ಯಮೇವ ಜಯತೆ' ಎಂಬ ಹೇಳಿಕೆಯಿದೆ. ಈ ಮಾತಿಗೆ ಪ್ರತಿಯೊಬ್ಬರು ಕಟಿಬದ್ಧರಾಗಿ ನಡೆದುಕೊಳ್ಳಬೇಕು ಎಂಬುದು ಅವರ ನಿಲುವಾಗಿತ್ತು. ಅಭಿವೃದ್ಧಿ ವಿಚಾರದಲ್ಲಿ ಸಾಮಾನ್ಯ ಹಾಗೂ ಸ್ತ್ರೀ ಸಮುದಾಯವನ್ನು ನಿರ್ಲಕ್ಷ್ಯ ಮಾಡುವುದು 'ರಾಷ್ಟ್ರೀಯ ಮಹಾಪಾಪ' ಗಳಲ್ಲೊಂದು. ಭೂಮಿ ಮೇಲಿರುವ ಧರ್ಮಗಳು ಸಾಮಾನ್ಯ ಜನರು, ದಲಿತರು ಹಾಗೂ ಸ್ತ್ರೀ ಸಮಾಜವನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ತಮ್ಮ ಆಧ್ಯಾತ್ಮಿಕ ಚಿಂತನೆಗಳಲ್ಲೊಂದು. ಅವರ ಸಾಮಾಜಿಕ ಪ್ರಜ್ಞೆಗೆ ಉದಾಹರಣೆ ನೀಡುವುದಾದರೆ, ಒಮ್ಮೆ ಕಲ್ಕತ್ತಾದಲ್ಲಿ ಪ್ಲೇಗ್ ಕಾಣಿಸಿಕೊಂಡಾಗ ಜನಸಾಮಾನ್ಯರ ನರಳಾಟ ಹೇಳತೀರದು. ಮಠದ ಆಸ್ತಿ ಮಾರಿ ಪ್ಲೇಗ್ ರೋಗದಿಂದ ಬಳಲುತ್ತಿದ್ದವರಿಗೆ ಚಿಕಿತ್ಸೆ ಕೊಡಿಸೋಣ ಎಂದಿದ್ದ ಪ್ರಸಂಗವನ್ನು ತಿಳಿಸಿದರು.

ವಿವೇಕಾನಂದರ ಬಳಿ ಶಿಷ್ಯನೊಬ್ಬ ದೇವರ ಕುರಿತು ಹೀಗೆ ಚರ್ಚಿಸುತ್ತಾನೆ. ಕಿಟಕಿ, ಬಾಗಿಲು ಹಾಕಿಕೊಂಡು ಏಕಾಂತದಲ್ಲಿ ಹಲವು ದಿನ ಧ್ಯಾನ ಮಾಡಿದರೂ ದೇವರ ದರ್ಶನವಾಗಿಲ್ಲ ಎಂದು ಬೇಸರದಿಂದ ನುಡಿದಿದ್ದನು. ನಂತರ ಸ್ವಾಮಿ ವಿವೇಕಾನಂದರು, ಆತನಿಗೆ ನೀನು ಮೊದಲು ಮುಚ್ಚಿರುವ ಕಿಟಕಿ, ಬಾಗಿಲು ತೆರೆದು ಸಮಾಜದಲ್ಲಿ ಸಮಸ್ಯೆಯಲ್ಲಿ ಸಿಲುಕಿರುವ ಜನರ ಬಳಿ ಬಂದು ಸೇವೆ ಮಾಡು. ಅದರಲ್ಲಿ ಭಗವಂತನನ್ನು ಕಾಣು ಎಂದು ಧರ್ಮ ಬೋಧನೆ ಮಾಡಿದ ಪ್ರಸಂಗವನ್ನು ಹೇಳಿದರು.

ಈ ವೇಳೆ ಪದ್ಮಿನಿ ವಲ್ಲಭ ಭಜನಾ ತಂಡದಿಂದ ಭಜನಾ ಕಾರ್ಯಕ್ರಮ, ವಿವೇಕಾ ಜಾಗೃತಿ ಬಳದ ಕಲಾವಿದರಿಂದ ವಿವೇಕಾನಂದರ ಕುರಿತು ಹಾಡುಗಳನ್ನು ಹಾಡಿದರು. ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ರಾಮಕೃಷ್ಣ ಸೇವಾಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಸುಯೋಗ ಆಸ್ಪತ್ರೆಯ ಅಧ್ಯಕ್ಷರು, ಹೃದ್ರೋಗ ತಜ್ಞ ಹಾಗೂ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ದೊರೈರಾಜ್, ಸಂಚಾಲಕರಾದ ಬಸವಣ್ಣ, ಬಸವಲಂಗಪ್ಪ, ಬಸವರಾಜ್, ಗೋಪಿನಾಥ್ ಉಪಸ್ಥಿತರಿದ್ದರು.

# ಹಿನಕಲ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಜಿ.ಟಿ.ದೇವೇಗೌಡ, ಪ್ರತಾಪ್‌ಸಿಂಹ ಚಾಲನೆ

ಮೈಸೂರು, ಫೆ.21(ಎಂಕೆ)– ಮೈಸೂರಿನ ಹಿನಕಲ್ ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ ನಾಳೆ(ಫೆ.22) ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ.





ಗ್ರಾಮದಲ್ಲಿರುವ ಶ್ರೀ ನನ್ನೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ 7.30ಕ್ಕೆ ಪೂಜೆ ಸಲ್ಲಿಸಿ, 8 ಗಂಟೆಗೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ಹಾಗೆಯೇ ಬೆಳಗ್ಗೆ 8.15ಕ್ಕೆ ಶ್ರೀ ನನ್ನೇಶ್ವರ ದೇವಸ್ಥಾನದ ಕಲ್ಯಾಣಿ, 8.30ಕ್ಕೆ ತಮ್ಮಡಗೇರಿ ರಸ್ತೆ ಮತ್ತು ಹುಂಡಿ ಬೀದಿ, ಚರ್ಚ್ ರಸ್ತೆ ಅಭಿವೃದ್ಧಿ, 8.45ಕ್ಕೆ ಟಿ.ಕೆ.ಬೇಕರಿ ರಸ್ತೆ, 9 ಗಂಟೆಗೆ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದ ಎದುರು, 9.30ಕ್ಕೆ ಶ್ರೀ ಕಾಳಮ್ಮ ದೇವಸ್ಥಾನ ಮತ್ತು ವಿಶ್ವಕರ್ಮ ರಸ್ತೆ, 10ಕ್ಕೆ ಸಾರ್ವಜನಿಕ ಗ್ರಂಥಾಲಯ, 10.30ಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನ, 11ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ, 11.30ಕ್ಕೆ ಕೆಂಡಗಣ್ಣಪ್ಪ ಮತ್ತು ಬಾಬು ಬಿರಾದರ್ ಅವರ ಮನೆ ರಸ್ತೆ ಅಭಿವೃದ್ಧಿಗೆ ಗುದ್ದಲಿ ನೆರವೇರಿಸಲಿದ್ದಾರೆ.

ಹಾಗೆಯೇ ಮಧ್ಯಾಹ್ನ 12.30ಕ್ಕೆ ಹಿನಕಲ್ ಸಾರ್ವಜನಿಕ ಸ್ಮಶಾನ, 1 ಗಂಟೆಗೆ ರಮೇಶ್ ಅವರ ಕೋಳಿ ಫಾರಂ ಹಿಂಭಾಗದ ರಸ್ತೆ, 1.30ಕ್ಕೆ ಲಕ್ಷ್ಮೀಗೌಡರ ಮತ್ತು ಕುಮಾರ್ ಅವರ ಮನೆ ರಸ್ತೆ, 2 ಗಂಟೆಗೆ 'ಎಫ್' ಬ್ಲಾಕ್, ವಿಜಯನಗರ 3ನೇ ಹಂತ, 2.15ಕ್ಕೆ ಹಿನಕಲ್ ಸರ್ಕಾರಿ ಪ್ರೌಢಶಾಲೆ, 2.30ಕ್ಕೆ ಎಸ್.ವಿ.ಅಪಾರ್ಟ್‌ಮೆಂಟ್ ರಸ್ತೆ, 3.30ಕ್ಕೆ ನೋಟ್ರೆಡಾಂ ಶಾಲೆ ಪಕ್ಕ, ಹೆಚ್.ಕೆ.ರಾಮಯ್ಯ ಬಡಾವಣೆ ರಸ್ತೆ, ಸಂಜೆ 4 ಗಂಟೆಗೆ ಆದಿತ್ಯ ಬಡಾವಣೆ ಹಾಗೂ 5 ಗಂಟೆಗೆ ಸುಬ್ರಮಣ್ಯ ಬಡಾವಣೆ ಮತ್ತು ಪ್ರಗತಿ ಕಣ್ಣಿನ ಆಸ್ಪತ್ರೆ ರಸ್ತೆ ಹಾಗೂ ಬಸಪ್ಪನ ದೇವಸ್ಥಾನದ ರಸ್ತೆ ಅಭಿವೃದ್ಧಿಗೆ ಗುದ್ದಲಿ ಪೂಜೆ ಸಲ್ಲಿಸಿ, ಚಾಲನೆ ನೀಡಲಿದ್ದಾರೆ.

## ಕೆಲವೇ ತಿಂಗಳಲ್ಲಿ ಯುನೆಸ್ಕೊ ಪಟ್ಟಿಗೆ ಬೇಲೂರು ಶ್ರೀ ಚೆನ್ನಕೇಶವ ದೇಗುಲ

ಬೇಲೂರು, ಫೆ.21– ಬೇಲೂರು ಶ್ರೀ ಚೆನ್ನಕೇಶವ ದೇಗುಲ ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ ಅಧಿಕೃತ ಘೋಷಣೆಯಾದಲ್ಲಿ, ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಮಹತ್ವಯುತ ಕೊಡುಗೆ ನೀಡುವುದಲ್ಲದೇ, ಬೇಲೂರು ಹಳೇಬೀಡು ಪ್ರದೇಶದ ಅಭಿವೃದ್ಧಿಗೂ ಸಹಕಾರಿಯಾಗಲಿದೆ ಎಂದರು.

ಅವರು ಇಂದು ಶ್ರೀ ಚೆನ್ನಕೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಬೇಲೂರು ಶ್ರೀ ಚೆನ್ನಕೇಶವ ದೇಗುಲ ಕರ್ನಾಟಕದ ಹೆಮ್ಮೆಯಾಗಿದ್ದು, ಇಲ್ಲಿನ ಶಿಲ್ಪಕಲೆ ವಿಶ್ವದೆಲ್ಲೆಡೆ ಪ್ರಸಿದ್ಧಿ ಹೊಂದಿದೆ. ಬೇಲೂರು ಶ್ರೀ ಚೆನ್ನಕೇಶವ ದೇಗುಲವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಸಂಬಂಧ ಪಟ್ಟ ಇತಿಹಾಸ, ದಾಖಲೆಗಳನ್ನು ಈಗಾಗಲೇ ಸರ್ಕಾರ ಸಲ್ಲಿಸಿದೆ. ಕೆಲವೇ ತಿಂಗಳಲ್ಲಿ ಯುನೆಸ್ಕೊ ಪಟ್ಟಿಯಲ್ಲಿ ಸೇರುವ ಮೂಲಕ ಪ್ರವಾಸಿಗರು ಹೆಚ್ಚಳವಾಗುವ ಸಾಧ್ಯತೆಯಿದೆ ಎಂದರು.

## ಗೊಂದಲ ನಿವಾರಣೆ: ಪದವಿ ಮೊದಲ ಸೆಮಿಸ್ಟರ್ ಪರೀಕ್ಷೆ ಬರೆಯಲು ಎಲ್ಲರಿಗೂ ಅವಕಾಶ

ಮೈಸೂರು, ಫೆ.21(ಎಂಕೆ)– ಪರೀಕ್ಷಾ ಪ್ರವೇಶ ಪತ್ರ ಸಿಗದೆ ಆತಂಕದಲ್ಲಿದ್ದ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂದು ಮೈಸೂರು ವಿವಿ ಕುಲಸಚಿವ(ಪರೀಕ್ಷಾಂಗ) ಪ್ರೊ.ಎ.ಪಿ.ಜ್ಞಾನಪ್ರಕಾಶ್ ತಿಳಿಸಿದ್ದಾರೆ. ಮೈಸೂರು ವಿವಿ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮೊದಲ ಸೆಮಿಸ್ಟರ್ ಪರೀಕ್ಷೆ ಸೋಮವಾರ(ಫೆ.21)ದಿಂದ ಆರಂಭವಾಗಿದ್ದು, ಪರೀಕ್ಷಾ ಪ್ರವೇಶ ಪತ್ರಕ್ಕೆ ಅರ್ಜಿ ಸಲ್ಲಿಕೆ ಸಂಬಂಧ ಆನ್‌ಲೈನ್ ತಂತ್ರಾಂಶದಲ್ಲಾಗಿದ್ದ ಸಮಸ್ಯೆಗಳಿಂದ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರ ಸಿಗದೆ ತೊಂದರೆ ಉಂಟಾಗಿತ್ತು. ಈ ಕುರಿತು ತಂತ್ರಾಂಶ(ಯುನಿಫೈಡ್ ಯೂನಿವರ್ಸಿಟಿ ಕಾಲೇಜ್ ಮ್ಯಾನೇಜ್ಮೆಂಟ್ ಸಿಸ್ಟಮ್–UUCMS) ನಿರ್ವಹಣೆ ಕಚೇರಿ ಸಿಬ್ಬಂದಿಯೊಂದಿಗೆ ಸಮಾಲೋಚನೆ ನಡೆಸಿ, ಆತಂಕದಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳಿಗೂ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗಿದೆ ಎಂದು ಸ್ಪಷ್ಟಪಡಿಸಿದರು.



# ಮಾ.1ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸರ್ಕಾರಿ ನೌಕರರ ಕರೆ

ಬೆಂಗಳೂರು, ಫೆ.21– 7ನೇ ವೇತನ ಆಯೋಗ ಜಾರಿ ವಿಚಾರವಾಗಿ ಸರ್ಕಾರದ ನಡೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತೀವ್ರ ಅಸಮಾಧಾನ ಹೊರಹಾಕಿದೆ. ಸಂಘದ ಬೇಡಿಕೆ ಈಡೇರಿಸದಿದ್ದರೆ ಮಾ.1 ರಿಂದ ರಾಜ್ಯಾದ್ಯಂತ ಅನಿರ್ಧಿಷ್ಟಾವಧಿ ಮುಷ್ಕರ ಕೈಗೊಳ್ಳುವುದಾಗಿ ಕರೆ ನೀಡಿದೆ. ರಾಜ್ಯ ಬಜೆಟ್ ಮಂಡನೆ ವೇಳೆ ಏಳನೇ ವೇತನ ಆಯೋಗ ಜಾರಿ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಸ್ತಾಪಿಸದಿರುವುದಕ್ಕೆ ನೌಕರರ ಸಂಘ ಸರ್ಕಾರದ ವಿರುದ್ಧ ಕಿಡಿಕಾರಿದೆ. ಈ ಹಿನ್ನೆಲೆಯಲ್ಲಿ ಸಂಘವು ಮಂಗಳವಾರ ತುರ್ತು ಕಾರ್ಯಕಾರಿಣಿ ಸಭೆ ಕರೆದು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ.

**ಸಂಘದ ಬೇಡಿಕೆಗಳೇನು?:** ಏಳನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು 40% ಫಿಟ್ಮೆಂಟ್‌ನ್ನು 1.07.2022 ರಿಂದ ಜಾರಿಗೆ ತರುವುದು, ರಾಜಸ್ತಾನ, ಛತ್ತೀಸಗಢ, ಜಾರ್ಖಂಡ್, ಪಂಜಾಬ್ ಹಾಗೂ ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಎನ್‌ಪಿಎಸ್ ರದ್ದುಗೊಳಿಸಿ ಹಳೆ ಪಿಂಚಣಿ ಯೋಜನೆ ಜಾರಿಗೆ ತಂದಿರುವಂತೆಯೇ ಕರ್ನಾಟಕ ರಾಜ್ಯದಲ್ಲಿಯೂ ಮಾಡಬೇಕು ಎಂದು ಬೇಡಿಕೆಯಿಟ್ಟಿದೆ ಈ ಎರಡು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗುವುದು. ಬೇಡಿಕೆ ಈಡೇರಿಸದಿದ್ದರೆ ಮಾ.1 ರಿಂದ ರಾಜ್ಯದ ಎಲ್ಲಾ ಸರ್ಕಾರಿ ನೌಕರರು, ನಿಗಮ ಮತ್ತು ಮಂಡಳಿಗಳು ಅನುದಾನಿತ ಸಂಸ್ಥೆಯ ಎಲ್ಲ ನೌಕರರು ಅನಿರ್ದಿಷ್ಟಾವಧಿ ವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗುವುದರ ಮೂಲಕ ಮುಷ್ಕರ ಮಾಡಲಾಗುವುದು ಎಂದು ಸಂಘವು ತಿಳಿಸಿದೆ.

ಮಾ.1 ರಿಂದ ಅನಿರ್ಧಿಷ್ಟಾವಧಿ ವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮುಂದಾಗಿದೆ. ಇಂದು ಜರುಗಿದ ಕಾರ್ಯಕಾರಿಣಿ ಸಭೆಯಲ್ಲಿ ಮೇಲಿನ ತೀರ್ಮಾನ ಕೈಗೊಳ್ಳಲಾಗಿದೆ.

ಮೈಸೂರು ಮಿತ್ರ ಬುಧವಾರ 22 ಫೆಬ್ರವರಿ 2023

# ಕೊಡಗಲ್ಲಿ ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕೆ ಕೇಂದ್ರಗಳ ಆರಂಭ

**● ಜಿಲ್ಲೆಯ 542 ಮತಗಟ್ಟೆಯಲ್ಲೂ ಜಾಗೃತಿ ● ದೋಷಯುತ ಮತಯಂತ್ರ, ಕಂಟ್ರೋಲ್ ಯೂನಿಟ್, ವಿವಿ ಪ್ಯಾಟ್ ವಾಪಸ್**




ಮಡಿಕೇರಿ, ಫೆ.21– ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕೆ ಕೇಂದ್ರಗಳನ್ನು ನಗರದ ಜಿಲ್ಲಾಧಿಕಾರಿ ಕಚೇರಿ, ಉಪ ವಿಭಾಗಾಧಿಕಾರಿ ಕಚೇರಿ ಮತ್ತು ವಿರಾಜಪೇಟೆಯ ವಿಧಾನಸಭಾ ಚುನಾವಣಾಧಿಕಾರಿ ಕಚೇರಿಯಲ್ಲಿ ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ವಿದ್ಯುನ್ಮಾನ ಮತಯಂತ್ರ ಮತ್ತು ವಿವಿಪ್ಯಾಟ್ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ವಿಧಾನಸಭಾ ಚುನಾವಣಾ ದಿನಾಂಕ ಪ್ರಕಟವಾಗುವವರೆಗೆ ಈ ಪ್ರಾತ್ಯಕ್ಷಿಕೆ ನಡೆಯಲಿದೆ. ಜೊತೆಗೆ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ 542 ಮತಗಟ್ಟೆ ವ್ಯಾಪ್ತಿಯಲ್ಲಿಯೂ ಜಾಗೃತಿ ಮೂಡಿಸಲಾಗುತ್ತದೆ. ವಿದ್ಯುನ್ಮಾನ ಮತಯಂತ್ರದ ಬಗ್ಗೆ ಪ್ರಾತ್ಯಕ್ಷಿಕೆ ಅವಕಾಶವನ್ನು ಬಳಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ವಿವರಿಸಿದರು. ಭಾರತ ಚುನಾವಣಾ ಆಯೋಗದಿಂದ ಕೊಡಗು ಜಿಲ್ಲೆಗೆ ತೆಲಂಗಾಣ ರಾಜ್ಯದ ಹೈದರಾಬಾದ್‌ನ ಭಾರತೀಯ ವಿದ್ಯುನ್ಮಾನ ನಿಗಮದಿಂದ ವಿವಿಎಂ ಮತ್ತು ವಿವಿಪ್ಯಾಟ್ ಪೂರೈಕೆಯಾಗಿದ್ದು, ಅದರಲ್ಲಿ ಬ್ಯಾಲೆಟ್ ಯುನಿಟ್ 1013, ಕಂಟ್ರೋಲ್ ಯುನಿಟ್ 711 ಮತ್ತು ವಿವಿ ಪ್ಯಾಟ್ 768 ಪೂರೈಕೆಯಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ವಿದ್ಯುನ್ಮಾನ ಮತಯಂತ್ರಗಳ ಪರಿಶೀಲನಾ ಕಾರ್ಯವನ್ನು ಭಾರತೀಯ ವಿದ್ಯುನ್ಮಾನ ನಿಗಮದ ಎಂಜಿನಿಯರ್‌ಗಳು ನಡೆಸಿ ಒಂದು ಬ್ಯಾಲೆಟ್ ಯೂನಿಟ್ ಮಾತ್ರ ತಿರಸ್ಕೃತಗೊಂಡಿತ್ತು ಎಂದು ಜಿಲ್ಲಾಧಿಕಾರಿ ಹೇಳಿದರು. ಈ ಸಂಬಂಧ ಫೆಬ್ರವರಿ ಮೊದಲ ವಾರದಲ್ಲಿ ವಿದ್ಯುನ್ಮಾನ ಮತಯಂತ್ರದ ಮೊದಲ ಹಂತದ ಪರಿಶೀಲನಾ ಕಾರ್ಯ ಕೈಗೊಳ್ಳಲಾಗಿತ್ತು. ಅದರಂತೆ 1011 ಬ್ಯಾಲೆಟ್ ಯೂನಿಟ್ ಸರಿಯಾಗಿದ್ದು, ಒಂದು ತಿರಸ್ಕೃತಗೊಂಡಿದೆ. 704 ಕಂಟ್ರೋಲ್ ಯೂನಿಟ್ ಸರಿಯಾಗಿದ್ದು, 7 ತಿರಸ್ಕೃತಗೊಂಡಿದೆ. ಹಾಗೆಯೇ 765 ವಿವಿ ಪ್ಯಾಟ್ ಸರಿಯಾಗಿದ್ದು, 3 ತಿರಸ್ಕೃತಗೊಂಡಿದೆ. ತಿರಸ್ಕೃತಗೊಂಡ ವಿದ್ಯುನ್ಮಾನ ಮತಯಂತ್ರ ಮತ್ತು ವಿವಿ ಪ್ಯಾಟ್‌ನ್ನು ಹೈದರಾಬಾದ್‌ನ ಭಾರತೀಯ ವಿದ್ಯುನ್ಮಾನ ನಿಗಮಕ್ಕೆ ಹಿಂತಿರುಗಿಸಲಾಗಿದೆ ಎಂದು ಡಾ.ಬಿ.ಸಿ.ಸತೀಶ ಮಾಹಿತಿ ನೀಡಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ತರಬೇತಿ ಮತ್ತು ಜಾಗೃತಿ ಕಾರ್ಯಕ್ಕೆ ಶೇ.10 ರಷ್ಟು ವಿವಿಎಂ ಮತ್ತು ವಿವಿಪ್ಯಾಟ್‌ನ್ನು ಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ರಾಜಕೀಯ ಪಕ್ಷಗಳ ಪ್ರಮುಖರಾದ ಕೆ.ಎಂ.ಅಪ್ಪಣ್ಣ(ಬಿಜೆಪಿ), ಸದಾ ಮುದ್ದಪ್ಪ (ಕಾಂಗ್ರೆಸ್), ರಮೇಶ್(ಸಿಪಿಐಎಂ), ಪತ್ರಕರ್ತರು ಹಾಗೂ ಇತರರ ಉಪಸ್ಥಿತಿಯಲ್ಲಿ ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕೆಗೆ ಚಾಲನೆ ದೊರೆಯಿತು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಹಾಗೂ ಮಡಿಕೇರಿ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಯತೀಶ್ ಉಳ್ಳಾಲ್, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಶಬಾನಾ ಎಂ.ಶೇಖ್ ಇತರರು ಇದ್ದರು.

## ಇಂದು ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ

ಮಡಿಕೇರಿ, ಫೆ.21– ಗೋಣಿಕೊಪ್ಪಲು ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದುಕೊರತೆಗಳ ನಿವಾರಣೆ ಸಭೆ ಫೆ.23 ರಂದು ಬೆಳಗ್ಗೆ 11 ಗಂಟೆಯಿಂದ 12 ಗಂಟೆವರೆಗೆ ಗೋಣಿಕೊಪ್ಪಲು ಉಪ ವಿಭಾಗ ಕಚೇರಿ ಆವರಣದಲ್ಲಿ ಕೊಡಗು ಮತ್ತು ಚಾಮರಾಜನಗರ ವೃತ್ತದ ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಹಾಗೆಯೇ ವಿರಾಜಪೇಟೆ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ಸಭೆಯು ಫೆ.23 ರಂದು ಮಧ್ಯಾಹ್ನ 3 ಗಂಟೆಯಿಂದ ಸಂಜೆ 4 ಗಂಟೆವರೆಗೆ ವಿರಾಜಪೇಟೆ ಉಪ ವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ.

ಗೋಣಿಕೊಪ್ಪಲು ಮತ್ತು ವಿರಾಜಪೇಟೆ ವ್ಯಾಪ್ತಿಯ ಸಾರ್ವಜನಿಕರು, ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ ಈ ಸಭೆಯಲ್ಲಿ ಚರ್ಚಿಸಿ, ಬಗೆಹರಿಸಿಕೊಳ್ಳಲು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

## ವ್ಯಾನ್–ಬೈಕ್ ಡಿಕ್ಕಿ: ಸವಾರ ಸಾವು

ಮಡಿಕೇರಿ, ಫೆ.21– ಮಾರುತಿ ವ್ಯಾನ್ ಮತ್ತು ಬೈಕ್ ಮುಖಾಮುಖಿ ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ಪಾಲಿಬೆಟ್ಟ–ತಿತಿಮತಿ ರಸ್ತೆಯಲ್ಲಿ ನಡೆದಿದೆ. ಬೈಕ್ ಸವಾರ, ಹುಣಸೂರು ನಿವಾಸಿ ಕೆಂಪನಾಯಕ(35) ಮೃತ ದುರ್ದೈವಿ.



ಈ ಎರಡು ವಾಹನಗಳು ಡಿಕ್ಕಿಯಾದ ಭೀಕರತೆಗೆ ಕೆಂಪನಾಯಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಕಾಮವ್ವ ನಿಧನ

ನಾಪೋಕ್ಲು, ಫೆ.21– ಇಲ್ಲಿಗೆ ಸಮೀಪದ ಹಳೆತಾಲೂಕು ನಿವಾಸಿ ದಿ.ಮುಂಡಂಡ ಸುಬ್ಬಯ್ಯ ಅವರ ಧರ್ಮಪತ್ನಿ ಕಾಮವ್ವ (94)



ಮಂಗಳವಾರ ದೈವಾಧೀನರಾದರು. ಶ್ರೀಯುತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದು, ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದಲ್ಲಿ ನೆರವೇರಿತು.

## ಕೊಡಗು ಮೆಡಿಕಲ್ ಕಾಲೇಜು ಬೋಧನಾ ಆಸ್ಪತ್ರೆ ಕಟ್ಟಡ ಕಾಮಗಾರಿ ನವೆಂಬರ್‌ನಲ್ಲಿ ಪೂರ್ಣ

**ಜಿಲ್ಲಾಧಿಕಾರಿ ಡಾ. ಸತೀಶ್ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ**

ಮಡಿಕೇರಿ, ಫೆ.21– ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಲಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ಬೋಧಕ ಆಸ್ಪತ್ರೆ ಕಟ್ಟಡ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅಧ್ಯಕ್ಷತೆಯಲ್ಲಿ ಮಂಗಳವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.



ಜಿಲ್ಲಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಂಜಿನಿಯರ್, ವೈದ್ಯಕೀಯ ಕಾಲೇಜು ಅಧಿಕಾರಿಗಳು ಹಾಗೂ ಕಟ್ಟಡ ಕಾಮಗಾರಿ ನಿರ್ಮಿಸುತ್ತಿರುವ ಕಂಪನಿಯ ಪ್ರತಿನಿಧಿಗಳಿಂದ ಮಾಹಿತಿ ಪಡೆದರು.

ಹಾಲಿ ಬೋಧಕ ಆಸ್ಪತ್ರೆಯ ಮುಖ್ಯ ಕಟ್ಟಡದ ಬಳಿ 8 ಅಂತಸ್ತಿನ 300 ಹಾಸಿಗೆಯ ಕಟ್ಟಡ ಮತ್ತು ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಬಳಿ 7 ಅಂತಸ್ತಿನ 150 ಹಾಸಿಗೆಯ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿ ನ.18 ರೊಳಗೆ ಮುಕ್ತಾಯವಾಗಲಿದೆ. ಇಲ್ಲಿಯವರೆಗೆ 95.91 ಕೋಟಿ ಅನುದಾನ ಬಿಡುಗಡೆಯಾಗಿದೆ. ಹೆಚ್ಚುವರಿಯಾಗಿ 39.09 ಕೋಟಿ ಅನುದಾನ ಬಿಡುಗಡೆ ಆಗಬೇಕಿದೆ. ಎರಡನೇ ಹಂತದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ಮುಖ್ಯ ಎಂಜಿನಿಯರ್ ಅವರಿಗೆ ಸಲ್ಲಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ ಗೌಡ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಮಾರ್ಚ್‌ನಲ್ಲಿ ಸಿಎಂ ಬೊಮ್ಮಾಯಿ ಅವರು ಜಿಲ್ಲೆಗೆ ಆಗಮಿಸುವ ನಿರೀಕ್ಷೆ ಇದ್ದು, ಈ ಸಂದರ್ಭ 150 ಹಾಸಿಗೆ ಸಾಮರ್ಥ್ಯದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡವನ್ನು ಮಾರ್ಚ್ 17 ರೊಳಗೆ ಮುಕ್ತಾಯಗೊಳಿಸಲು ಸೂಚಿಸಿದರು.

ಈ ಕಟ್ಟಡದ ಕಾಮಗಾರಿ ಶೇ.90 ರಷ್ಟು ಪೂರ್ಣ ಗೊಂಡಿದ್ದು, ಕಟ್ಟಡ ಕಾಮಗಾರಿ ಅಂತಿಮ ಹಂತದಲ್ಲಿದ್ದು ನೀರು, ವಿದ್ಯುತ್ ಒದಗಿಸ ಲಾಗಿದ್ದು, ಸುಣ್ಣ ಬಣ್ಣದ ಕಾಮಗಾರಿಯನ್ನು 1 ವಾರದೊಳಗೆ ಪೂರ್ಣಗೊಳಿಸುವುದಾಗಿ ಸಂಬಂಧಪಟ್ಟ ಗುತ್ತಿಗೆದಾರರು ಮಾಹಿತಿ ಒದಗಿಸಿದರು.

ಸಭೆಯಲ್ಲಿ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ.ಕಳ್ಳಿಚಂಡ ಕಾರ್ಯಪ್ಪ, ಮುಖ್ಯ ಆಡಳಿತಾಧಿಕಾರಿ ಸ್ವಾಮಿ ಎ.ಎಲ್, ಪ್ರಾಂಶುಪಾಲ ಡಾ.ವಿಶಾಲ್ ಕುಮಾರ್, ವೈದ್ಯಕೀಯ ಅಧೀಕ್ಷಕ ಡಾ. ರೂಪೇಶ್ ಗೋಪಾಲ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ನಂಜುಂಡಯ್ಯ, ಸ್ಥಾನೀಯ ವೈದ್ಯಾಧಿಕಾರಿ ಡಾ.ಸತೀಶ್ ವಿ.ಎಸ್, ಸಹಾಯಕ ಕಾರ್ಯಪಾಲಕ ಅಭಿಯಂತರ ನರಸಿಂಹಮೂರ್ತಿ, ಸಹಾಯಕ ಅಭಿಯಂತ ರಾಜೇಶ್, ರಾಮ ಕೃಷಿ ಕಟ್ಟಡ ನಿರ್ಮಾಣ ಗುತ್ತಿಗೆದಾರರ ಪ್ರತಿನಿಧಿಗಳಾದ ಹೇಮಂತ್, ಗಿರೀಶ್ ಹಾಜರಿದ್ದರು.

## ಕಂದಕಕ್ಕೆ ಉರುಳಿಬಿದ್ದ ಸಾರಿಗೆ ಬಸ್: ಚಾಲಕ ಸೇರಿ 40 ಮಂದಿಗೆ ಗಾಯ

**ಮಂಜು ಕವಿದ ವಾತಾವರಣವೇ ದುರಂತಕ್ಕೆ ಕಾರಣ**

ಮಡಿಕೇರಿ, ಫೆ.21– ಚಾಲಕನ ನಿಯಂತ್ರಣ ತಪ್ಪಿದ ಕೆಎಸ್‌ಆರ್‌ಟಿಸಿ ಬಸ್ ಕಂದಕಕ್ಕೆ ಉರುಳಿ ಬಿದ್ದು 40 ಮಂದಿ ಗಾಯಗೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಅಮ್ಮತ್ತಿಂಯ ಕಾವಾಡಿಯಲ್ಲಿ ನಡೆದಿದೆ.



ಹಾಸನ ಡಿಪೋಗೆ ಸೇರಿದ ಬಸ್ ಮಂಗಳವಾರ ಬೆಳಗಿನ ಜಾವ ಕೇರಳದ ಎರ್ನಾಕುಲಂನಿಂದ ಕೊಡಗಿನ ವಿರಾಜಪೇಟೆ ಮೂಲಕ ಹಾಸನಕ್ಕೆ ತೆರಳುತ್ತಿತ್ತು.

ಇಂದು ಮುಂಜಾನೆ 4.30 ಗಂಟೆಯ ಸುಮಾರಿನಲ್ಲಿ ಬಸ್ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಪಕ್ಕದ ಅಡಿಕೆ ತೋಟದ ಕಂದಕಕ್ಕೆ ಉರುಳಿ ಬಿದ್ದಿದೆ. ಪರಿಣಾಮ ಬಸ್ ಚಾಲಕ ಸೇರಿದಂತೆ 40 ಮಂದಿ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ. ದಟ್ಟ ಮಂಜು ಕವಿದಿದ್ದ ಕಾರಣ ಈ ಅವಘಡ ಸಂಭವಿಸಿದೆ ಎಂದು ಹೇಳಲಾಗಿದೆ. ಈ ಘಟನೆ ಕುರಿತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಸ್ ಅನ್ನು ಕ್ರೇನ್ ಮೂಲಕ ಮೇಲೆತ್ತಲಾಯಿತು.

## ಅರುಣ್ ಮಾಚಯ್ಯ ನೇತೃತ್ವದ ರಾಜ್ಯ ಕರಾಟೆ ತಂಡಕ್ಕೆ ಚಿನ್ನದ ಪದಕ

**ಮಲೇಷ್ಯಾದಲ್ಲಿ ನಡೆಯಲಿರುವ ಏಷ್ಯನ್ ಕರಾಟೆ ಚಾಂಪಿಯನ್ ಶಿಪ್‌ಗೆ ಅರ್ಹತೆ**

ಪೊನ್ನಂಪೇಟೆ, ಫೆ.21– ಕರ್ನಾಟಕ ರಾಜ್ಯ ಕರಾಟೆ ಸಂಸ್ಥೆ ಮತ್ತು ದಕ್ಷಿಣ ಭಾರತ ಕರಾಟೆ ಸಂಸ್ಥೆಯ ಅಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಕೊಡಗಿನ ಸಿ.ಎಸ್. ಅರುಣ್ ಮಾಚಯ್ಯ ನೇತೃತ್ವದ ಕರ್ನಾಟಕ ಕರಾಟೆ ತಂಡ ಎರಡು ಚಿನ್ನದ ಪದಕ ಸೇರಿದಂತೆ ಒಟ್ಟು 4 ಪ್ರಶಸ್ತಿಗಳನ್ನು ಪಡೆದು ಸಾಧನೆ ಮಾಡಿದೆ.

ಇದರೊಂದಿಗೆ ಮುಂಬರುವ ಜೂನ್‌ನಲ್ಲಿ ಮಲೇಷ್ಯಾದಲ್ಲಿ ನಡೆಯಲಿರುವ ಏಷ್ಯನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದುಕೊಂಡಿದೆ.

ಇದೇ ಫೆಬ್ರವರಿ 16 ರಿಂದ 19 ರವರೆಗೆ ಡೆಹ್ರಾಡೂನ್‌ನಲ್ಲಿ ನಡೆದ ಕರಾಟೆ ಇಂಡಿಯಾ ಆರ್ಗನೈಸೇಷನ್ ಅಖಿಲ ಭಾರತ ಹಿರಿಯರ ರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್–2023ನಲ್ಲಿ ಅರುಣ್ ಮಾಚಯ್ಯ ನೇತೃತ್ವದಲ್ಲಿ ಒಟ್ಟು 27 ಕರಾಟೆಪಟುಗಳ ಕರ್ನಾಟಕದ ತಂಡ ಪಾಲ್ಗೊಂಡಿತ್ತು. ಈ ಪೈಕಿ 21 ವರ್ಷದೊಳಗಿನ ಕಟ್ಟಾ ವಿಭಾಗದಲ್ಲಿ ಕರ್ನಾಟಕದ ಜಾಗೃತ್ ಗೌಡ, ವಿಘ್ನೇಶ್, ದಿಲೀಪ್ ಮತ್ತು ಅತೀಶ್ ಅವರನ್ನೊಳಗೊಂಡ ತಂಡ ಇದೇ ಮೊದಲ ಬಾರಿಗೆ ಚಿನ್ನದ ಪದಕ ಗೆಲ್ಲುವ ಮೂಲಕ ಚಾಂಪಿಯನ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಅಲ್ಲದೇ ಕರ್ನಾಟಕ ತಂಡದ ಹೆಸರಾಂತ ಕರಾಟೆ ಪಟು




ಜಾಗೃತ್ ಗೌಡ ವೈಯಕ್ತಿಕ ವಿಭಾಗದಲ್ಲೂ ಚಿನ್ನದ ಪದಕ ಪಡೆದು ದಾಖಲೆ ನಿರ್ಮಿಸಿದ್ದಾರೆ.

ರಾಜ್ಯ ತಂಡದ ಜಿ. ಶಶಾಂಕ್, ಕುಮಿಟಿ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಹಾಗೂ ಚೈತ್ರ ಶ್ರೀ ಅವರು ಕಟ್ಟಾ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದಾರೆ. ಎಸ್.ಡಿ. ಪ್ರಸಾದ್ ಪ್ರಧಾನ ತರಬೇತುಗಾರರಾಗಿ, ವಿದ್ಯಾಸಾಗರ್ ಮತ್ತು ಆನಂದ್ ಗೌಡರ್ ಅವರು ಈ ರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ರಾಜ್ಯ ತಂಡದ ತರಬೇತುದಾರರಾಗಿ ಕಾರ್ಯನಿರ್ವಹಿಸಿದ್ದರು. ಕಾಮನ್ ವೆಲ್ತ್ ಕರಾಟೆ ಫೆಡರೇಷನ್‌ನ ಉಪಾಧ್ಯಕ್ಷರು ಮತ್ತು ವಿಶ್ವ ಕರಾಟೆ ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯರಾದ ಭರತ್ ಶರ್ಮಾ ಮತ್ತು ಕರಾಟೆ ಇಂಡಿಯಾ ಆರ್ಗನೈಸೇಷನ್ ಕಾರ್ಯದರ್ಶಿಗಳಾದ ಸಂಜೀವ್ ಕುಮಾರ್ ಜಂಗ್ರ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು.

ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಕಾರ್ಯದರ್ಶಿ ಬಾರ್ಗವ ರೆಡ್ಡಿ ರಾಜ್ಯ ತಂಡದ ಕರಾಟೆಪಟುಗಳ ಉಸ್ತುವಾರಿಯನ್ನು ವಹಿಸಿಗೊಂಡಿದ್ದರು. ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಸಂಸ್ಥೆಯ ಕೊಡಗಿನ ಸೋಮಣ್ಣ ಸೇರಿದಂತೆ ಕೆ.ಪಿ. ಜೋಸ್ ಶಿವದಾಸ್, ಶಂಕರ್, ಭಾರತಿ, ಜಾನ್ಸನ್, ಕಾರ್ತಿಕ್, ಭರತ್, ಅಭಿಷೇಕ್ ಮತ್ತು ಅಭಿಲಾಶ್ ಈ ರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದರು.

ರಾಜ್ಯ ತಂಡದ ಸಾಧನೆ ಕುರಿತು ಮಾಧ್ಯಮಗಳೊಂದಿಗೆ ಸಂತಸ ಹಂಚಿಕೊಂಡಿರುವ ಅರುಣ್ ಮಾಚಯ್ಯ, ಕರ್ನಾಟಕ ಕರಾಟೆ ತಂಡ ಇಂದು ದೇಶದಲ್ಲಿ ಬಲಿಷ್ಠ ತಂಡವಾಗಿ ಹೊರಹೊಮ್ಮಿದೆ. ಏಷ್ಯನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲು ರಾಜ್ಯ ತಂಡಗಳು ಅರ್ಹತೆ ಪಡೆದುಕೊಳ್ಳುವುದು ಸಾಮಾನ್ಯ ಸಂಗತಿಯಲ್ಲ. ಕರ್ನಾಟಕ ಕರಾಟೆ ತಂಡದ ಎಲ್ಲ ಸಾಧನೆಗಳು ಮುಂಬರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಚಾಂಪಿಯನ್ ಶಿಪ್‌ಗಳಲ್ಲಿ ಪಾಲ್ಗೊಂಡು ಪ್ರಶಸ್ತಿ ಪಡೆದುಕೊಳ್ಳಲು ದಿಕ್ಸೂಚಿಯಾಗಲಿದೆ. ಮುಂದೆ ಕರ್ನಾಟಕ ತಂಡ ಮತ್ತಷ್ಟು ಬಲಿಷ್ಠಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ

**● ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ● ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದ ಜನ ಬೇಸತ್ತಿದ್ದಾರೆ ● ಹನೂರಲ್ಲಿ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಸಮಾವೇಶ**




> ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದರೆ 200 ಯೂನಿಟ್ ಉಚಿತ ವಿದ್ಯುತ್, ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್. ಉಚಿತ 10 ಕೆ.ಜಿ. ಪಡಿತರ ಮತ್ತು ಪ್ರತಿ ಕುಟುಂಬದ ಮುಖ್ಯಸ್ಥ ಮಹಿಳೆಯ ಖಾತೆಗೆ ತಿಂಗಳಿಗೆ 2000 ರೂ. ನೀಡಲಾಗುವುದು.
>
> **–ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಹನೂರು, ಫೆ.21– ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮತ್ತು ಜನವಿರೋಧಿ ನೀತಿಯಿಂದ ಬೇಸತ್ತಿರುವ ಕರ್ನಾಟಕದ ಜನತೆ ಮುಂದಿನ ಬಾರಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ಖಚಿತ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಆರ್‌ಎಸ್ ದೊಡ್ಡಿಯಲ್ಲಿ ಕಾಂಗ್ರೆಸ್ ಪಕ್ಷವು ಹಮ್ಮಿಕೊಂಡಿದ್ದ ಹನೂರು ವಿಧಾನಸಭಾ ಕ್ಷೇತ್ರದ ಪ್ರಜಾಧ್ವನಿಯಾತ್ರೆ ಸಮಾವೇಶದಲ್ಲಿ ಅವರು ಮಾತನಾಡಿದರು. ಭ್ರಷ್ಟ ಬಿಜೆಪಿ ಸರ್ಕಾರದ ಜನವಿರೋಧಿ ಕಾರ್ಯಕ್ರಮಗಳು ಮತ್ತು ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ರಾಜ್ಯದ ಜನತೆ ತತ್ತರಿಸಿ ಹೋಗಿದ್ದಾರೆ. ಬಿಜೆಪಿ ಸರ್ಕಾರದ ಪಾಪದ ಪುರಾಣವನ್ನು ಜನರ ಮುಂದೆ ಪ್ರದರ್ಶಿಸಿ, ಜನರ ದುಃಖ, ಕಷ್ಟ, ಸಮಸ್ಯೆ ಗಳನ್ನು ಆಲಿಸುವ ಮೂಲಕ ಪರಿಹಾರ ಕಂಡುಕೊಳ್ಳುವ ಸಲುವಾಗಿ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆಯನ್ನು ಕೈಗೊಂಡಿದೆ.

ಬಿಜೆಪಿ ಸರ್ಕಾರದಲ್ಲಿ ಈಶ್ವರಪ್ಪ ರಾಜೀ ನಾಮೆ ನೀಡಿದ್ದು, ಗುತ್ತಿಗೆದಾರರ ರಾಜ್ಯಾ ಧ್ಯಕ್ಷ ಕೆಂಪಣ್ಣ ದಯಾಮರಣ ಕೇಳಿದ್ದು, ರಾಜ್ಯದ್ಯಂತ ಗುತ್ತಿಗೆದಾರರು ಸಿಡಿದೇಳಿದ್ದಕ್ಕೆ 40% ಸರ್ಕಾರ ಕಾರಣ. ದೇಶದ ಇತಿಹಾಸವನ್ನು ಒಮ್ಮೆ ನೋಡಿದಾಗ ಬಡವರ ಶೋಷಿತರ ಹಿಂದುಳಿದ ವರ್ಗಗಳ ಪರವಾದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿರುವುದು ಕಾಂಗ್ರೆಸ್ ಸರ್ಕಾರ ಎಂಬುದನ್ನು ನಾವೆಲ್ಲರೂ ಮರೆಯಬಾರದು.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 7500 ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ, 151 ವಿವಿಧ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ. 108 ಕೋಟಿ ವೆಚ್ಚದಲ್ಲಿ ಉತ್ತಮ ರಸ್ತೆ ನಿರ್ಮಾಣ ಜೊತೆಗೆ ಪ್ರತಿ ಹಳ್ಳಿಗೆ ಕುಡಿ ಯುವ ನೀರಿನ ವ್ಯವಸ್ಥೆ ಸಿ.ಸಿ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಮಾಡಲಾಗಿದೆ ಇದು ಕಾಂಗ್ರೆಸ್ ಸರ್ಕಾರದ ಕೊಡುಗೆಯಾಗಿದೆ.

ಇದೇ ಚಾಮರಾಜನಗರದಲ್ಲಿ ಕೋವಿಡ್ ಸೋಂಕಿತರು ಆಕ್ಸಿಜನ್ ಇಲ್ಲದೆ 26 ಜನರು ಅಮೃತ ಪಟ್ಟ ಸಂದರ್ಭದಲ್ಲಿ ಬಿಜೆಪಿ ಆಡಳಿತ ಸರ್ಕಾರದ ಯಾವೊಬ್ಬ ಸಚಿವರೂ ಸಹ ಮೃತ ಕುಟುಂಬಗಳಿಗೆ ಸಾಂತ್ವನ ಹೇಳಲು ಮುಂದಾಗಲಿಲ್ಲ. ಕಾಂಗ್ರೆಸ್ ಮುಖಂಡರು ಭೇಟಿ ನೀಡಿ ಮೃತ ಕುಟುಂಬಗಳಿಗೆ ಸಾಂತ್ವನ ಹೇಳುವ ಜೊತೆಗೆ ತಲಾ ಒಂದು ಲಕ್ಷ ಪರಿ ಹಾರ ನೀಡಿರುವುದು ನಿಮ್ಮೆಲ್ಲರ ಕಣ್ಮುಂದೆ ಇದೆ.

ಸಮಾಜದ ಒಗ್ಗಟ್ಟನ್ನು ಬಯಸುವ ಕಾಂಗ್ರೆಸ್ ಪಕ್ಷವು ಜನರ ಸಂಬಂಧಗಳನ್ನು ದೆಸೆಯುವ ಪಕ್ಷವಾಗಿದೆ. ಆದರೆ ಬಿಜೆಪಿ ಧರ್ಮದ ಹೆಸರಿನಲ್ಲಿ ಜನರನ್ನು ಸಂಬಂಧವನ್ನು ಕತ್ತರಿಸುವ ಪ್ರಯತ್ನವನ್ನು ಮಾಡುತ್ತಿದೆ. ಆದ್ದರಿಂದ ನಾಡಿನ ಜನತೆ ಬಿಜೆಪಿ ಪಕ್ಷವನ್ನು ದೂರ ಇಡುವ ಮನಸ್ಸು ಮಾಡಿದ್ದಾರೆ.

ಕರ್ನಾಟಕ ರಾಜ್ಯಕ್ಕೆ ಉತ್ತಮ ಆಡಳಿತ ನೀಡಿದಂತಹ ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯರವರನ್ನು ಕೊಲೆ ಮಾಡಬೇಕು ಎಂದು ಹೇಳಿಕೆ ನೀಡಿರುವ ಬಿಜೆಪಿ ಸರ್ಕಾರದ ಸಚಿವರ ವಿರುದ್ಧ ಪ್ರತಿಭಟನೆಗಳು ನಡೆಯು ತ್ತಿದ್ದರೂ ಸಹ ಪೊಲೀಸ್ ಇಲಾಖೆ ಈವರೆಗೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲದಿರುವುದು ಖಂಡನೀಯ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಈ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮುಖಂಡರಿಗೆ ತಕ್ಕ ಪಾಠ ಕಲಿಸುವುದಾಗಿ ವಾಗ್ದಾನ ಮಾಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಸ್ಥಳೀಯ ಶಾಸಕ ಆರ್.ನರೇಂದ್ರ ಬಿಜೆಪಿ ದುರಾಡಳಿತವನ್ನು ಜನರಿಗೆ ತಿಳಿಸುವ ಉದ್ದೇಶವೇ ಪ್ರಜಾಧ್ವನಿಯಾತ್ರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹನೂರು ಕ್ಷೇತ್ರದ ಅಭಿವೃದ್ಧಿಗೆ ನೀಡಿದ ಅನುದಾನದ ಕೊಡುಗೆ ಶೂನ್ಯವಾಗಿದೆ. ಸನ್ಮಾನ್ಯ ಸಿದ್ದರಾಮಯ್ಯರವರ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ನಮ್ಮ ಕ್ಷೇತ್ರಕ್ಕೆ 132 ಕೋಟಿ ರೂ ವೆಚ್ಚದಲ್ಲಿ ಜಲಾಶಯ ಗಳಿಗೆ ನೀರು ತುಂಬಿಸುವ ಯೋಜನೆ ಅನುಷ್ಠಾನವಾಗಿದೆ. ಇದರಿಂದ ಹದಿನೈದು ಸಾವಿರ ಎಕರೆ ಭೂಮಿಗೆ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. 108 ಕೋಟಿ ರೂ ವೆಚ್ಚದಲ್ಲಿ ರಸ್ತೆ ನಿರ್ಮಾಣ, ಹನೂರು ತಾಲೂಕು ಘೋಷಣೆ ಎಲ್ಲವೂ ಸಹ ಕಾಂಗ್ರೆಸ್ ಸರ್ಕಾರದ ಕೊಡುಗೆಯಾಗಿದೆ. ನಾವು ಅಧಿಕಾರಕ್ಕಾಗಿ ಎಂದೂ ಆಸೆ ಪಡುವವ ರಲ್ಲ ಬದಲಾಗಿ ಜನರ ಸೇವೆ ಮಾಡಲು ಬಂದಿದ್ದೇವೆ ಹನೂರಿನ ಜನತೆ ನಮ್ಮ ಕುಟುಂಬಸ್ಥರ ಬೆಂಬಲವಾಗಿ ನಿಂತು ಒಂಬತ್ತು ಬಾರಿ ನಮ್ಮನ್ನು ಆಯ್ಕೆ ಮಾಡಿದ್ದೀರಿ ಅದಕ್ಕಾಗಿ ಹನೂರು ಕ್ಷೇತ್ರದ ಜನತೆಗೆ ನಾವು ಸದಾ ಋಣಿಯಾಗಿರುತ್ತೇವೆ.

ಹನೂರು ಕ್ಷೇತ್ರದ ಜನತೆ ಸ್ವಾಭಿಮಾನಿ ಗಳು. ಇತ್ತೀಚೆಗೆ ಬೆಂಗಳೂರಿನ ಕೆಲವು ಉದ್ಯಮಿಗಳು ಬಂದು ಹನೂರು ಜನತೆಯ ಸ್ವಾಭಿಮಾನದ ಬದುಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಜನತೆ ಇವರ ಆಮಿಷಗಳಿಗೆ ಎಂದೂ ಸೋಲಬೇಡಿ. ಕಾಂಗ್ರೆಸ್ ಪಕ್ಷ ನಿಮಗೆ ಸದಾ ಬೆಂಬಲವಾಗಿ ನಿಂತಿರುತ್ತದೆ ಪಕ್ಷವನ್ನು ಬೆಂಬಲಿಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸತ್ ಸಂಸದ ಧ್ರುವನಾರಾಯಣ, ಬಿ.ವಿ. ಶ್ರೀನಿವಾಸ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಚಾಮ ರಾಜನಗರ ಶಾಸಕ ಪುಟ್ಟರಂಗಶೆಟ್ಟಿ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಕೇರಳ ರಾಜ್ಯದ ಕಾಂಗ್ರೆಸ್ ಶಾಸಕ ಅನಿಲ್‌ಕುಮಾರ್, ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಬಾಲರಾಜು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುಸೇನ್. ಚಲನಚಿತ್ರ ನಟ ನಿರ್ದೇಶಕ ಸಾಧುಕೋಕಿಲ ಇನ್ನಿತರೆ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಮತ್ತು ಸಾರ್ವಜನಿಕರು ಹಾಜರಿದ್ದರು.

## ಮಹೇಶ್ ಆನೆ ಕಾಡಿಗೆ ಕಳುಹಿಸಿ ಈಗ ಕಮಲ ಹಿಡಿದಿದ್ದಾರೆ

**▸ ತಿಪ್ಪರಲಾಗ ಹಾಕಿದರೂ ಮತ್ತೆ ಗೆಲ್ಲಲಾಗಲ್ಲ: ಡಿಕೆಶಿ**
**▸ ಕೊಳ್ಳೇಗಾಲದಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶ**



ಕೊಳ್ಳೇಗಾಲ, ಫೆ.21–ಶಾಸಕ ಎನ್. ಮಹೇಶ್ ಹಾಗೂ ನಾನು ಸ್ನೇಹಿತರು. ಅವರು ಸಚಿವರಾಗಿ ಅಂತಹ ಹೇಳಿಕೊಳ್ಳುವಂತಹ ಅಭಿವೃದ್ಧಿ ಮಾಡಲಿಲ್ಲ. ತಮ್ಮ ಹೋರಾಟ, ಬದುಕಿದ ರೀತಿ, ವಿದ್ಯಾಭ್ಯಾಸ, ಸಂಘಟನೆ ಎಲ್ಲಾ ಮರೆತು, ಗೆಲ್ಲಿಸಿದ ಆನೆಯನ್ನೆ ಕಾಡಿಗೆ ಕಳುಹಿಸಿದರು. ಈಗ ಸ್ವಾರ್ಥಕ್ಕಾಗಿ ಸಂವಿಧಾನ ಬದಲಿಸುತ್ತೇವೆ ಎನ್ನುವವರ ಜೊತೆಗೂಡಿ ಕಮಲ ಹಿಡಿದಿದ್ದಾರೆ. ಆದರೆ ಎಷ್ಟೆ ತಿಪ್ಪರಲಾಗ ಹಾಕಿದರೂ ಕೊಳ್ಳೇಗಾಲ ಕ್ಷೇತ್ರದಲ್ಲಿ ಮತ್ತೊಮ್ಮೆ ಗೆಲ್ಲಲಾಗಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭವಿಷ್ಯ ನುಡಿದಿದ್ದಾರೆ.

ಅವರು ಪ್ರಜಾಧ್ವನಿಯಾತ್ರೆಗೆ ಚಾಲನೆ ನೀಡಿ ಮಾತನಾಡಿ, ಶಾಸಕ ಮಹೇಶ್ ಅವರಿಗೂ ನನಗೂ ಸ್ನೇಹವಿದೆ. ಜೊತೆಗೆ ಮಂತ್ರಿಯಾಗಿದ್ದವರು, ದೊಡ್ಡ ಖಾತೆ ಹೊಂದಿದ್ದರು. ಅದನ್ನು ಉಳಿಸಿಕೊಳ್ಳಲಾಗಲಿಲ್ಲ ರಾಜೀನಾಮೆ ಅನಿವಾರ್ಯತೆ ಬಂತು. ಬಿಜೆಪಿಗೆ ಬೆಂಬಲ ಕೊಟ್ಟರೂ ಅವರನ್ನು ಮಂತ್ರಿ ಮಾಡಲಿಲ್ಲ. ಇವರು ಜನಸೇವೆ ಮಾಡಲಿಲ್ಲ. ಸಂವಿಧಾನ ಬದಲಿಸುತ್ತೇವೆ ಎನ್ನುವ ಬಿಜೆಪಿ ಜೊತೆ ಸೇರಿ, ಈಗ ಮುಖ್ಯಮಂತ್ರಿ ಬೊಮ್ಮಾಯಿ ಜೊತೆಗಿದ್ದಾರೆ. ಪಾಪ, ಮಾಜಿ ಶಾಸಕ ನಂಜುಂಡಸ್ವಾಮಿ ಅವರು ಈಗ ಮತ್ತೆ ಕೈ ಹಿಡಿಯುವ ಕುರಿತು ಮಾತನಾಡಿದ್ದಾರೆ.

ನಾನು, ಮಾಜಿ ಶಾಸಕ ನಂಜುಂಡಸ್ವಾಮಿ, ಎಸ್.ಬಾಲರಾಜು, ಕೃಷ್ಣಮೂರ್ತಿ, ಜಯಣ್ಣ ಅವರು ಶಾಸಕರಾಗಿದ್ದಾಗಲೂ ವಿಧಾನ ಸೌಧದಲ್ಲಿದ್ದೆ. ಜಿ.ಎನ್.ನಂಜುಂಡಸ್ವಾಮಿ ಅವರನ್ನು ನಾನು ಶಾಸಕನಾಗಿದ್ದ ವೇಳೆ ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿ. ಧರ್ಮಸಿಂಗ್ ಕರೆದು ಪರಿಚಯ ಮಾಡಿಸಿದ್ದರು. ಅವರು, ಕಾಂಗ್ರೆಸ್ ಟಿಕೆಟ್ ಪಡೆದು ಶಾಸಕರಾಗಿದ್ದರು. ಆದರೆ, ನಂತರ ಧ್ರುವನಾರಾಯಣ್ ವಿರುದ್ಧ ಕಿಡಿಕಾರಿ, ಪಕ್ಷ ಬಿಟ್ಟರು. ಅದೇನಾಯಿತೋ ಏನೋ, ಈಗ ಕಾಂಗ್ರೆಸ್ಸಿಗನಾಗಲು ಖರ್ಗೆ ಸಾಹೇಬರ ಬಳಿ ಪ್ರಸ್ತಾಪಿಸಿದ್ದಾರೆ. ಈ ಕುರಿತು ಧ್ರುವನಾರಾಯಣ್ ನನಗೆ ತಿಳಿಸಿದ್ದಾರೆ ಎಂದರು. ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊಲದಲ್ಲಿದ್ದರೆ ಚಂದ, ದಾನ, ಧರ್ಮ ಮಾಡುವವರ ಕೈ ಅಧಿಕಾರದಲ್ಲಿದ್ದರೆ ಮಾತ್ರ ಅಂದ. ಹಾಗಾಗಿ ಕಾರ್ಯಕರ್ತರೆಲ್ಲರೂ ಕೈಗೆ ಶಕ್ತಿ ನೀಡಿ, ನಿಮ್ಮ ಧ್ವನಿಯಾಗಿ ಸೇವೆ ಮಾಡುತ್ತಾ ಸದಾ ನಿಮ್ಮ ಜೊತೆಗಿರುವೆ. ಕೈ ಪಾರ್ಟಿಗೆ ಜಾತಿ, ಧರ್ಮಗಳಿಲ್ಲ ಎಂದರು.

**ನಾನು ಎಆರ್‌ಕೆ ಬಹಳ ಆತ್ಮೀಯರು:** ನಾನು, ಮಾಜಿ ಶಾಸಕ ಕೃಷ್ಣಮೂರ್ತಿ ಆತ್ಮೀಯರು. ಈ ಹಿಂದೆ ಹಲವು ಬಾರಿ ಗಾಳ ಹಾಕಿ ಪಕ್ಷಕ್ಕೆ ಎಳೆದರೂ ಬರಲಿಲ್ಲ. ಒಂದೇ ಒಂದು ಮತದಿಂದ ಸೋತರು. ಗೆದ್ದವನು ಸೋತ, ಸೋತವನು ಸತ್ತ ಎಂಬಂತಾಗಿ ಬಿಟ್ಟಿತು ಎಂದರು. ಕೊಳ್ಳೇಗಾಲದಲ್ಲಿ ಟಿಕೆಟ್ ಆಕಾಂಕ್ಷಿಗಳಾಗಿರುವ 3 ಮಂದಿಯೂ ಮಹಾನ್ ಕಲಾವಿದರು. ಇವರಲ್ಲಿ ಒಬ್ಬರಿಗೆ ಟಿಕೆಟ್ ಕೊಡಿಸುವ ದೊಡ್ಡ ಜವಾಬ್ದಾರಿ ಸಿದ್ದರಾಮಯ್ಯ, ಧ್ರುವನಾರಾಯಣ್ ಮತ್ತು ನನ್ನ ಮೇಲಿದೆ ಎಂದರು. ಮೂರು ಮಂದಿ ಪೈಕಿ ಯಾರಿಗೆ ಟಿಕೆಟ್ ನೀಡಿದರೂ ಕೆಲಸ ಮಾಡಿ, ಆದರೆ ಕಾಲೆಳೆಯದಿರಿ ಎಂದು ಕಿವಿಮಾತು ಹೇಳಿದರು.

ಧ್ರುವನಾರಾಯಣ್, ಶ್ರೀನಿವಾಸ್, ನಳಪಾಡ್, ಶಾಸಕ ನರೇಂದ್ರ, ಪುಟ್ಟರಂಗಶೆಟ್ಟಿ, ಎಸ್. ಜಯಣ್ಣ, ಎಸ್.ಬಾಲರಾಜು, ಎ.ಆರ್.ಕೃಷ್ಣಮೂರ್ತಿ, ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಮರಿಸ್ವಾಮಿ, ಸಂಗೀತ ನಿರ್ದೇಶಕ ಸಾಧುಕೋಕಿಲ, ಬ್ಲಾಕ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ರವಿ, ನಗರಸಭೆ ಅಧ್ಯಕ್ಷ ರೇಖಾ ರಮೇಶ್ ಇನ್ನಿತರರು ಇದ್ದರು.

### ಹೆಸರೇಳದಿದ್ದರೂ ಸಿದ್ದರಾಮಯ್ಯರಿಗೂ ಮೊಳಗಿದ ಜೈಕಾರ

ಕೊಳ್ಳೇಗಾಲದಲ್ಲಿ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಕೈ ಕಾರ್ಯಕರ್ತರು ಸಿದ್ದರಾಮಯ್ಯ ಅವರ ಗೈರು ಹಾಜರಿಯಲ್ಲಿ ಅವರಿಗೆ ಜೈಕಾರ ಕೂಗುವ ಮೂಲಕ ಗಮನ ಸೆಳೆದಿದ್ದಾರೆ. ಪ್ರಾರಂಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾರ್ಯಕರ್ತರಿಂದ ಬೋಲೊ ಭಾರತ್ ಮಾತಾಕಿ ಕಾಂಗ್ರೆಸ್ ಪಾರ್ಟಿಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಹೆಸರೇಳಿ ಜೈಕಾರ ಕೂಗಿಸಿದರು. ಆದರೆ ಸಿದ್ದರಾಮಯ್ಯ ಹೆಸರೇಳಲಿಲ್ಲ, ಕೊನೆಗೆ ಕಾಂಗ್ರೆಸ್ ಕಾರ್ಯಕರ್ತರೇ ಸಿದ್ದರಾಮಯ್ಯ ಹೆಸರೇಳಿ ಜೈಕಾರ ಮೊಳಗಿಸಿದರು.

## ಸ್ಪೀಕರ್ ಕಾಗೇರಿ ವರ್ತನೆಗೆ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಆಕ್ರೋಶ

ಚಾಮರಾಜನಗರ, ಫೆ.21– ಬಾಲ್ಕಿ ವಿಧಾನ ಸಭಾ ಕ್ಷೇತ್ರದ ಶಾಸಕರು, ಮಾಜಿ ಸಚಿವ ಈಶ್ವರ ಬಿ.ಖಂಡ್ರೆಯವರ ವಿಚಾರದಲ್ಲಿ ಉದ್ಧಟತನದಿಂದ ವರ್ತಿಸಿರುವ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸಭಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯಗೇಟ್ ಮುಂಭಾಗದಿಂದ ಮಹಾಸಭಾದ ಜಿಲ್ಲಾ ನಿರ್ದೇಶಕ ಕಂಠಿ ಬಸವರಾಜು ನೇತೃತ್ವದಲ್ಲಿ ಸಮಾವೇಶಗೊಂಡು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಕಾಲ ಪ್ರತಿಭಟನೆ ನಡೆಸಿ, ಸ್ಪೀಕರ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಾನಿಕ ಶಿರಸ್ತೇದಾರರಾದ ಧನುಷ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಹಾಸಭಾದ ಜಿಲ್ಲಾ ನಿರ್ದೇಶಕ ಕಂಠಿ ಬಸವರಾಜು ಮಾತನಾಡಿ, ಕಾಗೇರಿ ಅವರು ಸಭಾಧ್ಯಕ್ಷ ಸ್ಥಾನಕ್ಕೆ ತಕ್ಕಂತೆ ನಡೆದುಗೊಂಡಿಲ್ಲ. ಯಾವುದೋ ದುರುದ್ದೇಶವನ್ನಿಟ್ಟುಕೊಂಡು ಸಭಾಧ್ಯಕ್ಷರು ವರ್ತಿಸಿರುವುದನ್ನು ಯಾರೂ ಸಹಿಸಿಕೊಳ್ಳಲು ಸಾಧ್ಯವಿಲ್ಲ. ವಿಧಾನ ಸಭಾ ಚುನಾವಣೆ ಹತ್ತಿರ ಇರುವ ಈ ಸಂದರ್ಭದಲ್ಲಿ ಈ ರೀತಿ ಒಬ್ಬ ಜನನಾಯಕರಿಗೆ ಅವಮಾನ ಮಾಡಿರುವುದನ್ನು ಪ್ರಜ್ಞಾವಂತ ಸಮಾಜವು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಒಂದು ಪಕ್ಷದ ವಕ್ತಾರರಂತೆ ವರ್ತಿಸಿರುವುದು ಅಕ್ಷಮ್ಯ. ಸಭಾಧ್ಯಕ್ಷ ಸ್ಥಾನದ ಘನತೆ ಗೌರವಗಳಿಗೆ ಧಕ್ಕೆ ತಂದಿರುವ ವಿಶ್ವೇಶ್ವರ ಹೆಗಡೆ ಕಾಗೇರಿಯವರು ತಕ್ಷಣವೇ ಸಭಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.



ಸದನದಲ್ಲಿ ಈಶ್ವರ ಖಂಡ್ರೆ ವಿರುದ್ಧ ಲಘುವಾಗಿ ಮಾತನಾಡಿರುವ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಕೂಡಲೇ ರಾಜ್ಯದ ಜನತೆಯಲ್ಲಿ ಕ್ಷಮೆಯಾಚಿಸಬೇಕು. ಇಂತಹ ಘಟನೆಗಳು ಮರುಕಳಿಸಬಾರದು ಎಂದು ಎಚ್ಚರಿಸಿದ್ದಾರೆ. ಪ್ರತಿಭಟನೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ನಟೇಶ್, ಪ್ರಧಾನ ಕಾರ್ಯದರ್ಶಿ ಶ್ರೀಕಂಠಸ್ವಾಮಿ, ಕಾರ್ಯದರ್ಶಿ ಗುರುಸ್ವಾಮಿ, ಯುವ ಘಟಕ ಗಿರೀಶ್, ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ಹಿರೇಬೇಗೂರು ಗುರುಸ್ವಾಮಿ, ಹರವೆ ಮಂಜು, ರೇಣುಕಪ್ಪ, ಬಂಡಳ್ಳಿ ಶಿವಕುಮಾರ್, ಅಧ್ಯಕ್ಷ ಮುಖಂಡರಾದ ಬಿ.ಕೆ.ರವಿಕುಮಾರ್, ಡಿ.ಪಿ.ಪ್ರಕಾಶ್, ಕಾವುದವಾಡಿಗುರು, ದೊಡ್ಡರಾಯಪೇಟೆ ಗಿರೀಶ್, ಡಾ.ಪರಮೇಶ್ವರಪ್ಪ, ಗಣೇಶ್, ಮಹದೇವಪ್ಪ, ಮುಕ್ಕಡಹಳ್ಳಿ ಮಂಜು, ಹರವೆ ಮಂಜು, ಅರಕಲವಾಡಿ ಗುರುಸ್ವಾಮಿ, ರವಿ, ಪ್ರಕಾಶ್, ಉದಯ ಕುಮಾರ್, ಚನ್ನ, ಮಹೇಶ್, ಮಂಜುನಾಥ್, ಮಧು, ಸಂತೋಷ್, ಮುತ್ತಿಗೆಮೂರ್ತಿ, ಸಿದ್ದರಾಜು, ಸ್ವಾಮಿ ಇತರರು ಭಾಗವಹಿಸಿದ್ದರು.

## ಫೆ.25, ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಫೆ.21– ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಫೆಬ್ರವರಿ 25ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ಗುಂಡ್ಲುಪೇಟೆ ತಾಲೂಕು ಕೊಡಗಾಪುರಕ್ಕೆ ಆಗಮಿಸಿ ಶ್ರೀ ಕಾಡ ಬಸವೇಶ್ವರ ದೇವಸ್ಥಾನದ ಪ್ರವೇಶದ್ವಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12ಕ್ಕೆ ಗುಂಡ್ಲುಪೇಟೆಗೆ ಆಗಮಿಸಿ ವಸತಿ ಇಲಾಖೆಯ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಗುಂಡ್ಲುಪೇಟೆ ಪುರಸಭೆಯಿಂದ ಆಯೋಜಿಸಲಾಗಿರುವ ಫಲಾನುಭವಿಗಳಿಗೆ ನಿವೇಶನಗಳ ಹಕ್ಕು ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

# ಶಾಸಕ ರಾಮದಾಸ್ ನೇತೃತ್ವದಲ್ಲಿ ಉದ್ಯೋಗ ಮೇಳ

## 2505 ಮಂದಿಗೆ ಸ್ಥಳದಲ್ಲೇ ನೇಮಕಾತಿ ಆದೇಶ ಪತ್ರ ವಿತರಣೆ 900 ಮಂದಿ ಕೌಶಲ್ಯ ತರಬೇತಿ

ಮೈಸೂರು,ಫೆ.21(ಎಂಟಿವೈ)– ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಆಯೋಜಿಸಿದ್ದ ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಮೇಳದಲ್ಲಿ ಪಾಲ್ಗೊಂಡಿದ್ದ 8729 ಮಂದಿಯಲ್ಲಿ 2505 ಮಂದಿಗೆ ಸ್ಥಳದಲ್ಲೇ ಉದ್ಯೋಗ ಆದೇಶ ಪತ್ರ ನೀಡಿದರೆ, 900 ಮಂದಿ ಕೌಶಲ್ಯ ತರಬೇತಿಗೆ ಆಯ್ಕೆಯಾದರು.



ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಕಾರ್ಮಿಕ ಇಲಾಖೆಯ ಸಂಯುಕ್ತಾಶ್ರಯದಲ್ಲಿ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಆಯೋಜಿಸಿದ್ದ ಉದ್ಯೋಗ, ಕೌಶಲ್ಯ ತರಬೇತಿ, ಉದ್ಯೋಗ ಮಾಹಿತಿ ಹಾಗೂ ನೇಮಕಾತಿ ಮೇಳವನ್ನು ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಿದರು. ಬಳಿಕ ಸಂದರ್ಶನಕ್ಕಾಗಿ ಆಗಮಿಸಿದ್ದ ಉದ್ಯೋಗಾಕಾಂಕ್ಷಿಗಳೊಂದಿಗೆ ಸಮಾಲೋಚಿಸಿ, ವಿವಿಧ ಕಂಪನಿಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ನಿರುದ್ಯೋಗಿಗಳಿಗೆ ಪೂರಕವಾದ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

**108 ಮಳಿಗೆ:** ಉದ್ಯೋಗ ಮೇಳಕ್ಕಾಗಿ ಮೈಸೂರಿನ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಆಗಮಿಸಿದ್ದರು. ಮೈಸೂರು, ಬೆಂಗಳೂರು, ಹೈದರಾಬಾದ್ ಸೇರಿದಂತೆ ವಿವಿಧೆಡೆಯಿಂದ 150ಕ್ಕೂ ಕಂಪನಿಗಳು ಈ ಮೇಳದಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಅದಕ್ಕಾಗಿ ವಸ್ತು ಪ್ರದರ್ಶನದ ಆವರಣದಲ್ಲಿ 150 ಕೌಂಟರ್ ತೆರೆಯಲಾಗಿತ್ತು. ಆದರೆ, ಮೇಳದಲ್ಲಿ 108 ಸಂಸ್ಥೆಗಳ ಪ್ರತಿನಿಧಿಗಳು ಮಾತ್ರ ಆಗಮಿಸಿ, ನಿಗಧಿತ ಕೌಂಟರ್‌ನಲ್ಲಿ ಉದ್ಯೋಗಾಕಾಂಕ್ಷಿಗಳ ಸಂದರ್ಶನ ನಡೆಸಿದರು.

**ಕೌಶಲ್ಯಾಭಿವೃದ್ಧಿಗಾಗಿ ನೋಂದಣಿ:** ಉದ್ಯೋಗ ಮೇಳಕ್ಕಾಗಿ ಆಗಮಿಸಿದ್ದವರು ಕಡ್ಡಾಯವಾಗಿ ಹೆಸರು ನೋಂದಾಯಿಸಿಕೊಳ್ಳಲು ಸೂಚನೆ ನೀಡಲಾಗಿತ್ತು. ಇದಕ್ಕಾಗಿ 30ಕ್ಕೂ ಹೆಚ್ಚು ಟೇಬಲ್‌ಗಳಲ್ಲಿ ಹೆಸರು ನೋಂದಾಯಿಸಲು ಸ್ವಯಂಸೇವಕರನ್ನು ನಿಯೋಜಿಸಲಾಗಿತ್ತು. ಮೇಳಕ್ಕಾಗಿ ಬಂದ ಉದ್ಯೋಗಾಕಾಂಕ್ಷಿಗಳ ವಿದ್ಯಾರ್ಹತೆ ಸೇರಿದಂತೆ ಬಯಸುವ ಉದ್ಯೋಗದ ವಿವರಗಳನ್ನು ದಾಖಲೀಕರಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರದ ಸಹಕಾರದಿಂದ ನಡೆಯುವ ಉದ್ಯೋಗ ಮೇಳದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಮನ್ನಣೆ ನೀಡಲು ಉದ್ದೇಶಿಸಲಾಗಿದೆ.

**ಮೇಳಕ್ಕೆ ಉತ್ತಮ ಪ್ರತಿಕ್ರಿಯೆ:** ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ನಡೆದ ಉದ್ಯೋಗ ಮೇಳದಲ್ಲಿ 5478 ಪುರುಷರು, 3251 ಮಹಿಳೆಯರು ಸೇರಿದಂತೆ 8729 ಮಂದಿ ಮೇಳದಲ್ಲಿ ಹಾಜರಾಗಿದ್ದಾರೆ. ಅವರಲ್ಲಿ 1867 ಪುರುಷರು, 628 ಮಹಿಳೆಯರು ಒಳಗೊಂಡಂತೆ 2505 ಮಂದಿಗೆ ವಿವಿಧ ಕಂಪನಿಗಳಲ್ಲಿ ಉದ್ಯೋಗ ಲಭಿಸಿದೆ. ಅಲ್ಲದೆ ಕೌಶಲ್ಯ ತರಬೇತಿ ಪಡೆಯುವುದಕ್ಕಾಗಿ 652 ಪುರುಷರು, 248 ಮಹಿಳೆಯರು ಸೇರಿದಂತೆ 900 ಮಂದಿ ಆಯ್ಕೆಯಾಗಿದ್ದಾರೆ. ಆಯ್ಕೆಯಾದವರಿಗೆ ಪ್ರಮಾಣ ಪತ್ರ ವಿತರಿಸಿ, ಶುಭ ಕೋರಲಾಯಿತು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ, ಚಿತ್ರ ನಟರಾದ ಅಜಯ್ ರಾವ್, ಪವನ್ ತೇಜ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಉದ್ಯೋಗ ವಿನಿಮಯ ಇಲಾಖೆಯ ಅಧಿಕಾರಿಗಳಾದ ರಾಣಿ, ಜುಲ್ಫೀಕರ್, ಕೌಶಲ್ಯ ಇಲಾಖೆ ಅಧಿಕಾರಿ ನಾರಾಯಣ ಮೂರ್ತಿ, ಕಾರ್ಮಿಕ ಇಲಾಖೆ ಅಧಿಕಾರಿಗಳಾದ ನಜೀಂಯಾ ಸುಲ್ತಾನ್, ರಾಜೇಶ್ ಜಾಧವ್, ಪಾಲಿಕೆ ಸದಸ್ಯೆ ಶಾರದಮ್ಮ, ಛಾಯಾದೇವಿ ಇನ್ನಿತರರು ಉಪಸ್ಥಿತರಿದ್ದರು.

## ಫೆ.26ರಂದು ಮಕ್ಕಳಿಗೆ ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮ

ಮೈಸೂರು,ಫೆ.21(ಪಿಎಂ)– ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಮತ್ತು ಬ್ರಹ್ಮೀಭೂತ ಶ್ರೀ ವಾಸುದೇವ್ ಮಹಾರಾಜ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಫೆ.26ರಂದು ಎಲ್ಲಾ ಸಮುದಾಯದ ಮಕ್ಕಳಿಗೆ ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಅಜಯ್ ಶಾಸ್ತ್ರಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8ರಿಂದ ವಿಶ್ವೇಶ್ವರನಗರದ ಮಹರ್ಷಿ ಪಬ್ಲಿಕ್ ಶಾಲೆ ಆವರಣದಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಲಿದೆ. ಎಲ್ಲಾ ಜನಾಂಗದ 2ರಿಂದ 5 ವರ್ಷದೊಳಗಿನ ಮಕ್ಕಳು ಇದರಲ್ಲಿ ಭಾಗವಹಿಸಬಹುದು. ಆಸಕ್ತ ಪೋಷಕರು ಫೆ.23ರೊಳಗೆ 98807 52727 ಅಥವಾ 78290 67769 ಮೂಲಕ ಮಕ್ಕಳ ಹೆಸರು ನೋಂದಣಿ ಮಾಡಿಕೊಳ್ಳಬಹುದು. ಸ್ಲೇಟು ಮತ್ತು ಬಳಪವನ್ನು ಉಚಿತವಾಗಿ ನೀಡಲಾಗುವುದು ಎಂದರು.

ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ ಶುಕಶಂಕರ ಪೀಠದ ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ಸಾನಿಧ್ಯದಲ್ಲಿ ಶಾಸಕ ಎಸ್.ಎ.ರಾಮದಾಸ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಮಾಜ ಸೇವಕ ಕೆ.ರಘುರಾಮ್ ವಾಜಪಾಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಕಾಮಾಕ್ಷಿ ಆಸ್ಪತ್ರೆ ಮುಖ್ಯಸ್ಥ ಮಹೇಶ್ ಶೆಣೈ, ನಗರಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಒಂದನೇ ಪುಟದಿಂದ

## ಸಂಭ್ರಮದ ಶಿವರಾತ್ರಿ ರಥೋತ್ಸವ

ಹೆಚ್.ಡಿ.ಕೋಟೆ ಹಾಗೂ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿದ್ದರು. ತೇರನ್ನು ಎಳೆಯುವಾಗ ಭಕ್ತರು ಜೈ ಮಹತ್ ಮಲೆಯಾ, 'ಉಘೇ ಮಾದಪ್ಪ ಉಘೇ' ಎಂಬಿತ್ಯಾದಿ ಜಯ ಘೋಷಗಳು ಮುಗಿಲು ಮುಟ್ಟಿದವು. ರಥೋತ್ಸವ ನಡೆದ ಬಳಿಕ ಭಕ್ತರು ತೇರನ್ನು ಸ್ಪರ್ಶಿಸಿ ನಮಸ್ಕರಿಸುವುದರ ಮೂಲಕ ಮಾದಪ್ಪನನ್ನು ನೆನೆದರು.

**ಸೂಕ್ತ ಪೊಲೀಸ್ ಬಂದೋಬಸ್ತ್:** ಮಹಾರಥೋತ್ಸವದ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟದ ದೇಗುಲದ ಆವರಣದಲ್ಲಿ ಬೆಳಗ್ಗೆ 7 ಘಂಟೆಯಿಂದಲೇ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದರು. ಈ ಹಿನ್ನಲೆಯಲ್ಲಿ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗಿತ್ತು. ತೇರಿನ ಪೂಜಾ ಕೈಂಕರ್ಯದ ವೇಳೆ ಪೊಲೀಸರು ಭಕ್ತರನ್ನು ತೇರು ಸಂಚರಿಸುವ ಮಾರ್ಗದಿಂದ ದೂರ ಸರಿಸುವಂತೆ ಸೂಚನೆ ನೀಡುತ್ತಿದ್ದರು. ರಥೋತ್ಸವ ಪ್ರಾರಂಭವಾದ ಬಳಿಕ ಬದಿಯಲ್ಲಿ ನಿಂತಿದ್ದ ಭಕ್ತರು ತೇರನ್ನು ಎಳೆಯಲು ಜಯಘೋಷಗಳನ್ನು ಕೂಗುತ್ತಾ ನಾ ಮುಂದು ತಾ ಮುಂದು ಎಂದು ಮುಂದೆ ಬಂದಾಗ ಪೊಲೀಸರು ಭಕ್ತರನ್ನು ದೂರ ಸರಿಸಲು ಹರಸಾಹಸ ಪಡಬೇಕಾಯಿತು. ರಥೋತ್ಸವದಲ್ಲಿ ಕಾರ್ಯದರ್ಶಿ ಕಾತ್ಯಾಯಿನಿದೇವಿ, ಜಿಲ್ಲಾಧಿಕಾರಿ ರಮೇಶ್ ಡಿ.ಎಸ್. ವರಿಷ್ಠಾಧಿಕಾರಿ ಪದ್ಮಿನಿ ಸಾಹೋ ಉಪಕಾರ್ಯದರ್ಶಿ ಬಸವರಾಜು, ಪ್ರಾಧಿಕಾರದ ನೌಕರರು, ದೇಗುಲದ ಅರ್ಚಕ ವೃಂದ ಹಾಗೂ ಸಿಬ್ಬಂದಿ ಇದ್ದರು.

## ಏ.1ರಿಂದ ಉಚಿತ ಬಸ್‌ಪಾಸ್ ವ್ಯವಸ್ಥೆ

ನೀಡಲಾಗುವುದು ಎಂದರು. ಆರ್ಥಿಕ ಬೆಳವಣಿಗೆಯಲ್ಲಿ ಸಂಚಾರ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕೆ ಸರ್ಕಾರ ಆದ್ಯತೆ ನೀಡಿದೆ. ಈ ಬಾರಿಯ ಬಜೆಟ್‌ನಲ್ಲಿ ವಿದ್ಯಾರ್ಥಿನಿಯರಿಗೆ ಹಾಗೂ ದುಡಿಯುವ ಹೆಣ್ಣುಮಕ್ಕಳಿಗೆ ಉಚಿತ ಪಾಸ್ ನೀಡುವುದಾಗಿ ಘೋಷಣೆ ಮಾಡಿದ್ದು, ಸರ್ಕಾರಿ ನೌಕರ ವರ್ಗ ಹಾಗೂ ಆಡಳಿತ ಮಂಡಳಿ ಜೊತೆಗಿರುತ್ತದೆ . ಜನರಿಗೆ ಉತ್ತಮ ಸೇವೆ ಒದಗಿಸೋಣ ಎಂದರು.

ಹೊಸ ಸಂಚಾರದ ವಿಶೇಷ ಅಂಬಾರಿಯನ್ನು ಇಂದು ಲೋಕಾರ್ಪಣೆ ಮಾಡಲಾಗಿದೆ. ಇದರಲ್ಲಿ ಸ್ಲೀಪರ್ ವ್ಯವಸ್ಥೆ ಇದೆ. ದೂರ ಪ್ರಯಾಣಕ್ಕೆ ರೈಲ್ವೆ ಮಾದರಿಯಲ್ಲಿರುವುದಕ್ಕಿಂತ ಉತ್ತಮವಾದ ವ್ಯವಸ್ಥೆ ಕಲ್ಪಿಸಲಾಗಿದೆ. ಹಿಂದೆ ವೋಲ್ವೊ ಬಸ್‌ಗಳು ಹೆಚ್ಚು ಅನುಕೂಲಕರವಾಗಿರಲಿಲ್ಲ. ಹಿಂದಿನ ಸಮಸ್ಯೆಗಳನ್ನು ಅರಿತು ಈ ಬಸ್‌ಗಳಲ್ಲಿ ಮಲ್ಟಿ ಎಕ್ಸೆಲ್ ವ್ಯವಸ್ಥೆ ಕಲ್ಪಿಸಿ, ಉತ್ತಮ ವ್ಯವಸ್ಥೆ ಕಲ್ಪಿಸಲಾಗಿದೆ. ಸುಲಭವಾಗಿ, ಸುಖವಾಗಿ ರಾತ್ರಿ ಪ್ರಯಾಣ ಮಾಡಬಹುದಾಗಿದೆ. ರಾಜ್ಯ ಸಾರಿಗೆಗೆ ಇನ್ನಷ್ಟು ಬಸ್ಸುಗಳನ್ನು ಪಡೆದುಕೊಳ್ಳುವುದು ಸೂಕ್ತ ಎಂದರು. ಕೆಎಸ್‌ಆರ್‌ಟಿಸಿ ತನ್ನದೇ ಇತಿಹಾಸವನ್ನು ಹೊಂದಿದ್ದು, ಉತ್ತಮ ಸೇವೆಯನ್ನು ಒದಗಿಸುತ್ತಿದೆ.

ಕೆಂಪುಬಸ್‌ನಲ್ಲಿ ಕಾಲೇಜಿಗೆ ಹೋಗುತ್ತಿದ್ದವರನ್ನು ಸ್ಮರಿಸಿದ ಮುಖ್ಯಮಂತ್ರಿಗಳು ಆಗ ಡ್ರೈವರ್ ಮತ್ತು ಸಾರ್ವಜನಿಕರ ನಡುವೆ ಉತ್ತಮ ಬಾಂಧವ್ಯ ಇತ್ತು. ಗ್ರಾಮೀಣ ಜನರು ತಮ್ಮ ಪ್ರಯಾಣವನ್ನು ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕವೇ ಗುರುತಿಸಿಕೊಳ್ಳುತ್ತಾರೆ. ಇಂಥ ಸೇವೆಯು ಖಾಸಗೀಕರಣದಿಂದ ಪೈಪೋಟಿ ಎದುರಿಸುತ್ತಿದೆ.

ಖಾಸಗಿಯವರು ಲಾಭದಾಯಕ ಮಾರ್ಗಗಳಲ್ಲಿ ಮಾತ್ರ ಸಂಚಾರ ನಡೆಸುತ್ತಾರೆ. ಸಾಮಾಜಿಕವಾಗಿ ಕೆಲಸ ಮಾಡುವ ಮಾರ್ಗಗಳನ್ನು ಸಾರಿಗೆ ಸಂಸ್ಥೆಗೆ ಬಿಡುತ್ತಾರೆ. ನಾವು ಸೇವಾ ವಲಯ ಹಾಗೂ ವಾಣಿಜ್ಯ ಮಾರ್ಗಗಳಲ್ಲಿಯೂ ಸಂಚರಿಸಿ ನಿಗಮವನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಬೇಕು. ಸಂಚಾರ ಮಾದರಿಯಾಗಬೇಕು ಎಂದರು. ಬರುವ ದಿನಗಳಲ್ಲಿ ನಿಗಮ ಬಹಳ ದೊಡ್ಡ ಬದಲಾವಣೆಯನ್ನು ಕಾಣುವ ವಿಶ್ವಾಸವಿದೆ. ತನ್ನದೇ ಲಕ್ಷ್ಯ ಮೇಲೆ ನಿಲ್ಲಬೇಕೆನ್ನುವುದು ನಮ್ಮ ಅಭಿಲಾಷೆ. ಹಿಂದೆ ಇದ್ದಂತೆಯೇ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸರ್ಕಾರ ಕೋವಿಡ್ ಹಾಗೂ ನಂತರದಲ್ಲಿ ಎಲ್ಲಾ ರಂಗಗಳಲ್ಲಿ ಕುಸಿತ ಕಂಡಿತು. ಈ ಸಂದರ್ಭದಲ್ಲಿ ಸಾರಿಗೆ ಸಂಸ್ಥೆ ಸಾಕಷ್ಟು ತೊಂದರೆ ಅನುಭವಿಸಿದೆ ಎಂದರು.

ಆ ಸಂದರ್ಭದಲ್ಲಿ ಸರ್ಕಾರ ಸಂಪೂರ್ಣವಾಗಿ ಹಣಕಾಸಿನ ಬೆಂಬಲ ನೀಡಿದೆ. 2 ವರ್ಷವೂ ಬೆಂಬಲ ನೀಡಿ ನೌಕರರಿಗೆ ವೇತನ, ಡೀಸೆಲ್ ಬಿಲ್‌ಗೆ ಅನುದಾನ ಒದಗಿಸಲಾಗಿದೆ. ನಷ್ಟದಲ್ಲಿದ್ದ ಸಾರಿಗೆ ನಿಗಮಗಳಿಗೆ 4600 ಕೋಟಿ ರೂ. ನೀಡಲಾಗಿದೆ. ಇತ್ತೀಚೆಗೆ ಒಂದು ಸಾವಿರ ಕೋಟಿ ರೂ.ಗಳನ್ನು ನೀಡಲಾಗಿದೆ. ಸರ್ಕಾರ ಎಲ್ಲಾ ರೀತಿಯ ಬೆಂಬಲ ನೀಡಲು ಸಿದ್ಧವಿದ್ದು, ತೆರಿಗೆ ವಿನಾಯ್ತಿ ನೀಡಲು ಕೂಡ ಸಿದ್ಧವಿದೆ.

ನಿಗಮಗಳು ವಾಣಿಜ್ಯ ಮಾರ್ಗಗಳ ಸಂಚಾರ ಹಾಗೂ ಸೋರಿಕೆ ತಡೆಯುವ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು ಪ್ರಯತ್ನ ಪಡಬೇಕು. ಖರೀದಿಯಲ್ಲಿಯೂ ಪಾರದರ್ಶಕತೆ ತರಬೇಕು. ಬಿಡಿ ಭಾಗ, ಆಯಿಲ್, ಟೈರ್ ಖರೀದಿಯಲ್ಲಿ ಪಾರದರ್ಶಕತೆ ತಂದು ವೆಚ್ಚವನ್ನು ಕಡಿಮೆ ಮಾಡಬೇಕು. ಸಾರಿಗೆ ಸಂಸ್ಥೆಯನ್ನು ಮತ್ತೊಮ್ಮೆ ಲಾಭದಾಯಕವಾಗಿ ನಡೆಸಬೇಕು ಎಂಬ ಅಭಿಲಾಷೆಗೆ ಎಲ್ಲರೂ ಸಹಕರಿಸಬೇಕು ಎಂದರು. ಸಿಬ್ಬಂದಿಯ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆ ಸಲ್ಲಿಸಿದ್ದು, ಹಣಕಾಸು ಇತಿಮಿತಿಯಲ್ಲಿ ನೌಕರರೊಂದಿಗೆ ಚರ್ಚೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ತಂತ್ರಜ್ಞಾನ ಬದಲಾಗುತ್ತಿದ್ದು, ಅದಕ್ಕೆ ತಕ್ಕಂತೆ ಪ್ರಯಾಣಿಕರ ಆಯ್ಕೆಗಳು ಬದಲಾಗುತ್ತಿವೆ. ಇದನ್ನು ಗಮನಿಸಿ, ಖಾಸಗಿಯವರೊಂದಿಗೆ ಪೈಪೋಟಿ ಮಾಡಿ ಅವರಿಗಿಂತ ಹೆಚ್ಚು ಸೇವೆ ನೀಡಿ ಜನಮನ ಗೆಲ್ಲಬೇಕು ಎಂದು ಕರೆ ನೀಡಿದರು. ಈ ನಿಟ್ಟಿನಲ್ಲಿ ಇದೊಂದು ಉತ್ತಮ ನಡೆಯಾಗಿದೆ. ಇದರ ಕಾರ್ಯಸೂಚಿಗೆ ತಕ್ಕಂತೆ ಕೆಲಸ ಮಾಡಬೇಕು ಎಂದರು.

## ಉಪಟಳ ನೀಡುವ ಚಿರತೆ ಸೆರೆಗೆ ಎಲ್ಲಾ ಕ್ರಮ

ಪ್ರಾಣಿಗಳ ಹಾವಳಿ ಇದೆಯೋ ಅಂತಹ ಕಡೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಸೆರೆ ಹಿಡಿಯಲಾಗುತ್ತದೆ. ಚಿರತೆ ಮತ್ತಿತರ ಕಾಡು ಪ್ರಾಣಿಗಳನ್ನು ಪುನರ್ ವಸತಿ ಕೇಂದ್ರಗಳಿಗೆ ಬಿಡುವುದಾಗಿ ಹೇಳಿದರು. ಕಾಡು ಪ್ರಾಣಿಗಳಿಂದ ದಾಳಿಗೆ ಒಳಗಾಗಿ ಪ್ರಾಣ ಕಳೆದುಕೊಂಡವರಿಗೆ ನೀಡುವ ಪರಿಹಾರ ಮೊತ್ತ ದ್ವಿಗುಣಗೊಳಿಸಲಾಗಿದೆ. ಕಳೆದ ನಾಲ್ಕು ವರ್ಷದ ಅವಧಿಯಲ್ಲಿ ಮಂಡ್ಯದಲ್ಲಿ 19 ಚಿರತೆಗಳನ್ನು ಸೆರೆ ಹಿಡಿಯಲಾಗಿದೆ. 2019–20ರವರೆಗೆ ಒಂದು ಮಾನವ ಪ್ರಾಣ ಹಾನಿಯಾಗಿ ಏಳೂವರೆ ಲಕ್ಷ ರೂ. ಪರಿಹಾರ ಕೊಟ್ಟಿದ್ದೇವೆ. ಒಟ್ಟು 410 ಪ್ರಕರಣಗಳು ದಾಖಲಾಗಿದ್ದು, 28.87 ಲಕ್ಷ ರೂ. ಪರಿಹಾರ ನೀಡಿರುವುದಾಗಿ ಸಚಿವರು ತಿಳಿಸಿದರು.

## 'ಜಯಲಕ್ಷ್ಮಿ ವಿಲಾಸ ಅರಮನೆ' ಆಶ್ರಯ

ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್ ಸಾಕ್ಷಿಯಾಗಿದ್ದರು.

**30 ವರ್ಷಕ್ಕೆ ಒಪ್ಪಂದ:** ಈ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಇಂದಿನಿಂದ 30 ವರ್ಷ ಅವಧಿಗೆ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ಬಳಕೆಗೆ ಒಂಡಂಬಡಿಕೆ ಮಾಡಿಕೊಳ್ಳಲಾಗಿದೆ. ಮೈಸೂರು ವಿವಿಗೆ ಮಾಹೆಯಾನ 1 ಸಾವಿರ ರೂ. ಶುಲ್ಕ ಪಾವತಿಸಬೇಕೆಂದು ಕರಾರಿನಲ್ಲಿದೆ. ಒಡಂಬಡಿಕೆಯಾಗಿರುವುದನ್ನು ಇಲಾಖೆ ನಿರ್ದೇಶಕರ ಮೂಲಕ ಸರ್ಕಾರದ ಗಮನಕ್ಕೆ ತಂದು ಮುಂದಿನ ಚಟುವಟಿಕೆಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ನವೀಕರಣವಾಗಬೇಕು:** ಜಯಲಕ್ಷ್ಮಿ ವಿಲಾಸ ಅರಮನೆಯಲ್ಲಿರುವ ಜಾನಪದ ವಸ್ತು ಸಂಗ್ರಹಾಲಯವನ್ನು ವಿವಿ ನಿರ್ವಹಣೆ ಮಾಡುತ್ತಿದ್ದು, ಉಳಿದಂತೆ ಸಂಪೂರ್ಣ ಕಟ್ಟಡದ ಜವಾಬ್ದಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಿದೆ. ಮೊದಲಿಗೆ ಕಟ್ಟಡದ ನವೀಕರಣ ಕಾರ್ಯವಾಗಬೇಕು. ಪಾರಂಪರಿಕ ಸ್ವರೂಪಕ್ಕೆ ಹಾನಿಯಾಗದಂತೆ ಅತ್ಯಂತ ಎಚ್ಚರಿಕೆಯಿಂದ ನವೀಕರಣ ಕಾರ್ಯ ನಡೆಸಬೇಕು. ನಂತರದಲ್ಲಿ ಬಳಕೆಗೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳಬೇಕು. ಸದ್ಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಸಂಸ್ಥೆ ಸಮೀಪದ ಕಟ್ಟಡದಲ್ಲಿ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರ ಕಾರ್ಯ ನಿರ್ವಹಿಸುತ್ತಿದ್ದು, ನವೀಕರಣದ ಜೊತೆಗೆ ಎಲ್ಲಾ ವ್ಯವಸ್ಥೆ ಮಾಡಿಕೊಂಡ ನಂತರ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದರು.

## ಮೈಷುಗರ್‌ನಿಂದ ರೈತರ ಬಾಕಿ ಹಣ ಬಿಡುಗಡೆಗೆ ಕ್ರಮ

### ಎಂಎಲ್‌ಸಿ ದಿನೇಶ್ ಗೂಳಿಗೌಡರಿಗೆ ಸಚಿವ ಶಂಕರ ಪಾಟೀಲ ಮನೇಕೊಪ್ಪ ಭರವಸೆ



**ಕಳೆದ ವರ್ಷ 3 ಲಕ್ಷ ಟನ್ ಕಬ್ಬು ನುರಿಯುವ ಗುರಿ ಹೊಂದಲಾಗಿತ್ತು. ಆದರೆ, 1 ಲಕ್ಷದ ಒಂದು ಸಾವಿರದ ಎಂಟುನೂರ ನಲವತ್ತಮೂರು ಟನ್ ಕಬ್ಬನ್ನು ಮಾತ್ರ ಅರೆಯಲಾಗಿದೆ. ಆದರೆ ಈ ಬಾರಿ ಹೆಚ್ಚಿನ ಕಬ್ಬನ್ನು ಅರಿಯಬೇಕಿದೆ. ಇದಕ್ಕೆ ರೈತರು ಕಾರ್ಖಾನೆಗೆ ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಸಾಗಿಸಬೇಕು. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕು.**

**- ದಿನೇಶ್ ಗೂಳಿಗೌಡ,** ವಿಧಾನ ಪರಿಷತ್ ಸದಸ್ಯ.

ಬೆಂಗಳೂರು, ಫೆ.21– ಮೈಸೂರು ಸಕ್ಕರೆ ಕಾರ್ಖಾನೆಗೆ ಕಬ್ಬು ಪೂರೈಸಿದ 300 ರೈತರಿಗೆ ಒಟ್ಟು 2.42 ಕೋಟಿ ರೂ. ಪಾವತಿ ಬಾಕಿ ಇದ್ದು, ಆ ಮೊತ್ತ ಬಿಡುಗಡೆಗೆ ಕ್ರಮ ವಹಿಸಲಾಗುವುದು ಎಂದು ಕೈಮಗ್ಗ, ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವ ಶಂಕರ ಪಾಟೀಲ ಮನೇಕೊಪ್ಪ ಎಂಎಲ್‌ಸಿ ದಿನೇಶ್ ಗೂಳಿಗೌಡರ ಪ್ರಶ್ನೆಗೆ ಉತ್ತರಿಸಿದ್ದಾರೆ.

ಈ ಬಾರಿ ಎಷ್ಟು ಟನ್ ಕಬ್ಬು ನುರಿ ಯುವ ಗುರಿ ಹೊಂದಲಾಗಿತ್ತು, ರೈತರಿಗೆ ಹಣ ಪಾವತಿ ಬಾಕಿ ಇದೆಯೇ..? ಕಾರ್ಖಾನೆಗೆ ಸರ್ಕಾರದಿಂದ ಬಾಕಿ ಇರುವ ಘೋಷಿತ ಹಣ ಯಾವಾಗ ಬಿಡುಗಡೆ ಮಾಡಲಾಗುವುದು..? ಎಂಬುದಾಗಿ ಶಾಸಕ ದಿನೇಶ ಗೂಳಿಗೌಡರು ಪರಿಷತ್‌ನಲ್ಲಿ ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಅವರು ಮಂಗಳವಾರ ಉತ್ತರಿಸಿದ್ದಾರೆ.

ಈ ಬಾರಿ 2022ರ ಸೆ.20ರಿಂದ ಕಬ್ಬು ನುರಿಯುವಿಕೆ ಪ್ರಾರಂಭಿಸಲಾಗಿತ್ತು ಫೆ2ರವರೆಗೆ 1,1842 ಮೆಟ್ರಿಕ್ ಟನ್ ಕಬ್ಬು ನುರಿಸ ಲಾಗಿದೆ. ರೈತರಿಗೆ 28.72 ಕೋಟಿ ರೂ. ಪಾವತಿಸಬೇಕಿದ್ದು, ಆ ಪೈಕಿ ಈಗಾಗಲೇ 26.30 ಕೋಟಿ ರೂ. ಪಾವತಿಸಲಾಗಿದೆ. ಬಾಕಿ ಮೊತ್ತ ಪಾವತಿಗೆ ಕ್ರಮ ವಹಿಸಲಾಗಿದೆ. 4 ತಿಂಗಳು ಕಾರ್ಖಾನೆಗೆ ಪ್ರತಿದಿನ 800 ರಿಂದ 1000 ಮೆ.ಟನ್ ಕಬ್ಬು ಪೂರೈಕೆಯಾಗಿದ್ದು, 1.50 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯಲು ಗುರಿ ಹೊಂದಲಾಗಿತ್ತು. ಆದರೆ, ಕಾರ್ಖಾನೆ ಕಬ್ಬು ಅರೆಯುವ ಸಾಮರ್ಥ್ಯಕ್ಕೆ ಅನುಗುಣವಾಗಿ ಕಬ್ಬು ಪೂರೈಕೆಯಾಗದ ಕಾರಣ ಕಂಪನಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಫೆ2 ರಂದು ಕಬ್ಬು ಅರೆಯುವಿಕೆ ನಿಲ್ಲಿಸಲಾಗಿದೆ ಎಂದು ವಿವರಿಸಿದ್ದಾರೆ.

**ಪುನಶ್ಚೇತನಕ್ಕೆ ಕ್ರಮ:** ಕಾರ್ಖಾನೆ ಪುನಶ್ಚೇತನಕ್ಕೆ ಕಳೆದ ಬಜೆಟ್‌ನಲ್ಲಿ ಘೋಷಿಸಿದ ಅನುದಾನವೆಷ್ಟು..? ಘೋಷಣೆಯಾದ ಎಷ್ಟು ಅನುದಾನ ಬಿಡುಗಡೆಯಾಗಿದೆ..? ಹಾಗೂ ಬಾಕಿ ಹಣ ಬಿಡುಗಡೆ ಮಾಡದಿ ರುವುದರಿಂದ ಕಾರ್ಖಾನೆ ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ಕಲ್ಪಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗಳಿಗೂ ಸಚಿವ ಮನೇಕೊಪ್ಪ ಉತ್ತರಿಸಿದ್ದಾರೆ.

2019–20 ರಿಂದ ಸ್ಥಗಿತಗೊಂಡಿರುವ ಮೈಷುಗರ್ ಕಾರ್ಖಾನೆ ಪುನಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಮುಂದಿನ 2 ವರ್ಷಗಳ ಕಾಲ ಪ್ರಾಯೋಗಿಕವಾಗಿ ಸರ್ಕಾರದಿಂದಲೇ ಕಾರ್ಖಾನೆ ನಡೆಸಲಾಗುವುದು. ಕಾರ್ಖಾನೆ ಯಂತ್ರೋಪಕರಣ ದುರಸ್ತಿಗಾಗಿ 50 ಕೋಟಿ ರೂ. ಒದಗಿಸುವುದಲ್ಲದೆ, ಹಣಕಾಸು ಸಂಸ್ಥೆಗಳಿಂದ ದುಡಿಯುವ ಬಂಡವಾಳ ಪಡೆಯಲು ವ್ಯವಸ್ಥೆ ಮಾಡಲಾಗುವುದು ಎಂದು 2022–23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಅದರಂತೆ ಯಂತ್ರೋಪಕರಣಗಳ ದುರಸ್ತಿ ಮತ್ತು ಓವರ್–ಹಾಲಿಂಗ್ ಕೆಲಸಗಳಿಗೆ, ಸಾಮಾಗ್ರಿ ಖರೀದಿ ಮತ್ತು ಗುತ್ತಿಗೆ ಕೆಲಸಗಳನ್ನು ಕೈಗೊಳ್ಳಲು, ಕಬ್ಬು ಕಟಾವು ಮಾಡುವ ಮೇಸ್ತ್ರಿಗಳಿಗೆ ಮುಂಗಡ ಹಣ ಪಾವತಿಸಲು, ನೌಕರರಿಗೆ ಸ್ವಯಂ ನಿವೃತ್ತಿ ಸೌಲಭ್ಯ ಪಾವತಿಸುವುದಕ್ಕಾಗಿ 32.58 ಕೋಟಿ ರೂ. ಅನುದಾನವನ್ನು ಇದುವರೆಗೆ ಬಿಡುಗಡೆಗೊಳಿಸಲಾಗಿದೆ. ಬಾಕಿ ಉಳಿದಿರುವ 17.42 ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸುವ ಕ್ರಮವಹಿಸಲಾಗುತ್ತಿದೆ. ಅಲ್ಲದೆ, ಕಾರ್ಖಾನೆ ದುಡಿಯುವ ಬಂಡವಾಳಕ್ಕಾಗಿ ಹಾಗೂ ತುರ್ತು ಅವಶ್ಯಕ ಸೌಕರ್ಯ ಕೈಗೊಳ್ಳಲು ರಾಜ್ಯ ಸರ್ಕಾರದಿಂದ 15 ಕೋಟಿ ರೂ. ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ (ಕೆಎಸ್‌ಎಸ್‌ಐಡಿಸಿ)ಯಿಂದ 15 ಕೋಟಿ ರೂ. ಸಾಲ ನೀಡಲಾಗಿದೆ ಎಂದರು.

## ಮೈಸೂರಲ್ಲಿ ಸಿಲ್ಕ್ ಇಂಡಿಯಾ ಸೀರೆ ಮೇಳ

ಮೈಸೂರು, ಫೆ.21– ಮೈಸೂರಿನಲ್ಲಿ ಮದುವೆ ಸಮಾರಂಭವನ್ನು ಗಮನದಲ್ಲಿಟ್ಟುಕೊಂಡು ಸಿಲ್ಕ್ ಇಂಡಿಯಾ –2023 ಮೇಳವನ್ನು 24.02.2023 ರಿಂದ 05.03.2023ವರೆಗೆ 10 ದಿವಸಗಳ ಕಾಲ ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.



ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60 ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಮೈಸೂರು ಜನತೆಯ ಮುಂದೆ ಪ್ರತಿ ದಿನ ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ ಪ್ರದರ್ಶಿಸಿ ಮಾರಾಟ ಮಾಡುವರು.

ಮೇಳದಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ (arni) ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲುಸರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್‌ಗಳು ಮತ್ತು ಸೀರೆಗಳು, ಭಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್ಬಾರಿ ಸಿಲ್ಕ್, ಕೊಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ (dye) ಸೀರೆಗಳು ಪ್ರದರ್ಶನಗೊಳ್ಳಲಿದೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್ಗಳು ಮತ್ತು ಬೆಡ್‌ಶೀಟ್‌ಗಳನ್ನು ಈ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಿ ಮಾರಾಟ ಮಾಡುವರು.ಈ ವಸ್ತುಗಳನ್ನು ಉತ್ಪಾದಕರೆ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವುದರಿಂದ ವಸ್ತುಗಳು ನ್ಯಾಯಯುತ ಬೆಲೆಯಲ್ಲಿ ದೊರಕುತ್ತವೆ.

## ಮೈಸೂರಿನಲ್ಲಿ ಫೆ.24ರಿಂದ ಮೂರು ದಿನ ರಾಷ್ಟ್ರಮಟ್ಟದ ಪುರುಷರ ಮಾಡರ್ನ್ ಖೋ–ಖೋ ಪಂದ್ಯಾವಳಿ

ಮೈಸೂರು,ಫೆ.21(ಪಿಎಂ)– ಮಾಡರ್ನ್ ಖೋ–ಖೋ ಸಂಸ್ಥೆ ಭಾರತ, ಕರ್ನಾಟಕ ಮತ್ತು ಮೈಸೂರು ಘಟಕಗಳ ಸಂಯುಕ್ತಾಶ್ರಯದಲ್ಲಿ ಫೆ.24ರಿಂದ 26ರವರೆಗೆ ಮೈಸೂರಿನಲ್ಲಿ ಪುರುಷರ ಹೊನಲು ಬೆಳಕಿನ ಮಾಡರ್ನ್ ಖೋ–ಖೋ ರಾಷ್ಟ್ರೀಯ ಚಾಂಪಿಯನ್‌ಶಿಪ್ ಪಂದ್ಯಾವಳಿ ಆಯೋಜಿ ಸಲಾಗಿದೆ ಎಂದು ಮಾಜಿ ಮೇಯರ್, ಮಾಡರ್ನ್ ಖೋ–ಖೋ ಸಂಸ್ಥೆ ಕರ್ನಾಟಕ ಘಟಕದ ಅಧ್ಯಕ್ಷರೂ ಆದ ಏಕಲವ್ಯ ಪ್ರಶಸ್ತಿ ಪುರಸ್ಕೃತ ಹಿರಿಯ ಖೋ–ಖೋ ಪಟು ಎನ್.ಪ್ರಕಾಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕುವೆಂಪುನಗರದ ವಿವೇಕಾನಂದ ಕ್ರೀಡಾಂಗಣದಲ್ಲಿ ಪಂದ್ಯಾವಳಿ ನಡೆಯಲಿದೆ. ಫೆ.24ರಂದು ಸಂಜೆ 6.30ಕ್ಕೆ ಪಂದ್ಯಾವಳಿಗೆ ಮಾಜಿ ಮೇಯರ್ ಸುನಂದ ಪಾಲನೇತ್ರ ಚಾಲನೆ ನೀಡಲಿದ್ದಾರೆ. ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆ ವಹಿಸಲಿದ್ದು, ಮಾಡರ್ನ್ ಖೋ–ಖೋ ಸಂಸ್ಥೆ ಭಾರತ ಘಟಕದ ಕಾರ್ಯದರ್ಶಿ ಶ್ರೀಕಾಂತ್ ಮೋರೇ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರೋಹಿತ್ ಗಂಗಾಧರ್ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಫೆ26ರಂದು ಸಂಜೆ 6.30ಕ್ಕೆ ಬಹು ಮಾನ ವಿತರಣೆ ಸಮಾರಂಭ ಹಮ್ಮಿ ಕೊಂಡಿದ್ದು, ಸಚಿವರಾದ ಎಸ್.ಟಿ.ಸೋಮ ಶೇಖರ್, ನಾರಾಯಣಗೌಡ, ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಖೋ–ಖೋದಲ್ಲಿ ಜೀವಮಾನ ಸಾಧನೆಗೈದ ಪಿ.ಎನ್.ಸಂಪತ್, ಟಿ.ಹೆಚ್. ಚಂದ್ರಶೇಖರ್, ಮರಿಯಾ ಮೇರಿ ಮೇನನ್ಸೀಶ್, ಎಸ್.ಪ್ರಕಾಶ್ ಮತ್ತು ಎನ್.ಶೋಭಾ ನಾರಾಯಣ್ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಕೇರಳ, ತಮಿಳುನಾಡು, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳ 14 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿವೆ. ಒಟ್ಟಾರೆ ಸುಮಾರು 200 ಖೋ–ಖೋ ಪಟುಗಳು ಭಾಗವಹಿಸಲಿದ್ದಾರೆ. ಪಂದ್ಯಾವಳಿ ಆಯೋಜನೆಗೆ ಸುಮಾರು 15 ಲಕ್ಷ ರೂ. ವೆಚ್ಚವಾಗಲಿದೆ. ಹಣಕಾಸು ಪರಿಸ್ಥಿತಿಗೆ ಅನುಗುಣವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸುವ ತಂಡಗಳಿಗೆ ನಗದು ಬಹುಮಾನ ನೀಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮಾಡರ್ನ್ ಖೋ–ಖೋ ಸಂಸ್ಥೆ ಕರ್ನಾಟಕ ಘಟಕದ ಕಾರ್ಯದರ್ಶಿ ಚಿನ್ನಮೂರ್ತಿ, ಉಪಾಧ್ಯಕ್ಷ ಮಹದೇವಪ್ಪ ಹಿರಿಯ ಖೋ–ಖೋ ಪಟು ಮಂಜುನಾಥ್ ಗೋಷ್ಠಿಯಲ್ಲಿದ್ದರು.

## ಕೋರ್ಟ್‌ನಲ್ಲಿ ವ್ಯಾಜ್ಯವಿದ್ದರೂ ಜೀರ್ಣೋದ್ಧಾರಕ್ಕೆ ಚಾಲನೆ ನೀಡಿರುವುದು ಕಾನೂನುಬಾಹಿರ; ಆರೋಪ

ಮೈಸೂರು,ಫೆ.21(ಪಿಎಂ)– ನಗರದ ಕೆಆರ್ ಮೊಹಲ್ಲಾದ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಚಿಕ್ಕ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದೇವಸ್ಥಾನದ ಸೇವಾ ಸಮಿತಿ ಹೆಸರಿನಲ್ಲಿ ಕೆಲವು ಅನಧಿಕೃತವಾಗಿ ಪೂಜಾ ಕೈಂಕರ್ಯ ನಡೆಸುತ್ತಿದ್ದಾರೆ. ಇದರ ವಿರುದ್ಧ ನಾವು ಕೋರ್ಟ್‌ನಲ್ಲಿ ದಾವೆ ಹೂಡಿದ್ದು, ಇದು ಇತ್ಯರ್ಥವಾಗದ ಸಂದರ್ಭದಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕ್ಷೇತ್ರದ ಶಾಸಕರು ಚಾಲನೆ ನೀಡಿದ್ದಾರೆ. ಇದು ಕಾನೂನುಬಾಹಿರ ಎಂದು ಶ್ರೀ ಚಿಕ್ಕ ಆಂಜನೇಯಸ್ವಾಮಿ ಟ್ರಸ್ಟ್ ಅಧ್ಯಕ್ಷ ಹೆಚ್.ಎನ್.ಶ್ರೀಕಾಂತ್ ಕಶ್ಯಪ್ ದೂರಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಅತ್ತೆ ಸರಸ್ವತಮ್ಮ ಅವರ ಹೆಸರಿನಲ್ಲಿ ದೇವಸ್ಥಾನದ ಖಾತೆ ಇದೆ. ಅಲ್ಲದೆ, ದೇವಸ್ಥಾನವು ಸರಸ್ವತಮ್ಮನವರಿಗೆ ಸೇರಿದೆ ಎಂಬುದಕ್ಕೆ ಎಲ್ಲಾ ದಾಖಲೆಗಳೂ ಇವೆ. ದೇವಸ್ಥಾನದ ಪೂಜಾ ಕೈಂಕರ್ಯದ ಹಕ್ಕು ಮತ್ತು ಮಾಲೀಕತ್ವದ ಹಕ್ಕಿಗೆ ಸಂಬಂಧಿಸಿದಂತೆ ಎರಡು ಪ್ರಕರಣಗಳು ಕೋರ್ಟ್‌ನಲ್ಲಿ ಇತ್ಯರ್ಥ ಆಗಬೇಕಿದೆ. ಹೀಗಿದ್ದರೂ ಸೇವಾ ಸಮಿತಿಯವರ ಜೊತೆಗೂಡಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶಾಸಕ ಎಸ್.ಎ.ರಾಮದಾಸ್ ಅವರು ಗುದ್ದಲಿ ಪೂಜೆ ನೆರವೇರಿಸಿದ್ದು, ಇದು ಖಂಡನೀಯ. ವ್ಯಾಜ್ಯ ಇತ್ಯರ್ಥವಾಗುವವರೆಗೆ ಯಾವುದೇ ಕಾಮಗಾರಿ ನಡೆಸಬಾರದು ಎಂದು ಒತ್ತಾಯಿಸಿದರು. ವಕೀಲ ಬಿ.ಎಸ್.ಚಂದ್ರಶೇಖರ್ ಗೋಷ್ಠಿಯಲ್ಲಿದ್ದರು.


## ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಫೆ. 21– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ. 23 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

## ನಾಳೆಯಿಂದ ಇಂಡಿಯನ್ ಫಾರ್ಮಾಕೊಲಾಜಿಕಲ್ ಸೊಸೈಟಿ ಸಮ್ಮೇಳನ

### ಫೆ.24ರಂದು ವಾಕಥಾನ್‌ಗೆ ಮಾಜಿ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್ ಚಾಲನೆ

ಮೈಸೂರು,ಫೆ.21(ಪಿಎಂ)– ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಐಪಿಎಸ್ ಮೈಸೂರು ಘಟಕದ ಸಂಯುಕ್ತಾಶ್ರಯದಲ್ಲಿ ಫೆ.23ರಿಂದ 25ರವರೆಗೆ ಇಂಡಿಯನ್ ಫಾರ್ಮಾಕೊಲಾಜಿಕಲ್ ಸೊಸೈಟಿಯ (ಐಪಿಎಸ್) 52ನೇ ವಾರ್ಷಿಕ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಕೆ.ಎಲ್.ಕೃಷ್ಣ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಔಷಧಶಾಸ್ತ್ರ ಕ್ಷೇತ್ರದ ಬೆಳವಣಿಗೆ ಕುರಿತಂತೆ ಸಮ್ಮೇಳನ ಬೆಳಕು ಚೆಲ್ಲಲಿದೆ. 'ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಔಷಧಶಾಸ್ತ್ರದ ಭವಿಷ್ಯದ ಸವಾಲುಗಳು' ಶೀರ್ಷಿಕೆಯಡಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಜೆಎಸ್‌ಎಸ್ ಫಾರ್ಮಸಿ ಕಾಲೇಜು ಆವರಣದಲ್ಲಿ ಸಮ್ಮೇಳನ ನಡೆಯಲಿದೆ. ಫೆ.22ರಂದು ಸಮ್ಮೇಳನದ ಪೂರ್ವಭಾವಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

ಸಮ್ಮೇಳನವು ಯುವ ಔಷಧಶಾಸ್ತ್ರಜ್ಞರು ಮತ್ತು ವಿವಿಧ ಸಂಶೋಧಕರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದೆ. ಇತ್ತೀಚಿನ ತಂತ್ರಜ್ಞಾನಗಳು ಮತ್ತು ಹೊಸ ಔಷಧಗಳ ಅನ್ವೇಷಣೆಗೆ ಉತ್ತಮ ತಂತ್ರಜ್ಞಾನ ಅಳವಡಿಕೆ ಅಗತ್ಯತೆ ಕುರಿತು ಸಮ್ಮೇಳನ ಬೆಳಕು ಚೆಲ್ಲಲಿದೆ. ಜೊತೆಗೆ ಔಷಧಶಾಸ್ತ್ರದ ಹಲವು ನಿರ್ಣಾಯಕ ಮತ್ತು ಸಮಕಾಲೀನ ಸಮಸ್ಯೆಗಳ ನಿವಾರಣೆಗೆ ವಿಶ್ವ ಪ್ರಸಿದ್ಧ ವಿಜ್ಞಾನಿಗಳಿಂದ ಚರ್ಚೆ ಸಹ ನಡೆಯಲಿದೆ. ಭಾರತ ಮತ್ತು ಜಗತ್ತಿನ ವಿವಿಧ ದೇಶಗಳ 110 ಔಷಧ ವಿಜ್ಞಾನಿಗಳ ವಿಚಾರ ಗೋಷ್ಠಿಗಳು ನಡೆಯಲಿವೆ. ದೇಶದ ವಿವಿಧ ರಾಜ್ಯಗಳ ಔಷಧ ವಿಜ್ಞಾನಿಗಳು, ವಿದ್ಯಾರ್ಥಿಗಳು, ಕೈಗಾರಿಕೋದ್ಯಮಿಗಳು ಸೇರಿದಂತೆ ಸಾವಿರಕ್ಕೂ ಅಧಿಕ ಮಂದಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

**ಫೆ.24ರಂದು ವಾಕಥಾನ್:** ಔಷಧ ಕ್ಷೇತ್ರದ ಉಪಕರಣ, ಪ್ರಕಾಶಕರು ಮತ್ತು ಔಷಧೀಯ ಕಂಪನಿಗಳ ವಸ್ತು ಪ್ರದರ್ಶನ ಸಹ ನಡೆಯಲಿದೆ. ಅಲ್ಲದೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಫೆ.24ರಂದು ಬೆಳಗ್ಗೆ 6.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಎದುರಿನಿಂದ ಕಾಲೇಜು ಆವರಣದವರೆಗೆ 'ವಾಕಥಾನ್' ಏರ್ಪಡಿಸಿದ್ದು, ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ವಾಕಥಾನ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ವಾಕಥಾನ್‌ಗೆ ಅಂತಾರಾಷ್ಟ್ರೀಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಚಾಲನೆ ನೀಡಲಿದ್ದಾರೆ. ವಾಕಥಾನ್‌ನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸುವವರಿಗೆ ಕ್ರಮವಾಗಿ 5 ಸಾವಿರ ರೂ., 3 ಸಾವಿರ ರೂ. ಮತ್ತು 1 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು ಎಂದರು.

ಸಮ್ಮೇಳನದ ಸಂಘಟನಾ ಅಧ್ಯಕ್ಷ ಮತ್ತು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್ ಮಾತನಾಡಿ, ಫೆ.23ರಂದು ಸಂಜೆ 4.30ಕ್ಕೆ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಸಮ್ಮೇಳನದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಭೋಪಾಲ್ ಮತ್ತು ಜಮ್ಮುವಿನ ಏಮ್ಸ್ ಸಂಸ್ಥೆ ಅಧ್ಯಕ್ಷ ಡಾ.ವೈ.ಕೆ.ಗುಪ್ತಾ, ದೆಹಲಿಯ ಫಾರ್ಮಾಸ್ಯುಟಿಕಲ್ ಸೈನ್ಸಸ್ ಮತ್ತು ಸಂಶೋಧನಾ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಆರ್.ಕೆ.ಗೋಯಲ್, ಜಾರ್ಖಂಡ್‌ನ ರಾಂಚಿಯ ಪಶುವೈದ್ಯಕೀಯ ಕಾಲೇಜು ಮಾಜಿ ಡೀನ್ ಡಾ.ಬಿ.ಕೆ.ರಾಯ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಮೂವರು ಪ್ರಸಿದ್ಧ ಔಷಧಶಾಸ್ತ್ರಜ್ಞರಿಗೆ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ 10 ಮಂದಿ ಪ್ರಾಧ್ಯಾಪಕರಿಗೆ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ನೀಡಲಾಗುವುದು. ಅಲ್ಲದೆ, ನಾಲ್ವರು ಔಷಧಶಾಸ್ತ್ರಜ್ಞರಿಗೆ ಫೆಲೋ ಆಫ್ ಇಂಡಿಯನ್ ಫಾರ್ಮಾಕೊಲಾಜಿಕಲ್ ಸೊಸೈಟಿ ಪುರಸ್ಕಾರ ನೀಡಲಾಗುವುದು. ಸಮ್ಮೇಳನದಲ್ಲಿನ ಉತ್ತಮ ಪ್ರಸ್ತುತಿಗಾಗಿ ಆಯ್ದ 6 ಮಂದಿಗೆ ತಲಾ 50 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು ಎಂದು ವಿವರಿಸಿದರು. ಕಾಲೇಜಿನ ಉಪಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್, ಸಹ ಪ್ರಾಧ್ಯಾಪಕ ಬಿ.ಆರ್.ಪ್ರಶಾಂತ್‌ಕುಮಾರ್ ಗೋಷ್ಠಿಯಲ್ಲಿದ್ದರು.

# ಬಿಜೆಪಿ ಬಡವರ ಪಕ್ಷವಲ್ಲ, ಜೆಡಿಎಸ್‌ಗೆ ಸಿದ್ಧಾಂತವಿಲ್ಲ

## ದೇಶಕ್ಕೆ ಕಾಂಗ್ರೆಸ್ ಒಂದೇ ಭದ್ರ ಬುನಾದಿ: ಮಾಜಿ ಶಾಸಕ ಕೆ.ವೆಂಕಟೇಶ್ ಅಭಿಪ್ರಾಯ



ಪಿರಿಯಾಪಟ್ಟಣ, ಫೆ.21– ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದರೂ, ಅದು ಬಡವರ ಪಕ್ಷವಲ್ಲ. ಜೆಡಿಎಸ್ ಕುಟುಂಬ ರಾಜಕಾರಣದ ಪಕ್ಷ ಅದಕ್ಕೆ ಯಾವುದೇ ಸಿದ್ಧಾಂತವಿಲ್ಲ. ದೇಶಕ್ಕೆ ಕಾಂಗ್ರೆಸ್ ಪಕ್ಷವೇ ಭದ್ರ ಬುನಾದಿ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಬೆಂಬಲಿಸುವ ಮೂಲಕ ದೇಶ ಹಾಗೂ ರಾಜ್ಯದ ಅಭಿವೃದ್ಧಿಗೆ ಶ್ರಮಿಸೋಣ ಎಂದು ಮಾಜಿ ಶಾಸಕ ಕೆ.ವೆಂಕಟೇಶ್ ತಿಳಿಸಿದರು.

ತಾಲೂಕಿನ ಪಂಚವಳ್ಳಿಯಲ್ಲಿ ಮಾಲಂಗಿ ಕಿರನಲ್ಲಿ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಹಾಸನ ಟಿಕೆಟ್‌ಗಾಗಿ ದೇವೇಗೌಡರ ಮನೆಯಲ್ಲೇ ಕಚ್ಚಾಟ ನಡೆಯುತ್ತಿದೆ. ಇದನ್ನು ಇಡೀ ರಾಜ್ಯದ ಜನತೆ ಗಮನಿಸುತ್ತಿದೆ. ಇವರಿಗೆ ರಾಜ್ಯದ ಜನತೆ ಹಿತ ಮುಖ್ಯವಲ್ಲ, ತಮ್ಮ ಕುಟುಂಬದ ಹಿತವೇ ಮುಖ್ಯ. ಸ್ವಂತ ಬಲದ ಮೇಲೆ ಮುಖ್ಯಮಂತ್ರಿಯಾಗುವ ಶಕ್ತಿ ಇಲ್ಲದಿದ್ದರೂ, ಚುನಾವಣೆಯಲ್ಲಿ 15 ರಿಂದ 20 ಸ್ಥಾನ ಗೆದ್ದು, ಯಾರೇ ಕರೆದರೂ ಅವರೊಂದಿಗೆ ಮೈತ್ರಿ ಮಾಡಿಕೊಳ್ಳುವ ಜೆಡಿಎಸ್ ನಾಯಕರಿಗೆ ಸೈದ್ಧಾಂತಿಕ ನಿಲುವೇನಾದರೂ ಇದೆಯಾ. ರಾಜ್ಯಕ್ಕೆ ಇಂತಹವರ ಅವಶ್ಯಕತೆ ಇದೆಯಾ ಎಂದು ಪ್ರಶ್ನಿಸಿದ ವೆಂಕಟೇಶ್, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಬೆಂಬಲಿಸಬಾರದು ಎಂದರು.

ಪ್ರಧಾನಿ ಮೋದಿ ಭಾಷಣದಲ್ಲಿ ದೊಡ್ಡ ದೊಡ್ಡ ಮಾತನಾಡುತ್ತಾರೆ ಆದರೆ ಬಡವರಿಗೆ ದಿನಬಳಕೆಗೆ ಅಲ್ಲದ್ಯಾ ತರಿಗೆ ಇವರ ಕೊಡುಗೆ ಏನೆಂಬುದನ್ನು ಜನತೆ ಅರಿಯಬೇಕು ಬಿಜೆಪಿ ಬಡವರ ಪಕ್ಷವಲ್ಲ. ಅಂಬಾನಿ, ಅದಾನಿ ಪಕ್ಷ ಎಂದು ಟೀಕಿಸಿದ ಅವರು ದೇಶದಲ್ಲಿ ಬಡವರು, ಅಲ್ಪಸಂಖ್ಯಾತರು, ದೀನ ದಲಿತರ ಬಗ್ಗೆ ಕಾಳಜಿ ಇರುವ ಪಕ್ಷವಿದ್ದರೆ ಅದು ಕಾಂಗ್ರೆಸ್ ಮಾತ್ರ ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಪ್ರತಿಯೊಬ್ಬರೂ ಶ್ರಮಿಸುವಂತೆ ಮನವಿ ಮಾಡಿದರು.

ಕಳೆದ ಚುನಾವಣೆಯಲ್ಲಿ ನಾನು ಸೋಲುತ್ತೇನೆಂದು ಅಂದುಕೊಂಡಿರಲಿಲ್ಲ. ಆದರೆ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಸ್ವಲ್ಪ ಮೈಮರೆತಿದ್ದರಿಂದ ಸೋಲಾಯಿತು. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿ ಎಂದರು. ಪ್ರತಿಯೊಂದು ಕಾಮಗಾರಿಗೂ 10% ಕಮಿಷನ್ ಇಲ್ಲದೇ ಗುದ್ದಲಿ ಪೂಜೆ ಮಾಡದ ಶಾಸಕ ಮಹದೇವ್, ಒಂದೊಂದು ರಸ್ತೆ ಕಾಮಗಾರಿಗೂ ಐದ್ಯೆದು ಬಾರಿ ಗುದ್ದಲಿ ಪೂಜೆ ಮಾಡಿ ಪ್ರಚಾರ ಗಿಟ್ಟಿಸಿಕೊಂಡು ರಸ್ತೆ, ಮೋರಿ ಕೆಲಸ ಮಾಡುವುದೇ ಅಭಿವೃದ್ಧಿ ಮಂತ್ರ ಎಂದು ವೇದಿಕೆಯಲ್ಲಿ ಬೊಗಳೆ ಬಿಡುವ ಈತನ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯ ನಡೆದಿದೆಯೋ ಅಥವಾ ನನ್ನ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿ ನಡೆದಿದೆಯೋ ಎಂಬುದರ ಬಗ್ಗೆ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಮಾಜಿ ಮಂತ್ರಿ ಚೆನ್ನಬಸಪ್ಪನವರ ನಂತರ ತಾಲೂಕಿನ ಅಭಿವೃದ್ಧಿ ಮಾಡಿರುವ ಏಕೈಕ ಶಾಸಕರಿದ್ದರೆ ಅದು ನಾನೇ. ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆ, 100 ಹಾಸಿಗೆಗಳ ಆಸ್ಪತ್ರೆ, ಐಟಿಐ ಕಾಲೇಜು, ಫೈರ್ ಸ್ಟೇಷನ್, ಬಸ್ ಡಿಪೋ, ಪ್ರಥಮ ದರ್ಜೆ ಕಾಲೇಜು, ಸಬ್‌ರಿಜಿಸ್ಟರ್ ಆಫೀಸ್ ಸೇರಿದಂತೆ ತಾಲೂಕಿನ 150 ಕೆರೆ ತುಂಬಿಸುವ ಯೋಜನೆಯನ್ನು ಅವಧಿಯಲ್ಲಿ ಆಗಿದ್ದು, ಈ ಬಗ್ಗೆ ಚರ್ಚೆಗೆ ಸದಾ ಸಿದ್ಧ ಎಂದರು.

ಈ ವೇಳೆ ಮುಖಂಡರಾದ ಹೆಚ್.ಡಿ.ಗಣೇಶ್, ಈರಯ್ಯ, ತಮ್ಮಣ್ಣಯ್ಯ, ಹಿರಿಯ ವಕೀಲ ಬಿ.ವಿ.ಜವರೇಗೌಡ, ಬಿ.ಎನ್.ಕರಿಗೌಡ ಮಾತನಾಡಿದರು. ಮುಖಂಡರಾದ ಲಕ್ಷ್ಮಣಗೌಡ, ಗೋವಿಂದರಾಜ್, ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಸುದೀಶ್, ಮಹದೇವ್, ನಿತಿನ್, ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ದೂರ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಪುಟ್ಟಮಾದಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಉಪಾಧ್ಯಕ್ಷ ಡಿ.ಮಹದೇವಸ್ವಾಮಿ, ಸದಸ್ಯರಾದ ಡಿ.ಎ.ಮಹದೇವಸ್ವಾಮಿ, ಶಿವಮಲ್ಲಪ್ಪ, ಪುಟ್ಟದೇವಮ್ಮ, ಸವಿತಾ, ವೆಂಕಟರಮಣಶೆಟ್ಟಿ, ಮಹೇಶ್, ಮಹದೇವಮ್ಮ, ರಾಜಮ್ಮ, ಜರೀನಾ ತಾಜ್, ಎಪಿಎಂಸಿ ಸದಸ್ಯ ಎಂ.ನಾಗರಾಜು, ಮುಖಂಡರಾದ ನಿಂಗರಾಜು, ಮಂಜುನಾಥ್, ಮಹದೇವಸ್ವಾಮಿ ಇನ್ನಿತರರಿದ್ದರು.

## ಕಾಡಾನೆ ದಾಳಿ: ರೈತರ ಫಸಲು ನಾಶ

ಮಲ್ಕುಂಡಿ, ಫೆ.21– ಕಾಡಾನೆ ದಾಳಿಗೆ ರೈತರ ಫಸಲು ಸಂಪೂರ್ಣ ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ಹಾಡ್ಯ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ನಡೆದಿದೆ.

ಗ್ರಾಮದ ಉಮೇಶ್ ಎಂಬುವರ ಜಮೀನಿಗೆ ನುಗ್ಗಿದ ಕಾಡಾನೆಗಳು 2 ಎಕರೆ ಜಮೀನಿನಲ್ಲಿ ಬೆಳೆಯಲಾಗಿದ್ದ ಮುಸುಕಿನ ಜೋಳವನ್ನು ತಿಂದು, ಸಂಪೂರ್ಣ ನಾಶಗೊಳಿಸಿ ಅಲ್ಲೆ ಬೀಡು ಬಿಟ್ಟಿದ್ದವು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪಟಾಕಿ ಸಿಡಿಸಿ ಕಾಡಾನೆಗಳನ್ನು ಕಾಡಿಗೆ ಓಡಿಸಲು ಹರಸಾಹಸಪಟ್ಟರೂ, ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ರೈತರು ಜಮೀನಿನಲ್ಲಿ ಆತಂಕಕ್ಕೊಳಗಾಗಿದ್ದಾರೆ.

ರೈತ ಉಮೇಶ್ ಮಾತನಾಡಿ, ಹಗಲು ರಾತ್ರಿ ಎನ್ನದೇ ಸಾಲಸೋಲ ಮಾಡಿ ಬೆಳೆದ ಫಸಲು ಕಾಡುಪ್ರಾಣಿಗಳ ಹಾವಳಿಯಿಂದ ನಾಶವಾಗಿದೆ. ಹೀಗಾದರೇ ಸಾಲ ತೀರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದಿಂದ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ಆಗ್ರಹಿಸಿದರು. ಅರಣ್ಯಾಧಿಕಾರಿ ಮಂಜುನಾಥ್ ಮಾತನಾಡಿ, ಕಾಡಾನೆಗಳು ಆಹಾರ ಹುಡುಕುತ್ತಾ ರೈತರ ಜಮೀನಿಗೆ ಲಗ್ಗೆ ಹಾಕುತ್ತಿವೆ. ರೈತರು ಆತಂಕಕ್ಕೆ ಒಳಗಾಗಬಾರದು. ನಷ್ಟಕ್ಕೊಳಗಾಗಿರುವ ರೈತನಿಗೆ ಸೂಕ್ತ ಪರಿಹಾರ ನೀಡಲಾಗುವುದು. ಅಲ್ಲದೇ ಜಮೀನಿನಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಸಂಜೆ ನಂತರ ಓಡಿಸಲಾಗುವುದು ಎಂದು ಭರವಸೆ ನೀಡಿದರು.


## ತಂಬಾಕು ಬೆಲೆ ಕುಸಿತ ಖಂಡಿಸಿ ಪ್ರತಿಭಟನೆ



ಹುಣಸೂರು, ಫೆ.21– ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಕಳೆದ ಒಂದು ವಾರದಿಂದ ನಿತ್ಯ ಬೆಲೆ ಕುಸಿತವಾಗುತ್ತಿರುವುದನ್ನು ಖಂಡಿಸಿ ತಾಲೂಕು ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಂಬಾಕು ಹರಾಜು ಪ್ರಕ್ರಿಯೆಯಲ್ಲಿ ಕಳೆದ ಒಂದು ವಾರದಿಂದ ನಿತ್ಯ ಕೆಜಿಗೆ 5 ರಿಂದ 30 ರೂ.ವರೆಗೆ ಕುಸಿತವಾಗಿದೆ. ಇದರಿಂದ ಬೇಸತ್ತ ರೈತರು ತಂಬಾಕು ಮಾರುಕಟ್ಟೆಯಲ್ಲಿ ತಂಬಾಕು ಮಾರಾಟ ತಡೆದು ಪ್ರತಿಭಟನೆ ನಡೆಸಿ, ತಂಬಾಕು ಮಂಡಳಿ ಮತ್ತು ಕಂಪನಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ರಾಮೇಗೌಡ, ಸತೀಶ, ಶ್ರೀಧರ, ಕಪನಯ್ಯ, ಚಂದ್ರು ಹಾಗೂ ನೂರಾರು ರೈತರು ಇದ್ದರು.



ಸರಗೂರು ತಾಲೂಕಿನ ನಂಜೀಪುರದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ರಥೋತ್ಸವ ಮತ್ತು ಕೊಂಡೋತ್ಸವ ಅದ್ಧೂರಿಯಾಗಿ ನೆರವೇರಿತು. ಈ ವೇಳೆ ಗ್ರಾಮದ ಗೌಡಿಕೆ ಶಿವಮಲ್ಲಪ್ಪ, ಶಿವರಾಜಪ್ಪ, ಮುಖಂಡರಾದ ಪ್ರಭುಸ್ವಾಮಿ, ಗುರುಸ್ವಾಮಿ, ಎನ್.ಪಿ.ನಾಗರಾಜಪ್ಪ, ಎನ್.ಪಿ.ಶಿವಣ್ಣ, ಶಿವಕುಮಾರ್, ಮಹೇಶ್, ಮಹದೇವಪ್ಪ, ಸತೀಶ್ ಹಾಗೂ ಯುವಕ ಸಂಘದವರು, ಗ್ರಾಮಸ್ಥರು ಇದ್ದರು.

## ಮಾದಿಗ ಜನಾಂಗದ ಬಾಲರಾಜ್‌ಗೆ ಬಿಜೆಪಿ ಟಿಕೆಟ್ ನೀಡಿ

### ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪಗೆ ಮನವಿ



ತಿ.ನರಸೀಪುರ,ಫೆ.21–ಮುಂಬರುವ ಚುನಾವಣೆಯ ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ಆದಿದ್ರಾವಿಡ ಮಾದಿಗ ಜನಾಂಗದ ಯುವ ಮುಖಂಡ ಬಾಲರಾಜ್ ಅವರಿಗೆ ನೀಡುವಂತೆ ಮಾದಿಗ ಸಂಘದ ಸದಸ್ಯರು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಮಾಜಿ ಸಿಎಂ ಹಾಗೂ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಕ್ಷೇತ್ರದಲ್ಲಿ ಆದಿದ್ರಾವಿಡ ಮಾದಿಗ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಮಾದಿಗ ಜನಾಂಗದವರಿಗೆ ಈ ಬಾರಿ ಪಕ್ಷದ ಟಿಕೆಟ್ ನೀಡಿದರೆ ಅಭ್ಯರ್ಥಿ ಗೆಲುವಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ. ಅಲ್ಲದೇ ಸ್ಥಳೀಯರಾಗಿರುವ ಬಾಲು ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದು, ಗೆಲ್ಲುವ ಸಾಧ್ಯತೆ ಇರುವುದರಿಂದ ಅವರಿಗೆ ಅವಕಾಶ ಕಲ್ಪಿಸಿ ಕೊಡುವಂತೆ ಸಮುದಾಯದ ಮುಖಂಡರು ಒತ್ತಾಯಿಸಿದರು. ಆದಿದ್ರಾವಿಡ ಟ್ರಸ್ಟ್ ಗೌರವಾಧ್ಯಕ್ಷ ಸಿ.ಎಂ.ರಾಮಯ್ಯ, ಎನ್.ರಾಜು, ಪಿ.ಮಂಜುನಾಥ್, ಶ್ರೀನಿವಾಸ್, ಬ್ಯಾಂಕ್ ರಂಗಣ್ಣ, ನಂಜಪ್ಪ, ಮಾದೇವ್, ವಿಜಯ್, ಭರತ್ ಮತ್ತಿತರರಿದ್ದರು.

## ಕೋಟೆಯಲ್ಲಿ ಸಚಿವ ಅಶ್ವಥ್ ನಾರಾಯಣ್ ವಿರುದ್ಧ ಪ್ರತಿಭಟನೆ



ಹೆಚ್.ಡಿ.ಕೋಟೆ, ಫೆ.21– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.


ಪಟ್ಟಣದ ಬಾಪೂಜಿ ವೃತ್ತದಿಂದ ಹೊರಟ ಪ್ರತಿಭಟನಾಕಾರರು, ಪ್ರಮುಖ ರಸ್ತೆಯಲ್ಲಿ ಸಂಚರಿಸಿ ತಾಲೂಕು ಆಡಳಿತಸೌಧದ ಎದುರು ಮಾನವ ಸರಪಳಿ ನಿರ್ಮಿಸಿ ಡಾ.ಅಶ್ವಥ್ ನಾರಾಯಣ್ ಪ್ರತಿಕೃತಿ ದಹಿಸಿ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂಜನಗೂಡು ಕಾಂಗ್ರೆಸ್ ಉಸ್ತುವಾರಿ ಹಿರೇಹಳ್ಳಿ ಸೋಮೇಶ್ ಮಾತನಾಡಿ, ಬಿಜೆಪಿಯವರು ಧರ್ಮಗಳ ನಡುವೆ ವೈಷಮ್ಯ ಬೆಳೆಸುತ್ತಾ, ಈಗ ಜಾತಿ ಜಾತಿ ನಡುವೆ ಎತ್ತಿ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಬಿಜೆಪಿಯವರು ಸಂಸ್ಕಾರ ಉಳ್ಳವರು, ದೇಶಾಭಿಮಾನ ಇರುವವರು ಎಂದು ಹೇಳಿಕೊಳ್ಳುತ್ತಾರೆ. ಆದರೆ ಅವರು ಸುಸಂಸ್ಕೃತರಲ್ಲದವರು ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆ ಸೇರಿದಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಪ್ರಜಾಧ್ವನಿ ಕಾರ್ಯಕ್ರಮದ ಮೂಲಕ ಪಕ್ಷ ಸಂಘಟನೆಗೊಂಡಿರುವುದನ್ನು ಸಹಿಸಲಾರದೆ ಸಚಿವರು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಇಲ್ಲಸಲ್ಲದ ಮಾತನಾಡುತ್ತಿದ್ದಾರೆ. ಆದರೆ ಮುಂಬರುವ ಚುನಾವಣೆಯಲ್ಲಿ ರಾಜ್ಯದ ಜನರು ಇವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ತಾಯಿ ನಾಗಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಬಿ.ವಿ.ಬಸವರಾಜು, ಮರಿದೇವಯ್ಯ, ಅಶೋಕ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಕೋಟೆ ಸರಗೂರು ಯೂತ್ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಶಿವರಾಜು, ಟೌನ್ ಅಧ್ಯಕ್ಷ ಪ್ರಕಾಶ್, ಮಹಿಳಾ ಘಟಕದ ಟೌನ್ ಅಧ್ಯಕ್ಷೆ ಸೌಮ್ಯ, ಜಿಪಂ ಮಾಜಿ ಸದಸ್ಯರಾದ ಭಾಗ್ಯಲಕ್ಷ್ಮಿ, ಬಿ.ವಿ.ಬಸವರಾಜ್, ಹೆಚ್.ಸಿ.ಮಂಜುನಾಥ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಬೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮ್, ಮುಖಂಡರಾದ ಮರಿದೇವಯ್ಯ, ಪ್ರದೀಪ್, ಪರಶಿವಮೂರ್ತಿ, ನಾಗರಾಜ್, ಕುಮಾರಗೌಡ, ಬಾಲಯ್ಯ ನಾಗೇಗೌಡ, ಕೆಂಡಗಣ್ಣಸ್ವಾಮಿ, ಗಣೇಶ್ ಆಚಾರ್, ಪ್ರಕಾಶ, ಸಿದ್ದರಾಮ, ಹೇಮಂತ, ಬೆಟ್ಟನಾಯ್ಕ, ಸುರೇಶ, ಬೈಪಾಸ್ ಮಂಜು, ಕಾಳಸ್ವಾಮಿ, ಪಿ.ನಾಗರಾಜು, ಚೆಲ್ಲ, ರಾಜೇಗೌಡ, ಅಶೋಕ್, ಚೆಲುವ, ರಾಜು ಇನ್ನಿತರರಿದ್ದರು.

## ತುರುಗನೂರು ಗ್ರಾಪಂಗೆ ದೇವರಾಜು ಅಧ್ಯಕ್ಷ



ತಿ.ನರಸೀಪುರ, ಫೆ21– ತಾಲೂಕಿನ ತುರುಗನೂರು ಗ್ರಾಪಂ ನೂತನ ಅಧ್ಯಕ್ಷರಾಗಿ ದೇವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಜಿ.ಎಲ್.ರಾಜೇಶ್ ಅವರನ್ನು ಅವಿಶ್ವಾಸ ನಿರ್ಣಯದ ಮೂಲಕ ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಲಾಗಿತ್ತು. ಅವರಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ದೇವರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಅಕ್ಷರ ದಾಸೋಹದ ನಿರ್ದೇಶಕ ಮದ್ದಾನಪ್ಪ ಘೋಷಿಸಿದರು.

ಸದಸ್ಯರಾದ ಟಿ.ಎಲ್.ಮಂಜುನಾಥ್, ಟಿ.ಎನ್.ಪುಷ್ಪ, ಟಿ.ವಿ.ಚಂದ್ರೇಗೌಡ, ಬಿ.ಎನ್.ನಯನ, ನಾಗರತ್ನಮ್ಮ, ರಾಜೇಶ್, ಕೃಷ್ಣ, ಸಿ.ರಾಣಿ ಚುನಾವಣೆ ಸಭೆಯಲ್ಲಿ ಹಾಜರಿದ್ದು, ಅಧ್ಯಕ್ಷರ ಅವಿರೋಧ ಆಯ್ಕೆಗೆ ಅನುಮೋದನೆ ನೀಡಿದರು. ಪುಟ್ಟಲಕ್ಷ್ಮಮ್ಮ, ಲಕ್ಷ್ಮಮ್ಮ, ಮಧು, ಟಿ.ಆರ್.ಬಸವರಾಜು ಚುನಾವಣೆ ಸಭೆಗೆ ಗೈರಾಗಿದ್ದರು. ಅವಿರೋಧ ಆಯ್ಕೆಯಾಗುತ್ತಿದ್ದಂತೆ ನೆರೆದಿದ್ದ ದೇವರಾಜು ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಬೃಂದಾ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ನೂತನ ಅಧ್ಯಕ್ಷ ದೇವರಾಜು ಮಾತನಾಡಿ, ಗ್ರಾಪಂ ವ್ಯಾಪ್ತಿಯ ತುರುಗನೂರು, ಗೊರವನಹಳ್ಳಿ ಸೇರಿದಂತೆ ಮತ್ತಿತರ ಗ್ರಾಮಗಳಲ್ಲಿ ಕುಡಿಯುವ ನೀರು, ವಿದ್ಯುತ್ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು. ಪಂಚಾಯ್ತಿಗೆ ಹೆಚ್ಚಿನ ಅನುದಾನ ತರಲು ಹಿರಿಯ ಮುಖಂಡರ ಮಾರ್ಗದರ್ಶನದಲ್ಲಿ ಸಂಬಂಧಿಸಿದ ಇಲಾಖೆ ಸಂಪರ್ಕಿಸಿ ಗ್ರಾಪಂ ಅನ್ನು ಮಾದರಿ ಮಾಡಲು ಶ್ರಮಿಸಲಾಗುವುದು ಎಂದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಬೀಡನಹಳ್ಳಿ ಕೃಷ್ಣೇಗೌಡ, ಮಾಜಿ ಸದಸ್ಯ ಅಶೋಕ್, ಪುರಸಭಾ ಸದಸ್ಯ ಮೂರ್ತಿ, ಪಿಡಿಓ ಗಾಯತ್ರಿ, ಎಸ್‌ಡಿಎ ಕಿರಣ್ ಕುಮಾರ್ ಸೇರಿದಂತೆ ಮತ್ತಿತರರಿದ್ದರು.

## ಫೆ.24ರಿಂದ ಶ್ರೀ ಆಂಜನೇಯಸ್ವಾಮಿ–ಜಮಾಲ್ ಬೀಬಿ ಜಾತ್ರೆ



ಹುಣಸೂರು, ಫೆ.21– ತಾಲೂಕಿನ ರತ್ನಪುರಿಯಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆ ಸಾರುವ ಶ್ರೀ ಆಂಜನೇಯಸ್ವಾಮಿ ಹಾಗೂ ಜಮಾಲ್ ಬೀಬಿಮಾ ಅವರ 59ನೇ ಜಾತ್ರಾ ಮಹೋತ್ಸವ ಫೆ.24ರಿಂದ ಫೆ.27 ರವರೆಗೆ ನಡೆಯಲಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷ ಆರ್.ಪ್ರಭಾಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಕೋವಿಡ್ ಹಿನ್ನೆಲೆಯಲ್ಲಿ 2 ವರ್ಷಗಳಿಂದ ಜಾತ್ರೆಯನ್ನು ವಿಜೃಂಭಣೆಯಿಂದ ನಡೆಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.

ಫೆ.24ರಂದು ಜಾತ್ರೆ ಮಹೋತ್ಸವವನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸುವರು. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಪ್ರತಾಪ್‌ಸಿಂಹ, ಜಿ.ಡಿ.ಹರೀಶ್‌ಗೌಡ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಅಂದು ಮುಂಜಾನೆ ಆಂಜನೇಯಸ್ವಾಮಿಗೆ ಹೋಮ, ಹವನ, ಮಹಾಭಿಷೇಕ ನಡೆಯಲಿದ್ದು, ಅದೇ ರೀತಿ ಫೆ25 ರಂದು ಬೆಳಗ್ಗೆ 6 ಗಂಟೆಗೆ ಆಂಜನೇಯಸ್ವಾಮಿಗೆ ಮಹಾ ಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6 ಗಂಟೆಗೆ ಆಂಜನೇಯಸ್ವಾಮಿ ಪಲ್ಲಕ್ಕಿ ಉತ್ಸವ ಹಾಗೂ ವಿವಿಧ ಜಾನಪದ ಕಲಾ ತಂಡದೊಂದಿಗೆ ಜಾತ್ರಾ ಮೆರವಣಿಗೆ ನಡೆಯಲಿದೆ. ಫೆ.26 ರಂದು ರಾತ್ರಿ 7ಕ್ಕೆ ಜಮಾಲ್ ಬೀಬಿಮಾ ಉರುಸ್ ಗಂಧೋತ್ಸವ ನಡೆಯಲಿದೆ.

ಫೆ.27ರಂದು ಜಾತ್ರೆಯಲ್ಲಿ ಭಾಗವಹಿಸುವ ಉತ್ತಮ ರಾಸುಗಳಿಗೆ ಜಾತ್ರಾ ಸಮಿತಿಯಿಂದ ನಗದು ಬಹುಮಾನ ವಿತರಿಸಲಾಗುವುದು.

**ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ:** ಜಾತ್ರೆಅಂಗವಾಗಿ ಹೊನಲು ಬೆಳಕಿನ ಪುರುಷರ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಆಸಕ್ತರು ಸಾವಿರ ರೂ. ಪ್ರವೇಶ ಶುಲ್ಕ ನೀಡಿ ಫೆ.23ರ ಸಂಜೆ 7 ಗಂಟೆಯೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ವಿಜೇತರಿಗೆ ಪ್ರಥಮ 20 ಸಾವಿರ, ದ್ವಿತೀಯ 10 ಸಾವಿರ, ತೃತೀಯ 5 ಸಾವಿರ ರೂ. ಬಹುಮಾನದ ಜೊತೆಗೆ ಟ್ರೋಫಿ ನೀಡಲಾಗುವುದು.

**ರಾಜ್ಯ ಮಟ್ಟದ ಪುರುಷರ ಬಘನ್ ಕಬಡ್ಡಿ ಪಂದ್ಯಾವಳಿ:** ಜಾತ್ರೆ ಅಂಗವಾಗಿ ರಾಜ್ಯ ಮಟ್ಟದ ಪುರುಷರ ಬಘನ್ ಕಬಡ್ಡಿ ಪಂದ್ಯಾವಳಿ (ಮ್ಯಾಟ್ ಕಬಡ್ಡಿ) ಆಯೋಜಿಸಲಾಗಿದ್ದು, ಸಮವಸ್ತ್ರ ಕಡ್ಡಾಯವಾಗಿರುತ್ತದೆ. ಭಾಗವಹಿಸುವವರು 2 ಸಾವಿರ ಶುಲ್ಕ ನೀಡಿ ಫೆ24ರ ಸಂಜೆ 7ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ವಿಜೇತರಿಗೆ ಪ್ರಥಮ 55,555 ಸಾವಿರ ರೂ., ದ್ವಿತೀಯ 33,333 ಸಾವಿರ ರೂ., ತೃತೀಯ 11,111 ರೂ., ನಾಲ್ಕನೇ ಸ್ಥಾನಕ್ಕೆ 5555 ರೂ. ಬಹುಮಾನದ ಜೊತೆಗೆ ಟ್ರೋಫಿ ವಿತರಿಸಲಾಗುವುದು. ಆಟಗಾರರಿಗೆ ಊಟ ಮತ್ತು ವಸತಿ ಇರುತ್ತದೆ. ಹೆಚ್ಚಿನ ಮಾಹಿತಿಗೆ 9008022679, 9900564659 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಬಿ. ಸುರೇಂದ್ರ, ಸಹ ಕಾರ್ಯ ದರ್ಶಿಗಳಾದ ಸುದರ್ಶನ್ ಸಿಂಗ್, ರಾಜು, ಜಮಾಲ್ ಬೀಬಿಮಾನವರ ಉರುಸ್ ಸಮಿತಿ ಸದಸ್ಯ ಆಜ್ಗರ್‌ಪಾಷ ಭಾಗವಹಿಸಿದ್ದರು.




## ದುಷ್ಕರ್ಮಿಗಳಿಂದ ಸಿಹಿ ತಿನಿಸು, ಕಡ್ಲೆಪುರಿ ಅಂಗಡಿಗಳಿಗೆ ಬೆಂಕಿ

### ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಭಸ್ಮ



ನಂಜನಗೂಡು, ಫೆ.21– ನಗರದ ಚಿನಿವಾರ ಕಟ್ಟೆ ಬೀದಿಯಲ್ಲಿರುವ ಸಿಹಿ ತಿನಿಸು ಮತ್ತು ಕಡ್ಲೆಪುರಿ ಅಂಗಡಿಗಳಿಗೆ ಸೋಮವಾರ ಮಧ್ಯರಾತ್ರಿ ದುಷ್ಕರ್ಮಿಗಳು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ. ಸಂತೋಷ್ ಮತ್ತು ಯೋಗೇಶ್ ಎಂಬುವರಿಗೆ ಸೇರಿದ ಸಿಹಿ ತಿನಿಸುಗಳ ಅಂಗಡಿಗೆ ಸೋಮವಾರ ತಡರಾತ್ರಿ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದು, ಬೆಂಕಿ ಜ್ವಾಲೆ ಕಂಡ ಸ್ಥಳೀಯರು ಮಾಲೀಕರಿಗೆ ವಿಷಯ ತಿಳಿಸಿದ್ದಾರೆ. ಈ ವೇಳೆ ಅಗ್ನಿಶಾಮಕ ಇಲಾಖೆಗೆ ಫೋನ್ ಮಾಡಿ ವಿಚಾರ ತಿಳಿಸಿದರೂ, ಸ್ಥಳಕ್ಕೆ ಅಗ್ನಿಶಾಮಕ ಅಧಿಕಾರಿಗಳು ಬಾರದ ಹಿನ್ನೆಲೆಯಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ಅಂಗಡಿಯಲ್ಲಿದ್ದ ಸಿಹಿ ತಿನಿಸುಗಳು, ಕಡಲೆಪುರಿ ಸೇರಿದಂತೆ ವಿವಿಧ ವಸ್ತುಗಳು ಸುಟ್ಟು ಭಸ್ಮವಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.

## ಕುರುಚಲು ಅರಣ್ಯ ಪ್ರದೇಶ ಬೆಂಕಿಗೆ ಆಹುತಿ



ನಂಜನಗೂಡು, ಫೆ.21– ದುಷ್ಕರ್ಮಿಗಳು ಬೆಂಕಿ ಹಾಕಿದ ಪರಿಣಾಮ 40 ಎಕರೆ ಹುಲ್ಲುಗಾವಲು ಕುರುಚಲು ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿರುವ ಘಟನೆ ತಾಲೂಕಿನ ಕೋಣನೂರು ಗ್ರಾಮದ ಕಿರು ಅರಣ್ಯ ಪ್ರದೇಶದಲ್ಲಿ ಸೋಮವಾರ ರಾತ್ರಿ ನಡೆದಿದೆ.


ದುಷ್ಕರ್ಮಿಗಳು ಅರಣ್ಯ ಪ್ರದೇಶದ ಹುಲ್ಲುಗಾವಲಿಗೆ ಬೆಂಕಿ ಹಚ್ಚಿದ್ದು, ಬೆಂಕಿ ಜ್ವಾಲೆ ಅರಣ್ಯ ಪ್ರದೇಶಕ್ಕೆ ವ್ಯಾಪಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಂಜನಗೂಡು ಉಪ ವಿಭಾಗದ ಅರಣ್ಯಾಧಿಕಾರಿ ಕಿರಣ್ ಮಾತನಾಡಿ, ಯಾರೋ ದಾರಿಹೋಕರು ಅರಣ್ಯ ಪ್ರದೇಶಕ್ಕೆ ಬೆಂಕಿ ಹಚ್ಚಿರುವ ಕಾರಣ 40 ಎಕರೆ ಹುಲ್ಲುಗಾವಲು ಪ್ರದೇಶ ಸುಟ್ಟು ಹೋಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಗ್ರಾಮಸ್ಥರ ಸಹಾಯದಿಂದ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

**6ನೇ ವರ್ಷದ ಚಿರಸ್ಮರಣೆ**

**ಶ್ರೀ ಹೆಚ್.ಎನ್. ಮಹಾದೇವಯ್ಯ**

ನಿವೃತ್ತ ರಾಜಸ್ವ ನಿರೀಕ್ಷಕರು, ಕಂದಾಯ ಇಲಾಖೆ



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ : ಶ್ರೀಮತಿ ಚಂದ್ರಮ್ಮ, ಮಕ್ಕಳು, ಮತ್ತು ಮೊಮ್ಮಕ್ಕಳು

ಹಾಗೂ ಸೋಮಶೇಖರ್, ಭಾಗ್ಯ, ಶ್ರಾವ್ಯ, ಮಕ್ಷಿತ್ ಮೌರ್ಯ

**15ನೇ ವರ್ಷದ ಸವಿನೆನಪು**



ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರು ಸದಾ ನಿಮ್ಮ ನನೆಪಿನಲ್ಲಿರುವ

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು

**ಮುದ್ದೇಗೌಡ್ರು**

22.02.2008








**5ನೇ ವರ್ಷದ ಸವಿನೆನಪು**



**ಎಂ.ಎನ್. ನಾರಾಯಣ**

(ಸತ್ಯನಾರಾಯಣ ಮಸಾಲ ಸ್ಟೋರ್ಸ್)

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರು ಸದಾ ನಿಮ್ಮ ನನೆಪಿನಲ್ಲಿರುವ

ದುಃಖತಪ್ತರು: ಪತ್ನಿ ವಿಜಯಲಕ್ಷ್ಮಿ, ಮಕ್ಕಳಾದ ಎಂ.ಎನ್ ಹೇಮಂತ್ ಕುಮಾರ್ ಮತ್ತು ಸಹೋದರರು